UNIVERSAL
LIBRARY
OU_198285
UNIVERSAL
LIBRARY

ಜನತಾಸಾಹಿತ್ಯ

# ಸಮತಾವಾದ

★

ಮೂಲ ಲೇಖಕರು:

ಎಮಿಲ್ ಬರ್ನ್ಸ್

★

ಅನುವಾದ:

ಕುಳುಕುಂದ ಶಿವರಾಯ

ಪ್ರಕಾಶಕರು:

ಜನತಾ ಸಾಹಿತ್ಯ

೧೨೧, ಸುಲ್ತಾನ್‌ಪೇಟೆ, ಬೆಂಗಳೂರು ನಗರ

ಬೆಲೆ ೧ ರೂಪಾಯಿ

ಮೊದಲ ಮುದ್ರಣ ೧೯೪೫ ಡಿಸೆಂಬರ್

## ವಿಷಯ ಸೂಚಿ


| | | |
|---|---|---|
| ೧ | ಶಾಸ್ತ್ರೀಯ ದೃಷ್ಟಿಯಲ್ಲಿ ಈ ಲೋಕ | ೧ |
| ೨ | ಸಾಮಾಜಿಕ ಬೆಳವಣಿಗೆಯ ನಿಯಮಗಳು | ೩ |
| ೩ | ಭಂಡವಳಶಾಹಿ ಸಮಾಜ | ೧೮ |
| ೪ | ಭಂಡವಳಶಾಹಿಯ ಸಾಮ್ರಾಜ್ಯವಾದಿ ಘಟ್ಟ | ೨೩ |
| ೫ | ಈ ಕಾಲದ ವರ್ಗ ಸಮರಗಳು | ೪೬ |
| ೬ | ಸಾಮ್ಯವಾದಿ ಸಮಾಜ | ೫೮ |
| ೭ | ಪ್ರಕೃತಿಯ ಬಗ್ಗೆ ಮಾರ್ಕ್ಸ್‌ವಾದಿ ದೃಷ್ಟಿಕೋನ | ೭೨ |
| ೮ | ಕಾರ್ಯಾಚರಣೆಗೊಂದು ಕೈಪಿಡಿ | ೮೦ |

# ಪ ರಿ ಚ ಯ

★ ಮಾರ್ಕ್ಸ್‌ವಾದವೆಂದರೇನು? ಲೋಕದ ಬಗ್ಗೆ ಮಾರ್ಕ್ಸ್‌ವಾದಿ ದೃಷ್ಟಿಕೋನವೆಂದರೇನು? ಎಂಬುದನ್ನು ಸರಳವಾಗಿ ತಿಳಿಸುವ ಪುಸ್ತಕ ಇದು. ಇಂಗ್ಲೆಂಡಿನ ಪ್ರಮುಖ ಮಾರ್ಕ್ಸ್‌ವಾದಿಗಳಲ್ಲೊಬ್ಬರಾದ ಎಮಿಲ್ ಬರ್ನ್ಸ್ ಬರೆದ 'What is Marxism?' ಎಂಬ ಪುಸ್ತಕ ಈ ವರ್ಷ ಫೆಬ್ರುವರಿಯಲ್ಲಿ ಮೊತ್ತ ಮೊದಲ ಸಲ ಈ ದೇಶದಲ್ಲಿ ಪ್ರಕಟಿಸಲ್ಪಟ್ಟಿತು. ಈ ಪುಸ್ತಕ ಅದರ ಅನುವಾದ. ಪುಟ ಸಂಖ್ಯೆಯನ್ನು ಇಳಿಸುವುದಕ್ಕಾಗಿ ಸಾಧ್ಯವೆಂದು ತೋರಿದ ಕಡೆ ವಿಷಯವನ್ನು ಸಂಗ್ರಹವಾಗಿ ಕೊಟ್ಟಿದ್ದೇವೆ. ಮೊದಲೇ ಬರಬೇಕಾಗಿದ್ದ ಈ ಪುಸ್ತಕದ ಪ್ರಕಟಣೆ ನಮ್ಮಿಂದ ತಡವಾಗಿ ಆಗಿರುವುದಕ್ಕೆ ವಿಷಾದಿಸುತ್ತೇವೆ.

★ ಮಾರ್ಕ್ಸ್‌ವಾದವೆಂದು ಈ ಪುಸ್ತಕಕ್ಕೆ ಹೆಸರಿಡಬೇಕಾಗಿತ್ತು. ಆದರೆ ಸುಲಭವಾಗಿ ಅರ್ಥವಾಗಲೆಂದು ಸಮತಾವಾದವೆಂದು ಕರೆದಿದ್ದೇವೆ. ಮೊದಲು ಸಾಮ್ಯವಾದವನ್ನೂ [ ಸೋಶಿಯಲಿಸಂ ] ಅನಂತರ ಸಮತಾವಾದವನ್ನೂ [ ಕಮ್ಯೂನಿಸಂ ] ಸ್ಥಾಪಿಸುವುದು ಮಾರ್ಕ್ಸ್‌ವಾದದ ತಿಳಿವಳಿಕೆ ಮತ್ತು ಅದಕ್ಕನುಸಾರವಾದ ಕಾರ್ಯಾಚರಣೆಯಿಂದ ಮಾತ್ರ ಸಾಧ್ಯ.

★ ಕನ್ನಡದಲ್ಲಿ ಮಾರ್ಕ್ಸ್‌ವಾದಕ್ಕೆ ಸಂಬಂಧಿಸಿದ ಪುಸ್ತಕಗಳ ಅಭಾವ ಬಹಳವಿದೆ. ಅದನ್ನು ನಿವಾರಿಸಲು ಆಗಬೇಕಾದ ಯತ್ನಗಳಲ್ಲಿ ಇದೊಂದು ಹೆಜ್ಜೆ.

★ ಎರಡನೆ ಪುಟದಲ್ಲಿ ೨೩ನೆ ಸಾಲಿನಲ್ಲಿ 'ವೇದಾಂತ'ವೆಂಬ ಪದವಿದೆ–ಅದನ್ನು 'ತತ್ವ' ಎಂದು ತಿದ್ದಿ ಓದಬೇಕು.

—ಪ್ರಕಾಶಕರು

# ಕೆಲ ಪಾರಿಭಾಷಿಕ ಶಬ್ದಗಳು

| | |
|---|---|
| Theory | .... ಸಿದ್ಧಾಂತ |
| Class Struggle | .... ವರ್ಗಸಮರ |
| Wages | .... ಕೂಲಿ, ಮಜೂರಿ, ಜೀತ |
| Labourer | .. ಕೂಲಿಕಾರ, ಕಾರ್ಮಿಕ, ಮಜೂರಿ |
| Labour Power | .... ಶ್ರಮಶಕ್ತಿ |
| Capital | ... ಭಂಡವಳ, ಬಂಡವಾಳ |
| Capitalist | ... ಭಂಡವಳಗಾರ, ಬಂಡವಾಳಗಾರ |
| Exchange Value | .... ವಿನಿಮಯ ಬೆಲೆ |
| Surplus Value | .... ಉಳಿತಾಯ ಬೆಲೆ |
| Finance-capital | .... ನಿಧಿ–ಭಂಡವಳ |
| Monopoly | .... ಗುತ್ತಿಗೆ, ಸರ್ವಾಧಿಪತ್ಯ |
| Materialism | .... ಭೌತಿಕವಾದ |
| Dialectical Materialism | .... ದ್ವಂದ್ವಮಾನ ಭೌತಿಕವಾದ |
| Socialism | .... ಸಾಮ್ಯವಾದ |
| Communism | .... ಸಮತಾವಾದ |

೧

# ಶಾಸ್ತ್ರೀಯ ದೃಷ್ಟಿಯಲ್ಲಿ ಈ ಲೋಕ

ನಾವು ಜೀವಿಸುತ್ತಿರುವ ಈ ಲೋಕದ, ಅದರ ಒಂದು ಭಾಗವಾಗಿರುವ ಮಾನವ ಸಮಾಜದ, ಕುರಿತಾದ ಸಾಮಾನ್ಯ ಸಿದ್ಧಾಂತವೇ ಮಾರ್ಕ್ಸ್‌ವಾದ. ಕಾರ್ಲ್ ಮಾರ್ಕ್ಸ್‌ನ [೧೮೧೮–೧೮೮೩] ಹೆಸರಿನಿಂದ ಅದು ಮಾರ್ಕ್ಸ್‌ವಾದವಾಯಿತು. ಕಳೆದ ಶತಮಾನದ ಮಧ್ಯ ಮತ್ತು ಉತ್ತರಾರ್ಧದಲ್ಲಿ ಫ್ರೆಡರಿಕ್ ಎಂಗೆಲ್ಸ್‌ನ [೧೮೨೦–೧೮೯೫] ಜತೆಯಲ್ಲಿ ದುಡಿದು, ಮಾರ್ಕ್ಸ್ ಆ ಸಿದ್ಧಾಂತವನ್ನು ಕಲ್ಪಿಸಿದ.

ಈ ಸಮಾಜ ಹೀಗಿರುವುದೇಕೆ? ಅದು ಬದಲಾಗುವುದೇಕೆ? ಮಾನವ ಕೋಟಿಯ ಮುಂದಿನ ಬದಲಾವಣೆಗಳೇನು? ಎಂಬುದನ್ನು ಅವರು ಶೋಧಿಸ ಹೊರಟರು. ತಮ್ಮ ಅಭ್ಯಾಸದ ಫಲವಾಗಿ, ಹೊರ ಪ್ರಕೃತಿಯ ಬದಲಾವಣೆಗಳಂತೆಯೇ, ಈ ಬದಲಾವಣೆಗಳೂ ಆಕಸ್ಮಿಕವಾಗಿ ಆಗದೆ, ಕೆಲ ನಿಯಮಗಳಿಗೆ ಅನುಸಾರವಾಗಿ ಸಂಭವಿಸುತ್ತವೆ ಎಂಬ ತೀರ್ಮಾನಕ್ಕೆ ಅವರು ಬಂದರು. ಈ ಸಮಾಜವೇನೆಂಬುದರ ಬಗ್ಗೆ ಊಹೆ–ಕಲ್ಪನೆಗಳಿಗೆ ಅವಕಾಶವಿರುತ್ತಿತ್ತು. ಧಾರ್ಮಿಕ ಭಾವನೆ, ಕುಲ ಮತ್ತು ವ್ಯಕ್ತಿ ಪೂಜೆ, ವೈಯಕ್ತಿಕ ಇಷ್ಟ ಅಥವಾ ಒಣ ಕನಸು ಇವುಗಳಿಗೆ ಸಂಬಂಧಿಸಿ ಸಮಾಜವೆಂದರೇನೆಂದು ಚಿತ್ರಿಸುತಿದ್ದರು—ಈಗಲೂ ಚಿತ್ರಿಸುತ್ತಾರೆ. ಇದರ ಬದಲು, ಮನುಷ್ಯರ ನಿಜವಾದ ಅನುಭವಗಳಿಂದ, ಸಮಾಜವೆಂದರೇನೆಂದು ಶಾಸ್ತ್ರೀಯ ಸಿದ್ಧಾಂತವನ್ನು ಉಂಟುಮಾಡುವುದು ಅವರಿಬ್ಬರ ಶೋಧನೆಯಿಂದ ಸಾಧ್ಯವಾಗಿದೆ.

ಮಾರ್ಕ್ಸ್ ತಾನು ಜೀವಿಸುತ್ತಿದ್ದ ಸಮಾಜಕ್ಕೆ—ಪ್ರಧಾನವಾಗಿ ಭಂಡವಳಶಾಹಿ ಬ್ರಿಟನ್ನಿಗೆ—ತನ್ನ ಸಾಮಾನ್ಯ ವಿಚಾರವನ್ನು ಅನ್ವಯಿಸಿದ; ಭಂಡವಳಶಾಹಿಯ ಆರ್ಥಿಕ ಸಿದ್ಧಾಂತವನ್ನು ತಯಾರು ಮಾಡಿದ. ಆದರೆ ತನ್ನ ಆರ್ಥಿಕ ಸಿದ್ಧಾಂತಗಳನ್ನು ಚಾರಿತ್ರಿಕ ಮತ್ತು ಸಾಮಾಜಿಕ ಮತಗಳಿಂದ ಬೇರ್ಪಡಿಸುವುದು ಸಾಧ್ಯವಿಲ್ಲವೆಂದು ಆತ ಯಾವಾಗಲೂ ಸ್ಪಷ್ಟ

ಪಡಿಸುತ್ತಿದ್ದ. ಲಾಭ ಮತ್ತು ಕೂಲಿ [ಸಂಬಳ, ಮಜೂರಿ, ಜೀತ] ಇವನ್ನು ಬರೀ ಆರ್ಥಿಕ ಸಮಸ್ಯೆಗಳಾಗಿ ಒಂದು ಮಿತಿಯ ವರೆಗೆ ಅಭ್ಯಾಸಿಸಬಹುದು. ಮಾಲಿಕರನ್ನೂ ಕೂಲಿಕಾರರನ್ನೂ ತಿಳಿದುಕೊಂಡರೆ ಮಾತ್ರ ಲಾಭ ಮತ್ತು ಕೂಲಿಯ ಸಮಸ್ಯೆ ಅರ್ಥವಾಗುವುದು; ಬರೀ ಕಲ್ಪನೆಗಳ ಬದಲು ನಿಜ ಜೀವನವನ್ನು ಅಭ್ಯಾಸಿಸ ಹೊರಟ ಪ್ರತಿ ವಿದ್ಯಾರ್ಥಿಗೂ ಇದು ಗೊತ್ತಾಗುತ್ತದೆ. ಮಾಲಿಕರು ಮತ್ತು ಕೂಲಿಕಾರರನ್ನು ಅಭ್ಯಾಸಮಾಡಿದ ಅನಂತರ, ಅವರು ಜೀವಿಸುತ್ತಿರುವ ಚಾರಿತ್ರಿಕ ಘಟ್ಟವನ್ನು ತಿಳಿದುಕೊಳ್ಳಬೇಕಾಗುತ್ತದೆ.

ಸಮಾಜದ ಬೆಳವಣಿಗೆಯನ್ನು ಶಾಸ್ತ್ರೀಯ ದೃಷ್ಟಿಯಿಂದ ನೋಡುವುದು, ಎಲ್ಲಾ ಶಾಸ್ತ್ರಗಳಂತೆ ಅನುಭವದ ಮೇಲೆ, ಚರಿತ್ರೆಯ ಸತ್ಯ ಸಂಗತಿಗಳಮೇಲೆ, ನಮ್ಮ ಸುತ್ತಲಿನ ಲೋಕದ ಮೇಲೆ. ಆದುದರಿಂದ ಮಾರ್ಕ್ಸ್ವಾದ ಪರಿಪೂರ್ಣ ಸಿದ್ಧಾಂತವಲ್ಲ. ಇತಿಹಾಸವು ಪ್ರಗತಿಹೊಂದಿದಂತೆ, ಮನುಷ್ಯನ ಅನುಭವ ಹೆಚ್ಚಿದಂತೆ, ಮಾರ್ಕ್ಸ್ವಾದವೂ ಬೆಳೆಯುವುದು; ಹೊಸ ಸಂಗತಿಗಳಿಗೆ ಅದು ಅನ್ವಯಿಸಲ್ಪಡುವುದು. ಮಾರ್ಕ್ಸ್ ಮತ್ತು ಎಂಗೆಲ್ಸರ ಮರಣದ ಅನಂತರ ಆ ಸಿದ್ಧಾಂತವನ್ನು ಬೆಳೆಸಿದವನು ಲೆನಿನ್ [೧೮೭೦-೧೯೨೪] ಮತ್ತು ರಷ್ಯದಲ್ಲಿ ಸಮತಾವಾದಿ ಸಮಾಜವನ್ನು ಕಟ್ಟುವ ಆತನ ಕೆಲಸವನ್ನು ಮುಂದುವರಿಸಿದ ಸ್ಟಾಲಿನ್.

ಬಾಹ್ಯ ಪ್ರಪಂಚವನ್ನು ಬದಲಾಯಿಸಲು ಎಲ್ಲಾ ಶಾಸ್ತ್ರೀಯ ಜ್ಞಾನವನ್ನು ಉಪಯೋಗಿಸುವುದು ಹೇಗೆ ಸಾಧ್ಯವೋ ಹಾಗೆಯೇ, ಸಮಾಜವನ್ನು ಶಾಸ್ತ್ರೀಯವಾಗಿ ಅಭ್ಯಾಸಿಸಿ ಸಿಗುವ ಜ್ಞಾನವನ್ನು ಸಮಾಜವನ್ನೇ ಬದಲಾಯಿಸಲು ಉಪಯೋಗಿಸಬಹುದು. ಆದರೆ ಸಮಾಜದ ಚಲನವಲನಗಳನ್ನು ರೂಪಿಸುವ ಸಾಮಾನ್ಯ ನಿಯಮಗಳು ಬಾಹ್ಯ ಪ್ರಪಂಚದ ನಿಯಮಗಳ ರೂಪದಲ್ಲೇ ಇವೆ ಎಂಬುದೂ ಸ್ಪಷ್ಟ. ಸಾರ್ವತ್ರಿಕವಾಗಿ, ಮನುಷ್ಯರಿಗೂ ವಸ್ತುಗಳಿಗೂ, ಸರಿಹೋಗುವ ಈ ನಿಯಮಗಳೇ ಮಾರ್ಕ್ಸ್ ವೇದಾಂತ ಇಲ್ಲವೆ ಲೋಕದ ಬಗ್ಗೆ ಮಾರ್ಕ್ಸ್ ಮತ.

ಅತ್ಯಗತ್ಯವಿರುವ ಈಗಿನ ವಿಷಯಗಳ ಬಗ್ಗೆ ಮಾರ್ಕ್ಸ್ವಾದವನ್ನು ಮುಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ಅಸ್ಪಷ್ಟ ನೈತಿಕ ತತ್ವಗಳ ಮೇಲೆ ಅವಲಂಬಿಸಿದ್ದು ಎಂದುಕೊಂಡು ಮಾರ್ಕ್ಸ್ವಾದವನ್ನು ಯಾರೂ

ಒಪ್ಪಬೇಕಾಗಿಲ್ಲ. ಹಾಗೇನೂ ಅಲ್ಲ. ಅದು ನಿಜ–ಸತ್ಯವಾಗಿರುವುದ ರಿಂದಲೇ ಎಲ್ಲರಿಂದ 'ಸರಿ' ಎನ್ನಿಸುತ್ತಿದೆ. ಈ ವಿಷಯವನ್ನು ಪ್ರತಿಯೊ ಬ್ಬನೂ ಮೊದಲೇ ತಿಳಿದಿರುವುದು ಅಗತ್ಯ. ಸತ್ಯವಾಗಿರುವುದರಿಂದಲೇ ಅದನ್ನು, ಲೋಕದ ಮಾನವಕೋಟಿಯಲ್ಲಿ ಈ ದಿನ ಎಷ್ಟೋ ಮಂದಿ ಅನು ಭವಿಸುತ್ತಿರುವ ನರಳುವಿಕೆ–ಸಂಕಷ್ಟ ಎಂದೆಂದಿಗೂ ಇಲ್ಲದಂತೆ ಮಾಡಲು, ಮೇಲ್ಮಟ್ಟದ ಸಮಾಜದಲ್ಲಿ ಗಂಡಸರೂ, ಹೆಂಗಸರೂ ಪರಿಪೂರ್ಣತೆಯತ್ತ ಸಾಗುವಂತೆ ಮಾಡಲು, ಉಪಯೋಗಿಸಬಹುದು; ಉಪಯೋಗಿಸಬೇಕು.

## ೨

## ಸಾಮಾಜಿಕ ಬೆಳವಣಿಗೆಯ ನಿಯಮಗಳು

ಮನುಷ್ಯವರ್ಗದ ಚರಿತ್ರೆಯನ್ನು ತೆಗೆದುನೋಡಿ. ರಾಷ್ಟ್ರಗಳೊಳಗೆ ಜಗಳ, ಕೆಲ ಸಮ್ರಾಟರು, ಸೇನಾನಿಗಳು ಮತ್ತು ರಾಜಕಾರಣಿಗಳ ದಂಡ ಯಾತ್ರೆ-ಜೈತ್ರಯಾತ್ರೆ. ಇದೇ ಇರುವುದು. ಕೆಲವೊಮ್ಮೆ, 'ಮಹದಾಸೆ ಯಿಂದ ಪ್ರೇರಿತರಾಗಿ ರಾಜ್ಯಗಳನ್ನು ಗೆಲ್ಲಲು ಹೊರಟರು, ಅಥವಾ ತಮ್ಮ ನೈತಿಕ ಇಲ್ಲವೆ ಅನೈತಿಕ ದೃಷ್ಟಿಕೋನದಿಂದಾಗಿ ಅಂತಹ ಧೋರಣೆಯಿಂದ ಅವರು ವರ್ತಿಸಿದರು'—ಎನ್ನುವುದೂ ಉಂಟು. ಒಮ್ಮೊಮ್ಮೆ, 'ರಾಷ್ಟ್ರದ ಮಾನರಕ್ಷಣೆಗಾಗಿ ಧರ್ಮಸಂಬಂಧವಾಗಿ ಹೋರಾಡಿದರು'—ಎನ್ನುವುದೂ ಇಲ್ಲದಿಲ್ಲ.

ಚರಿತ್ರೆಯನ್ನು ಹಾಗೆ ವಿವರಿಸಿದರೆ ಸಾಲದು; ಮಾರ್ಕ್ಸ್‌ವಾದಿಗೆ ಅದರಿಂದ ತೃಪ್ತಿ ಇಲ್ಲ.

ಮೊದಲನೆಯದಾಗಿ, ಇತಿಹಾಸ ಶಾಸ್ತ್ರ ಜನತೆಯ ಬಗ್ಗೆ ಹೇಳಬೇಕು— ಎಂದು ಮಾರ್ಕ್ಸ್‌ವಾದವೆನ್ನುತ್ತದೆ. ವ್ಯಕ್ತಿ ತನ್ನೊಬ್ಬನಿಗಿಂತ ಹೆಚ್ಚು ಮಂದಿಯನ್ನು ಇಲ್ಲವೆ ಜನತೆಯ ಯಾವುದಾದರೊಂದು ಚಳುವಳಿಯನ್ನು ಪ್ರತಿನಿಧೀಕರಿಸಬೇಕು. ಆಗ ಮಾತ್ರ ಅವನಿಗೆ ಪ್ರಾಧಾನ್ಯ.

ಉದಾಹರಣೆಗಾಗಿ; ಇಂಗ್ಲೆಂಡಿನ ಕ್ರಾಮ್‌ವೆಲ್. ಆತನ ದೃಷ್ಟಿ ಕೋನ, ವೈಯಕ್ತಿಕವಾಗಿ ಆತ ಮಾಡಿದ್ದು—ಅದರಿಂದಲ್ಲ; ಹಳೆಯ

ಪದ್ಧತಿಗೆ ವಿರುದ್ಧವಾಗಿ ಇಂಗ್ಲಿಷ್ ಜನತೆಯ ಒಂದು ವಿಭಾಗ ಹೂಡಿದ ಆಂದೋಲನದಲ್ಲಿ ಪ್ರಮುಖ ಪಾತ್ರ ವಹಿಸಿದ್ದರಿಂದಲೇ ಆತ ಮುಖ್ಯ. ಆತನೂ ಆತನ ಚಳುವಳಿಯೂ ಜಮೀನ್ದಾರಿ–ಪಾಳೆಯಗಾರತನದ ದುರ್ಗವನ್ನು ಭೇದಿಸಿದುವು; ಭಂಡವಳಶಾಹಿ ವಿಸ್ತೃತವಾಗಿ ಬ್ರಿಟನಿನಲ್ಲಿ ಬೆಳೆಯಲು ಅವಕಾಶಮಾಡಿಕೊಟ್ಟುವು. ಮುಖ್ಯವಾದದ್ದು ಅವನು ಹೋರಾಡಿದ ಯುದ್ಧಗಳ ಅಂಕೆ-ಸಂಖ್ಯೆಯಲ್ಲ, ಧಾರ್ಮಿಕ ದೃಷ್ಟಿಕೋನವಲ್ಲ, ಕುಟಿಲ ರಾಜನೀತಿಯಿಲ್ಲ. ಬ್ರಿಟಿಷ್ ಉತ್ಪಾದನ ಮತ್ತು ವಿತರಣದ ಅಭಿವೃದ್ಧಿಯಲ್ಲಿ ಕ್ರಾಮ್‌ವೆಲ್‌ನ ಸ್ಥಾನವೇನಿತ್ತೆಂದು ತಿಳಿದುಕೊಳ್ಳುವುದು; ಆ ಕಾಲದಲ್ಲಿ ಬ್ರಿಟನಿನಲ್ಲಿ ಪಾಳೆಯಗಾರರ ಆಡಳಿತಕ್ಕಿದಿರಾಗಿ ಚಳುವಳಿ ಏಕೆ ನಡೆಯಿತೆಂಬುದನ್ನು ತಿಳಿಯುವುದು; ಆ ಕಾಲದಲ್ಲಿ ನಿಜಕ್ಕೂ ಉಂಟಾದ ಬದಲಾವಣೆಗಳನ್ನು ಅಭ್ಯಾಸ ಮಾಡುವುದು—ಇದು ಮುಖ್ಯ; ಇತಿಹಾಸದ ವಿಜ್ಞಾನಕ್ಕೆ ಇವುಗಳೇ ತಳಹದಿ. ಈ ಅಭ್ಯಾಸದಿಂದ ದೊರಕುವ ಜ್ಞಾನವನ್ನು ಉಪಯೋಗಿಸಿ, ಇತರ ಕಾಲಗಳ ಮತ್ತು ಜನತೆಯ ವಿಷಯವಾಗಿಯೂ ಅಭ್ಯಾಸ ಮಾಡಿ, ಸಾಮಾನ್ಯ ಸಿದ್ಧಾಂತಗಳನ್ನು—ಸಮಾಜದ ಬೆಳವಣಿಗೆಯ ನಿಯಮಗಳನ್ನು—ಗೊತ್ತುಮಾಡುವುದು ಸಾಧ್ಯ. ರಸಾಯನಶಾಸ್ತ್ರ ಅಥವಾ ಇನ್ನಾವುದೇ ಶಾಸ್ತ್ರದಷ್ಟೇ ಈ ಸಿದ್ಧಾಂತಗಳೂ ಸರಿ, ಸತ್ಯ. ಈ ನಿಯಮಗಳೇನೆಂದು ಒಮ್ಮೆ ನಾವು ತಿಳಿದರೆ, ಇತರ ಶಾಸ್ತ್ರಗಳಂತೆ ಇವನ್ನೂ ಉಪಯೋಗಿಸಬಹುದು. ಮುಂದೇನಾದೀತೆಂದು ಮೊದಲೇ ಹೇಳುವುದು ಮಾತ್ರವಲ್ಲ, ಹಾಗೆ ಆಗುವಂತೆ, ಅಥವಾ ಫಾಸಿಸ್ಟ್‌ವಾದದ ಬೆಳವಣಿಗೆಯಾದರೆ ಹಾಗೆ ಆಗದಂತೆ, ಕಾರ್ಯಾಚರಣೆ ಮಾಡುವುದು ಸಾಧ್ಯವಿದೆ.

ಮಾನವಕೋಟಿಯ ಎಲ್ಲಾ ಚರಿತ್ರೆಗಳಲ್ಲೂ ಸಹಜವಾಗಿ ಕಾಣುವ ನಿಯಮಗಳನ್ನು ಹುಡುಕುವುದಕ್ಕಾಗಿ ಮಾರ್ಕ್ಸ್‌ವಾದ ಚರಿತ್ರೆಯನ್ನು ಅಭ್ಯಾಸಮಾಡುವುದು. ಇದಕ್ಕೋಸ್ಕರ ವ್ಯಕ್ತಿಗಳ ಕಡೆಗಲ್ಲ, ಜನತೆಯತ್ತ ಅದು ನೋಡುವುದು. ಜನತೆಯತ್ತ, ಅತಿ ಪ್ರಾಚೀನ ಸ್ಥಿತಿಯ ಅನಂತರ, ನೋಡಿದಾಗ ಜನತೆಯಲ್ಲೇ ವಿವಿಧ ವಿಭಾಗಗಳನ್ನು ಕಾಣಬಹುದು. ಕೆಲವರು ಅತ್ತ ಎಳೆಯುವರು; ಕೆಲವರು ಇತ್ತ. ಆದರೆ ಹಾಗೆ ಮಾಡುವುದು ವ್ಯಕ್ತಿಗಳಾಗಿ ಅಲ್ಲ, ವರ್ಗಗಳಾಗಿ.

ಈ ವರ್ಗವೆಂದರೇನು? ಸರಳವಾಗಿ ಹೇಳುವುದಿದ್ದರೆ ಒಂದೇ ರೀತಿ ಒಂದೇ ಬಗೆಯಿಂದ ಜೀವನ ಮಾಡುವವರು. ದೊಡ್ಡ ಜಮೀನ್ದಾರಿ ಪದ್ಧತಿಯ ಸಮಾಜದಲ್ಲಿ ಅರಸನೂ ಪಾಳೆಯಗಾರರೂ ತಮಗೆ ಬರುವ ಕಪ್ಪ-ಕಾಣಿಕೆಯ ಮೇಲಿಂದ ಜೀವಿಸುವರು. ಇದನ್ನು ತಂದೊಪ್ಪಿಸುವವರು 'ಗುಲಾಮರು'. ಇವರೇ ಹೊಲದಲ್ಲಿ ದುಡಿದು ಉತ್ಪಾದನೆ ಮಾಡುವವರು. ಪಾಳೆಯಗಾರ ಭೂಪತಿಗಳು ಒಂದು ವರ್ಗ. ಸ್ವಂತದ ಹಕ್ಕು-ಸ್ವಾರ್ಥವಿರುವ ವರ್ಗ. ತಮ್ಮ ಗುಲಾಮರಿಂದ ಎಷ್ಟು ಸಾಧ್ಯವೋ ಅಷ್ಟು ದುಡಿತವನ್ನು ದಕ್ಕಿಸಿಕೊಳ್ಳುವುದು ಅವರೆಲ್ಲರ ಏಕ ಉದ್ದೇಶವಾಗಿತ್ತು; ತಮ್ಮ ಆಸ್ತಿಯ ವಿಸ್ತೀರ್ಣವನ್ನೂ ಗುಲಾಮರ ಸಂಖ್ಯೆಯನ್ನೂ ಹೆಚ್ಚಿಸಬೇಕೆಂಬುದು ಅವರೆಲ್ಲರ ಆಸೆಯಾಗಿತ್ತು. ಇತ್ತ ಗುಲಾಮರದೂ ಒಂದು ವರ್ಗ. ಈ ವರ್ಗಕ್ಕೂ ತನ್ನದೇ ಆದ ಸ್ವಾರ್ಥಗಳಿದ್ದುವು. ತಾವು ಉತ್ಪಾದನೆ ಮಾಡಿದ್ದೆಲ್ಲವನ್ನೂ ತಮ್ಮ ಧನಿಗಳಿಗೆ ಕೊಡುವುದರ ಬದಲು ಆದಷ್ಟು ಹೆಚ್ಚಿನಂಶವನ್ನು ತಮ್ಮ ಮತ್ತು ತಮ್ಮ ಕುಟುಂಬಗಳಿಗೋಸ್ಕರ ಇರಿಸಿಕೊಳ್ಳಬೇಕೆಂಬುದು ಅವರ ಆಸೆ. ತಮಗೋಸ್ಕರವಾಗಿ ಮಾತ್ರ ದುಡಿಯಲು ಅವರು ಸ್ವಾತಂತ್ರ್ಯವನ್ನು ಅಪೇಕ್ಷಿಸಿದರು. ನಿಯಮಗಳನ್ನು ಗೊತ್ತುಮಾಡುವ ಮತ್ತು ತೀರ್ಪುಕೊಡುವ ಎರಡೂ ಕೆಲಸಗಳನ್ನು ಮಾಡುತ್ತಿದ್ದ ತಮ್ಮ ಧನಿಗಳ ಕ್ರೂರ ಮುಷ್ಟಿಯಿಂದ ತಪ್ಪಿಸಿಕೊಳ್ಳಲು ಅವರು ಹೆಣಗಾಡುತ್ತಿದ್ದರು. ಬಲು ಹಿಂದಿನ ಆಂಗ್ಲೋ–ಸ್ಯಾಕ್ಸನ್ ಲೇಖಕನೊಬ್ಬ ಧನಿಯ ಹೊಲವನ್ನುಳುವ ಒಬ್ಬ ಗುಲಾಮನ ಅನುಭವವನ್ನು ಹೀಗೆ ಬರೆದಿದ್ದಾನೆ: "ಓ ಸ್ವಾಮಿ, ನಾನು ಮೈಮುರಿದು ಕೆಲಸ ಮಾಡುತ್ತೇನೆ. ಮುಂಜಾವದಲ್ಲಿ ಹೋರಿಗಳನ್ನೋಡಿಸುತ್ತಾ ಹೊಲಕ್ಕೆ ಹೋಗಿ ಅಲ್ಲಿ ಉಳುತ್ತೇನೆ. ಛಳಿಗಾಲದ ಛಳಿ ಎಷ್ಟು ಕಠಿನವಿರಲಿ, ನನ್ನ ಧನಿಗೆ ಹೆದರಿ, ಮನೆಯಲ್ಲಿ ನಾನು ಇರುವಂತಿಲ್ಲ. ಪ್ರತಿದಿನವೂ ಒಂದು ಎಕ್ರೆ ಇಲ್ಲವೆ ಜಾಸ್ತಿ ನಾನು ಉಳಲೇಬೇಕು. . . ."

ಹೀಗೆ ಪ್ರತಿಯೊಂದು ಜಮೀನ್ದಾರಿ ಆಳರಸರ ರಾಜ್ಯದಲ್ಲೂ ಧನಿ–ಗುಲಾಮರೊಳಗೆ ಯಾವಾಗಲೂ ಹೋರಾಟ ಆಗುತ್ತಲೇ ಇತ್ತು. ಕೆಲವೊಮ್ಮೆ ಇದು ವೈಯಕ್ತಿಕವಾಗಿ ಇರುತ್ತಿತ್ತು—ಗುಲಾಮರ ಒಂದು ತಂಡ

ಅವರ ಧನಿಗಿದಿರಾಗಿ ಎದ್ದೇಳುವುದು. ಮತ್ತೆ ಕೆಲವೊಮ್ಮೆ, ತಮ್ಮೆಲ್ಲರ ಪರಿಸ್ಥಿತಿಯನ್ನೂ ಸುಧಾರಿಸುವುದಕ್ಕಾಗಿ, ಗುಲಾಮರು ಹೆಚ್ಚು ಸಂಖ್ಯೆಯಲ್ಲಿ ಒಂದಾಗಿ ದಂಗೆ ಏಳುತ್ತಿದ್ದರು. ೧೩೮೧ ರಲ್ಲಿ ಇಂಗ್ಲೆಂಡಿನಲ್ಲಿ ಜಾನ್ ಬಾಲ್ ಮತ್ತು ವಾಟ್ ಟೈಲರ್ ಇವರ ನೇತೃತ್ವದಲ್ಲಿ ಉಂಟಾದ ಬಂಡಾಯ ಆ ರೀತಿಯದು. ಇದೇ ರೀತಿಯಲ್ಲಿ ಜರ್ಮನಿ, ರಷ್ಯಾ ಮತ್ತಿತರ ರಾಷ್ಟ್ರಗಳಲ್ಲೂ ಗುಲಾಮರ ಇಲ್ಲವೆ ಕೃಷಿಕರ ದಂಗೆಗಳಾಗುತ್ತಿದ್ದುವು. ಚಿಲ್ಲರೆ ಕಲಹಗಳಂತೂ ಅನು ದಿನ ಆಗುತ್ತಲಿದ್ದುವು.

ಧನಿಯ ಹೊಲದಲ್ಲೂ ಗುಲಾಮರು ದುಡಿಯಬೇಕಾಗುತ್ತಿತ್ತು. ದುಡಿಮೆಯ ರೂಪದಲ್ಲಿ ಸಲ್ಲಿಸುವ ಕಾಣಿಕೆ ಇದು. ಇದಲ್ಲದೆ ತಮ್ಮ ಹೊಲಗಳ ಉತ್ಪತ್ತಿಯ ಒಂದಂಶವನ್ನಷ್ಟೇ ಅಲ್ಲ, ತಾವೂ ತಮ್ಮ ಮನೆಯವರೂ ಮಾಡಿದ ಕೈಗಾರಿಕೆಯ ವಸ್ತುಗಳನ್ನೂ ಗುಲಾಮರು ಧನಿಗೆ ಒಪ್ಪಿಸಬೇಕಾಗುತ್ತಿತ್ತು. ಗುಲಾಮರಲ್ಲಿ ಆಯುಧ ಮತ್ತಿತರ ಸಾಮಗ್ರಿಗಳನ್ನು ತಯಾರಿಸುವ ಕೆಲ ವಿಚಕ್ಷಣರೂ ಇರುತ್ತಿದ್ದರು. ಉಳಿತಾಯವಾದ ಉತ್ಪತ್ತಿ-ಸಾಮಗ್ರಿಗಳನ್ನು ಕೊಂಡುಕೊಂಡು ಬದಲಿಗೆ ಬೇರೆ ಪ್ರದೇಶದ ಇಲ್ಲವೆ ರಾಷ್ಟ್ರದ ಸಾಮಗ್ರಿಗಳನ್ನು ಕೊಡುವ ವ್ಯಾಪಾರಿಗಳೂ ಇದ್ದರು. ಆದರೆ ವ್ಯಾಪಾರ ಹೆಚ್ಚಿದಂತೆ ಸಾಮಗ್ರಿಗಳ ಸರಬರಾಯಿ ಸಾಲದೆ ಹೋಯಿತು. ಸಂತೆಗೆ ಸಾಮಾನುಗಳನ್ನೊದಗಿಸುವುದಕ್ಕೋಸ್ಕರ ಸಂಘಟಿತ ಉತ್ಪಾದನೆಗೆ ವ್ಯಾಪಾರಿಗಳು ಕೈಯಿಕ್ಕಿದರು. ಧನಿಯ ಹಿಡಿತದಿಂದ ಸ್ವತಂತ್ರಗೊಳಿಸಲ್ಪಟ್ಟ ಇಲ್ಲವೆ ಅಲ್ಲಿಂದ ತಪ್ಪಿಸಿಕೊಂಡು ಬಂದ ಗುಲಾಮರು ಪೂರ್ಣದಿನ ಉತ್ಪಾದನೆಗಾಗಿಯೇ ದುಡಿವರು. ಹೀಗೆ ಬಂಧಮುಕ್ತರಾದ ಗುಲಾಮರಲ್ಲಿ ಕೆಲವರು ನಗರಗಳಿಗೆ ಹೋಗಿ, ಬಟ್ಟೆ ನೇಯುವ, ಲೋಹದ ಪಾತ್ರೆ ಮತ್ತಿತರ ಸಾಮಗ್ರಿಗಳನ್ನು ಮಾಡುವ, ಸ್ವತಂತ್ರ ಉದ್ಯೋಗಿಗಳಾದರು. ಈ ರೀತಿಯ ಪರಿವರ್ತನೆ ಸಾವಧಾನವಾಗಿ ನಡೆಯಿತು. ಕೆಲವೇ ವರ್ಷಗಳಲ್ಲ; ನೂರಾರು ವರ್ಷಗಳು ಬೇಕಾದುವು. ಸ್ಥಳೀಯ ಉಪಯೋಗಕ್ಕಾಗಿ ಪಾಳೆಯಗಾರರ ಆಶ್ರಯದಲ್ಲಿ ಉತ್ಪಾದನೆಗಳಾಗುತ್ತಿದ್ದುವು. ಅನಂತರ ಅದರಿಂದಲೇ ಹುಟ್ಟಿ ಮಾರ್ಕೆಟಿಗಾಗಿಯೂ ಉತ್ಪಾದನೆಗಳಾಗತೊಡಗಿದುವು. ಸ್ವತಂತ್ರ ಕಾರ್ಮಿಕರೂ ದಿನಕೂಲಿಯ ಕೂಲಿಕಾರರೂ ಈ ಕೆಲಸವನ್ನು ಮಾಡಿದರು.

ಸ್ವಲ್ಪ ಸ್ವಲ್ಪವಾಗಿ ಬೆಳೆದು ಸ್ವತಂತ್ರ ಕಾರ್ಮಿಕರು— ಶಿಲ್ಪಿಗಾರರು—ಚಿಕ್ಕ ಪುಟ್ಟ ಮಾಲಿಕರಾದರು. ತಮ್ಮ ಕೈಕೆಳಗೆ ಬೇರೆ ಕೂಲಿಕಾರರನ್ನು ನೇಮಿಸಿದರು. ಕೂಲಿ ಕೊಟ್ಟು ಅವರನ್ನು ದುಡಿಸಿ ಉತ್ಪಾದನೆಯನ್ನು ಹೆಚ್ಚಿಸಿದರು. ೧೬ನೆಯ ಶತಮಾನದಿಂದ ಮುಂದಕ್ಕೆ ಹೊಸತೊಂದು ವರ್ಗ— ಕೈ ಗಾ ರಿ ಕೆ ಯ ಭಂಡವಳಶಾಹಿವರ್ಗ—ಬೇರೂರತೊಡಗಿತು. ಅದರ 'ನೆರಳಾಗಿ' ಕೈಗಾರಿಕೆಯ ಕೂಲಿಕಾರವರ್ಗವೂ ಬೆಳೆಯುತ್ತಾ ಬಂತು. ಹಳ್ಳಿಗಳಲ್ಲೂ ಕೂಡಾ ಜಮೀನ್ದಾರಿ ಬಂಧನಗಳು ಕಡಿಮೆಯಾಗತೊಡಗಿದ್ದುವು. ದೈಹಿಕ ದುಡಿಮೆಯ ಬದಲು ಹಣದ ಗೇಣಿ ಸಾಕಾಯಿತು. ಗುಲಾಮರು ಎಷ್ಟೋ ಕಡೆ ಸ್ವತಂತ್ರ ಕೃಷಿಕರಾಗಿ ತಮ್ಮ ಹೊಲದಲ್ಲಿ ದುಡಿದರು. ಭೂಮಾಲಿಕ ತನ್ನ ಹೊಲದಲ್ಲಿ ದುಡಿದುದಕ್ಕೆ ಕೃಷಿಕರಿಗೆ ಕೂಲಿ ಕೊಡತೊಡಗಿದ. ಈ ರೀತಿಯಲ್ಲಿ ಭಂಡವಳಶಾಹಿ ವ್ಯವಸಾಯಗಾರನೂ ಹೊಲದಲ್ಲಿ ದುಡಿದು ಕೂಲಿ ಸಂಪಾದಿಸುವ ಕೂಲಿಕಾರನೂ ಹುಟ್ಟಿಕೊಂಡರು.

ನಗರದಲ್ಲೂ ಹಳ್ಳಿಯಲ್ಲೂ ಭಂಡವಳವರ್ಗ ಹುಟ್ಟಿ, ಬೆಳೆಯಿತು ಎಂದ ಮಾತ್ರಕ್ಕೆ ಹಿಂದಿನಿಂದಲೇ ಇದ್ದ ಪಾಳೆಯಗಾರ ಧನಿಗಳ ವರ್ಗ ಅಳಿದುಹೋಗಲಿಲ್ಲ. ಬದಲಿಗೆ, ಅರಸರೂ ಹಳೆಯ ಜಮೀನ್ದಾರಿ ಶ್ರೀಮಂತರೂ ಇಗರ್ಜಿ [ಚರ್ಚ್] ಗಳವರೂ ಹೊಸ ಭಂಡವಳಶಾಹಿಯನ್ನು ತಮ್ಮ ಒಳ್ಳಿತಿಗಾಗಿ ಉಪಯೋಗಿಸಲು ಯತ್ನಿಸಿದರು. ಸ್ವತಂತ್ರವಾಗಿ ಅಥವಾ ತಪ್ಪಿಸಿಕೊಂಡು ನಗರಗಳಿಗೆ ಹೋದ ಕೃಷಿಕರು ತಮ್ಮ ಧನಿಗಳಿಗೆ ದುಡಿಮೆಯ ರೂಪದಲ್ಲಾಗಲೀ, ಹಣದ ರೂಪದಲ್ಲಾಗಲೀ ಕಪ್ಪ ಕೊಡುವುದು ತಪ್ಪಿತು ಸರಿ. ಆದರೆ ಈ ಗುಲಾಮರ ಸಂತಾನದವರು ಹಣವಂತರಾಗತೊಡಗಿದಂತೆ ಅವರಿಗೆ ಹೊಸ ಧನಿಗಳು ಹುಟ್ಟಿಕೊಂಡರು. ಅರಸನಿಗೂ ಪಾಳೆಯಗಾರ ಶ್ರೀಮಂತರಿಗೂ ಅವರು ಹಲವಾರು ರೀತಿಯ ತೆರಿಗೆಗಳನ್ನು ಕೊಡಬೇಕಾಗಿತ್ತು. ವ್ಯಾಪಾರದ ಮೇಲೆ ನಿರ್ಬಂಧಗಳಿರುತ್ತಿದ್ದುವು ಉತ್ಪಾದನೆಯ ಬೆಳವಣಿಗೆಗೆ ತಡೆ ಬಂತು.

ರಾಜ್ಯಯಂತ್ರವನ್ನು, ಸೇನೆಗಳನ್ನು, ನ್ಯಾಯಾಧೀಶರನ್ನು, ಜೈಲುಗಳನ್ನು ಅರಸನೂ ಭೂಮಾಲಿಕ ಶ್ರೀಮಂತರೂ ನಿಯಂತ್ರಿಸುತ್ತಿದ್ದರು; ಕಾನೂನು-ನಿಯಮಗಳನ್ನು ಮಾಡುತ್ತಿದ್ದವರೂ ಅವರೇ. ಆದುದರಿಂದ

ಅಡೆತಡೆಗಳನ್ನೊಡ್ಡುವುದು . ಅವರಿಗೆ ಸಾಧ್ಯವಾಯಿತು. ಆದುದರಿಂದ ಭಂಡವಳ ವರ್ಗದ ಬೆಳವಣಿಗೆ ವರ್ಗಸಮರದ ಹೊಸ ರೂಪಗಳ ಬೆಳವಣಿಗೆಗೂ ಕಾರಣವಾಯಿತು. ಭಂಡವಳ ವರ್ಗ ಅರಸರಿಗೂ ಪಾಳೆಯಗಾರರಿಗೂ ವಿರುದ್ಧವಾಗಿ ಹೋರಾಡಬೇಕಾಯಿತು. ಎಷ್ಟೋ ಶತಮಾನಗಳ ವರೆಗೆ ಈ ಹೋರಾಟ ನಡೆಯಿತು. ಇನ್ನೂ ಹಿಂದುಳಿದಿರುವ ಕೆಲ ದೇಶಗಳಲ್ಲಿ ಆ ಹೋರಾಟ ಇನ್ನೂ ನಡೆದಿದೆ. ಆದರೆ ಬ್ರಿಟನ್ ಫ್ರಾನ್ಸ್‌ಗಳಲ್ಲಿ ಅದು ಪೂರ್ಣವಾಗಿದೆ.

ಇದು ಹೇಗಾಯಿತು ?

ಭಂಡವಳ ವರ್ಗ ಸಶಸ್ತ್ರ ಬಂಡಾಯವೆದ್ದು ಹಿಂದಿನ ಪಾಳೆಯಗಾರ ಆಳುವ ವರ್ಗದಿಂದ ಅಧಿಕಾರವನ್ನು ಕಸಿದುಕೊಂಡಿತು. ಬ್ರಿಟನ್ನಿನಲ್ಲಿ ಇತರ ಎಲ್ಲಾ ದೇಶಗಳಿಗಿಂತ ಮೊದಲೇ ಈ ಪರಿಸ್ಥಿತಿ ಒದಗಿತು. ಕರ-ತೆರಿಗೆ ನಿರ್ಬಂಧಗಳಿಗಿದಿರಾಗಿ ಬೆಳೆಯುತ್ತಲಿದ್ದ ಭಂಡವಳವರ್ಗ ನಡೆಸಿದ ಹೋರಾಟ ಹದಿನೇಳನೆಯ ಶತಮಾನದ ಮಧ್ಯದಲ್ಲಿ ತೀಕ್ಷ್ಣತೆಗೆ ಬಂತು. ಭಂಡವಳ ರೀತಿಯ ಉತ್ಪಾದನೆ ಬೆಳೆಯಲು ಈ ನಿರ್ಬಂಧಗಳು ತಡೆಯಾಗಿದ್ದುವು. ಈ ನಿರ್ಬಂಧಗಳನ್ನು ಹೋಗಲಾಡಿಸಲು ಅರಸನಿಗೆ ಅರ್ಜಿಮಾಡಿ, ತೆರಿಗೆ ಕೊಡಲು ನಿರಾಕರಿಸಿ,—ಹೀಗೆಲ್ಲ ಶಾಂತ ವಿಧಾನಗಳಿಂದ ಭಂಡವಳಗಾರರು ಯತ್ನಿಸಿದರು. ಆದರೆ ರಾಜ್ಯಯಂತ್ರದೆದುರು ಅವರ ಆಟವೇನೂ ಸಾಗಲಿಲ್ಲ ಆದುದರಿಂದ ಭಂಡವಳಗಾರರು ಶಕ್ತಿಯನ್ನು ಉಪಯೋಗಿಸಬೇಕಾಯಿತು. ಅರಸನಿಗೆ ವಿರುದ್ಧವಾಗಿ, ನಿರ್ದಯವಾದ ಕರ-ತೆರಿಗೆ ವ್ಯಾಪಾರದ ಮೇಲಿನ ತಡೆಗಳಿಗಿದಿರಾಗಿ, ಪಾಳೆಯಗಾರರ ಹಿಡಿತದಿಂದ ತಪ್ಪಿಸಿಕೊಳ್ಳಲು ಯತ್ನಿಸಿದವರ ಬಂಧನ-ರಾಜನು ನ್ಯಾಯಾಧೀಶರು ಹೊರಿಸುವ ಶಿಕ್ಷೆಗಳಿಗೆ ಪ್ರತಿಯಾಗಿ, ಜನರು ಕೆರಳಿ ಏಳುವಂತೆ ಮಾಡಬೇಕಾಯಿತು. ಬೇರೆ ಮಾತಿನಲ್ಲಿ ಹೇಳುವುದಾದರೆ, ಭಂಡವಳಗಾರರು ಸಶಸ್ತ್ರ ಕ್ರಾಂತಿಯನ್ನು ಹೂಡಬೇಕಾಯಿತು; ಅರಸನಿಗಿದಿರಾಗಿಯೂ ಹಳೆಯ ಮರ್ದನ ವಿಧಾನಗಳಿಗಿದಿರಾಗಿಯೂ ಆಯುಧ ಹಿಡಿದು ಜನ ಹೋರಾಡುವಂತೆ ಮಾಡಬೇಕಾಯಿತು; ಹಿಂದಿನ ಆಳುವ ವರ್ಗವನ್ನು ಮಿಲಿಟರಿ ವಿಧಾನಗಳಿಂದ -ಸೋಲಿಸಬೇಕಾಯಿತು. ಇದಾದ ಅನಂತರವೇ ಭಂಡವಳ ವರ್ಗ ಆಳುವ ವರ್ಗವಾ

ಗುವುದು, ಭಂಡವಳಶಾಹಿಯ ಬೆಳವಣಿಗೆಗಿರುವ ಆತಂಕಗಳನ್ನೆಲ್ಲ ನಿರ್ಮೂಲಮಾಡುವುದು, ಅದಕ್ಕೆ ಅವಶ್ಯವಿರುವ ಕಾನೂನುಗಳನ್ನು ರಚಿಸುವುದು ಸಾಧ್ಯವಾಯಿತು.

ಆದರೆ ಹೆಚ್ಚಿನ ಚರಿತ್ರೆಗಳಲ್ಲಿ ನಾವು ಕಾಣುವುದೇ ಬೇರೆ. ಇಂಗ್ಲೆಂಡಿನಲ್ಲಾದ ಭಂಡವಳವರ್ಗದ ಕ್ರಾಂತಿ ಎಂದರೆ ಚಾರ್ಲ್ಸ್ [ಒಂದನೆಯವನು] ಮತ್ತು ಕ್ರಾಮ್‌ವೆಲ್ ಅವರೊಳಗಿನ ಕಲಹ. ಚಾರ್ಲ್ಸ್ ದುರಹಂಕಾರದ, ಕುತಂತ್ರದ, ರೋಮನ್ ಕ್ಯಾಥಲಿಕ್ ವಿಚಾರ ಲಹರಿಯ ಅರಸು. ಕ್ರಾಮ್‌ವೆಲ್ ಎಂದರೆ ಮಹಾ ಗೌರವಸ್ಥ, ಕ್ಯಾಥಲಿಕ್ ವಿರೋಧಿ, ಬ್ರಿಟಿಷ್ ಸ್ವಾತಂತ್ರ್ಯದ ಬಗ್ಗೆ ಹಿರಿಯ ಧ್ಯೇಯಗಳಿದ್ದವನು. ಆ ಹೋರಾಟವನ್ನು ಧಾರ್ಮಿಕ ಹೋರಾಟವಾಗಿ ಚಿತ್ರಿಸಲಾಗಿದೆ. ಮಾರ್ಕ್ಸ್‌ವಾದ ಆ ವ್ಯಕ್ತಿಗಳನ್ನು ಹಾದು, ಕಾದಾಟದ ಘೋಷಣೆಗಳಿಂದಲೂ ಮುಂದೆ ಹೋಗಿ ವಿಚಾರಮಾಡುತ್ತದೆ. ಆ ಹೋರಾಟದ ನಿಜಸ್ಥಿತಿಯೇನು? ಅದು, ಪ್ರಗತಿ ಹೊಂದುತ್ತಿದ್ದ ಭಂಡವಳವರ್ಗ ಹಳೆಯ ಪಾಳೆಯಗಾರ ಆಳುವವರ್ಗದಿಂದ ಅಧಿಕಾರವನ್ನು ಕಿತ್ತುಕೊಳ್ಳಲು ಮಾಡಿದ ಯತ್ನ–ಎಂದು ಮಾರ್ಕ್ಸ್‌ವಾದ ಅರ್ಥಮಾಡುತ್ತದೆ. ನಿಜಕ್ಕೂ ಅದು ನಿರ್ದಿಷ್ಟ ಮೌಲ್ಯಗಳಿಗಾಗಿತ್ತು. ಕ್ರಾಂತಿಯ ಅನಂತರ, ೧೬೮೮ ರಲ್ಲಾದ ಅದರ ದ್ವಿತೀಯ ಘಟ್ಟದ ಅನಂತರ ಭಂಡವಳವರ್ಗಕ್ಕೆ ರಾಷ್ಟ್ರದ ನಿಯಂತ್ರಣದಲ್ಲಿ ಹೆಚ್ಚಿನ ಪಾಲು ಸಿಕ್ಕಿತು.

ಇಂಗ್ಲೆಂಡಿನಲ್ಲಿ ಭಂಡವಳಶಾಹಿಯ ಕ್ರಾಂತಿ ಬಲುಬೇಗನೆ ಆದುದರಿಂದ ಭಂಡವಳಗಾರರ ವಿಜಯ ನಿರ್ಣಾಯಕವಾಗಿರಲಿಲ್ಲ. ಪೂರ್ಣವಾಗಿರಲಿಲ್ಲ. ಇದರ ಫಲವಾಗಿ ಹಳೆಯ ಜಮೀನ್ದಾರಿ ಸಂಬಂಧದಲ್ಲಿ ಹೆಚ್ಚಿನಂಶ ನಾಶವಾದರೂ ಭೂಮಾಲಿಕವರ್ಗ ದೊಡ್ಡ ಸಂಖ್ಯೆಯಲ್ಲಿ ಉಳಿದುಕೊಂಡಿತು. ಅದೇ, ಭಂಡವಳಶಾಹಿ ಜಮೀನ್ದಾರಿ ವರ್ಗವಾಗಿ ಬೆಳೆಯಿತು. ಮುಂದಿನೆರಡು ಶತಮಾನಗಳಲ್ಲಿ, ಇತರ ಧನಿಕವರ್ಗದಲ್ಲಿ ಲೀನವಾಯಿತು. ರಾಷ್ಟ್ರದ ನಿಯಂತ್ರಣದಲ್ಲಿ ಹೀಗೆ ಒಂದು ಪ್ರಧಾನ ಅಂಶವನ್ನು ಇರಿಸಿಕೊಂಡಿತು.

ಆದರೆ ಫ್ರಾನ್ಸಿನಲ್ಲಿ ಬಲುಕಾಲದ ಅನಂತರ ಬದಲಾವಣೆಯಾಯಿತು.

ಭಂಡವಳಶಾಹಿಯ ಕ್ರಾಂತಿಯಾದದ್ದೇ ೧೭೮೯ ರಲ್ಲಿ. ಅದರಿಂದಾದ ಬದಲಾವಣೆಗಳೂ ಬಲು ಘನವಾದುವು. ಮಾರ್ಕ್ಸ್‌ವಾದಿಯ ದೃಷ್ಟಿಯಲ್ಲಿ, ರೋಸೋ ಮತ್ತಿತರ ಲೇಖಕರು ಮಾನವನ ಹಕ್ಕುಗಳನ್ನು ಘೋಷಿಸಿ ಪುಸ್ತಕಗಳನ್ನು ಬರೆದುದರಿಂದ, ಹೀಗಾದುದಲ್ಲ; 'ಸ್ವಾತಂತ್ರ್ಯ-ಸಮತೆ-ಸೌಹಾರ್ದ' ಇವು ಕ್ರಾಂತಿಯ ಕಾಲದಲ್ಲಿ ಜನತೆಯ ಜಯಕಾರಗಳಾಗಿದ್ದುದರಿಂದಲೂ ಅಲ್ಲ. ಕ್ರಾಮ್‌ವೆಲ್–ಕ್ರಾಂತಿಯ ಸತ್ವ ಜಯಘೋಷಗಳ ಬದಲು ವರ್ಗಸಮರದಲ್ಲಿದ್ದಂತೆ, ಫ್ರೆಂಚ್–ಕ್ರಾಂತಿಯ ಸತ್ವವೂ ವರ್ಗಸಂಬಂಧದಲ್ಲಿದೆ; ಬಾವುಟಗಳಲ್ಲಿ ಬರೆದ ಅಸ್ಪಷ್ಟ ನ್ಯಾಯಧರ್ಮಗಳಲ್ಲಿ ಅಲ್ಲ.

ಆ ಕಾಲಗಳ ಬಗ್ಗೆ ಮಾರ್ಕ್ಸ್ ಹೇಳುವಂತೆ:

"ತನ್ನ ವಿಚಾರದಲ್ಲಿ ತಾನೇ ಕೊಡುವ ಅಭಿಪ್ರಾಯವನ್ನು ಆಧರಿಸಿ ಒಬ್ಬ ವ್ಯಕ್ತಿಯ ಬಗ್ಗೆ ತೀರ್ಪು ಕೊಡುವುದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಅಂತಹ ಕ್ರಾಂತಿ–ಕಾಲದ ಬಗ್ಗೆ ಆಗಿನ ಅನುಭವದಿಂದಲೇ ತೀರ್ಮಾನ ಕೊಡುವಂತಿಲ್ಲ." ಹೊಸ ವರ್ಗದ ನಾಯಕರು, ತಿಳಿದಾಗಲಿ ತಿಳಿಯದಾಗಲಿ, ತಮ್ಮ ಹೋರಾಟ ಅಸ್ಪಷ್ಟ ವಿಚಾರಗಳಿಗೆ ಸೇರಿದ್ದು–ವರ್ಗಹಿತ ಇಲ್ಲವೆ ವರ್ಗಶಕ್ತಿಗೂ ಅದಕ್ಕೂ ಸಂಬಂಧವಿಲ್ಲ–ಎಂದು ಹೇಳಿದರೂ ಹೋರಾಡುವ ಆ ಶಕ್ತಿಗಳನ್ನು, ಹಳೆಯ ವರ್ಗದಿಂದ ಹೊಸ ವರ್ಗ ಅಧಿಕಾರ ಕಿತ್ತುಕೊಳ್ಳುವುದನ್ನು, ತಿಳಿದುಕೊಳ್ಳುವುದು ಮುಖ್ಯ. ಆಗ ಮಾತ್ರ ಆ ಕ್ರಾಂತಿಕಾರಕ ಕಾಲದ ಅರ್ಥವಾಗುವುದು.

ಎರಡು ವರ್ಗಗಳೊಳಗಿನ ಹೋರಾಟವೇ ಮಾನವ ಸಮಾಜದ ಬೆಳವಣಿಗೆಗೆ ಮುಖ್ಯ ಪ್ರೇರಕ ಶಕ್ತಿ ಎಂದು ಮಾರ್ಕ್ಸ್‌ವಾದಿ ತಿಳಿಯುತ್ತಾನೆ. ವರ್ಗಗಳ ಹೋರಾಟದ ಜತೆಯಲ್ಲೇ, ವಿಜ್ಞಾನದ, ಪ್ರಕೃತಿಯ ಮೇಲೆ ಮನುಷ್ಯ ಬೀರುವ ಪ್ರಭಾವದ, ಜೀವನಕ್ಕೆ ಅಗತ್ಯವಾದ ವಸ್ತುಗಳನ್ನು ತಯಾರಿಸಲು ಅವನಿಗಿರುವ ಶಕ್ತಿಯ, ಬೆಳವಣಿಗೆಯೂ ಆಗುವುದು. ವಿದ್ಯುತ್‌ಶಕ್ತಿಯ ಮೂಲಕ ಚಲಿಸುವ ಯಂತ್ರ ಶೋಧಿಸಲ್ಪಟ್ಟುದರಿಂದ ಉತ್ಪಾದನೆ ವೇಗವಾಗಿ ಮುಂದಕ್ಕೆ ಅಡಿ ಇಟ್ಟಿತು; ಆದರೆ ಅಷ್ಟೇ ಅಲ್ಲ. ಈ ಯಂತ್ರ, ನೂಲುವ ರಾಟೆ ನೇಯುವ ಕೈ ಮಗ್ಗಗಳಿದ್ದ ಉತ್ಪಾದಕನ

ವಿನಾಶಕ್ಕೆ ಕಾರಣವಾಯಿತು. ವಿದ್ಯುತ್ ಚಾಲನೆಯ ಸಹಾಯದಿಂದ ಒಬ್ಬ ನೇಕಾರ, ಬರೇ ಕೈಯಲ್ಲಿ ಒಂದು ವಾರದಲ್ಲಿ ಉತ್ಪಾದಿಸುವುದನ್ನು, ಒಂದೇ ದಿನದಲ್ಲಿ ಉಂಟುಮಾಡಲು ಶಕ್ತನಾದ. ಆದುದರಿಂದ ಸ್ವಂತದ ಸಾಮಗ್ರಿಗಳನ್ನುಪಯೋಗಿಸಿ ಸ್ವಲ್ಪ ಸ್ವಲ್ಪವಾಗಿ ಉತ್ಪಾದಿಸುತ್ತಿದ್ದವನ ಬದಲು ಬೇರೆ ಎರಡು ತರದ ಜನರು ಬಂದರು—ಭಂಡವಳಶಾಹಿ ವರ್ಗ ಒಂದು, ಇವರೇ ಯಂತ್ರದ ಮಾಲಿಕರು, ಆದರೆ ಸ್ವತಃ ದುಡಿಯಲಾರರು; ಕೈಗಾರಿಕೆಯ ಕೂಲಿಕಾರ ವರ್ಗ ಇನ್ನೊಂದು, ಸ್ವಂತದ ಯಂತ್ರಗಳಿಲ್ಲ, ಆದರೆ ಮಾಲಿಕನಿಗೋಸ್ಕರ ದಿನಕೂಲಿ ಪಡೆದು ದುಡಿಯುವವರು.

ಇಂತಹ ಬದಲಾವಣೆಯಾಗಬೇಕೆಂದು ಯಾರೂ ಯೋಜನೆ ತಯಾರಿಸಿ ಹಂಚಿಕೆ ಹಾಕಿದ್ದಿಲ್ಲ; ಅದು ತನ್ನಷ್ಟಕ್ಕೇ ಆಯಿತು. ಸ್ವಲ್ಪ ಜನ ಗಳಿಸಿದ ಬುದ್ಧಿಶಕ್ತಿಯ ಫಲವಾಗಿ ಆ ಯಂತ್ರಗಳು ಹುಟ್ಟಿಕೊಂಡುವು. ಅವರು ತಮ್ಮ ಪ್ರಯೋಜನಕ್ಕಾಗಿಯೇ ಆ ಯಂತ್ರಗಳನ್ನು ಉಪಯೋಗಿಸಿ ಕೊಂಡರು. ಅದರಿಂದ ಮುಂದೆ ಆಗಬಹುದಾಗಿದ್ದ ಸಾಮಾಜಿಕ ಪರಿಣಾಮವನ್ನು ಅವರು ಕಂಡದ್ದೂ ಇಲ್ಲ; ಇಚ್ಛಿಸಿದ್ದೂ ಇಲ್ಲ. ಮಾನವ ಸಮಾಜದ ಎಲ್ಲಾ ಬದಲಾವಣೆಗಳಿಗೂ ಈ ವಿಚಾರ ಅನ್ವಯಿಸುತ್ತದೆ ಎಂದು ಮಾರ್ಕ್ಸ್ ಹೇಳಿದ. ಮನುಷ್ಯನ ಬುದ್ಧಿಶಕ್ತಿ ಅನುಕ್ರಮವಾಗಿ ಹೆಚ್ಚುತ್ತಿತ್ತು. ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಆ ಬುದ್ಧಿಶಕ್ತಿಯನ್ನು ಆತ ಉಪಯೋಗಿಸಿದ. ಹೀಗೆ ಮಾಡಿ ಮಹಾ ಸಾಮಾಜಿಕ ಬದಲಾವಣೆಗಳಾಗಲು ಕಾರಣನಾದ. ಈ ಸಾಮಾಜಿಕ ಬದಲಾವಣೆಗಳ ಫಲವಾಗಿ ವರ್ಗಸಮರಗಳಾದವು. ಆಗಿನ ವಿಚಾರ, ಸಂಸ್ಥೆ–ಸ್ಥಾಪನೆಗಳು, ಹಳೆಯ ಉತ್ಪಾದನಾ ವಿಧಾನ ಮತ್ತು ವರ್ಗ ಸಂಬಂಧದ ಮೇಲೆ ಕಟ್ಟಲ್ಪಟ್ಟಿದ್ದುದರಿಂದ, ವರ್ಗಸಮರ ಆ ವಿಚಾರ, ಸಂಸ್ಥೆ–ಸ್ಥಾಪನೆಗಳ ವಿರುದ್ಧವಾದ ಹೋರಾಟವಾಯಿತು.

ಉದಾಹರಣೆಗಾಗಿ 'ಜಹಗೀರು' [ಆಸ್ತಿ] ಗಳ ಸ್ಥಾಪನೆಯನ್ನು ತೆಗೆದುಕೊಳ್ಳೋಣ. ಲಾರ್ಡ್ಸ್ ಸ್ಪಿರಿಚ್ಯುವಲ್, ಲಾರ್ಡ್ಸ್ ಟೆಂಪರಲ್ ಮತ್ತು ಕಾಮನ್ಸ್ ಎಂಬ ಮೂರು ವಿಭಾಗಗಳು [ಆಸ್ತಿಯ ವಿಸ್ತಾರಕ್ಕೆ ಅನುಗುಣವಾಗಿ] ಇಂಗ್ಲೆಂಡಿನಲ್ಲಿದ್ದುವು. ಆರಂಭದ ಪಾರ್ಲಿಮೆಂಟು

ಗಳಲ್ಲಿ ಪ್ರತಿ 'ಜಹಗೀರಿ' ಗೂ ಪ್ರತ್ಯೇಕ ಪ್ರಾತಿನಿಧ್ಯವಿರುತ್ತಿತ್ತು. ಈ ವಿಭಜನೆಯ ಒಂದು ರೂಪವನ್ನು ಶ್ರೀಮಂತರ ಸಭೆ ಮತ್ತು ಸಾಮಾನ್ಯರ ಸಭೆಗಳಲ್ಲಿ [ ಹೌಸ್ ಆಫ್ ಲಾರ್ಡ್ಸ್ ಮತ್ತು ಹೌಸ್ ಆಫ್ ಕಾಮನ್ಸ್ ] ಈಗಲೂ ಕಾಣಬಹುದಾದರೂ ಕೂಡ, ಪಾಳೆಯಗಾರತನಕ್ಕೆ ಯಾವ ಪ್ರಾಧಾನ್ಯವೂ ಇಲ್ಲ. ಅದು ಅಳಿದುಹೋಗಿದೆ. ಭಂಡವಳಗಾರರು ಮತ್ತು ಕೂಲಿಕಾರರು ಎಂದು ಸಮಾಜದ ಹೊಸ ವಿಭಜನೆಯಾಗಿದೆ. ಫ್ರಾನ್ಸಿನಲ್ಲಿ ಹಿಂದಿನ 'ಜಹಗೀರು' ಗಳ ಒಂದೇ ಒಂದು ಕುರುಹೂ ಇಲ್ಲ. ಬಿಳಿಯರ ಅಮೆರಿಕಾದಲ್ಲಿ ಅಂತಹ 'ಜಹಗೀರು' ಗಳ ವಿಚಾರ ಕೇಳಿದ ವರೇ ಇಲ್ಲ; ಸಂಯುಕ್ತ ರಾಷ್ಟ್ರಗಳು ಬೆಳೆಯತೊಡಗಿದ ಹೊತ್ತಿಗೆ ಪಾಳೆಯಗಾರತನ ತನ್ನ ಕೊನೆಯನ್ನು ಸಮೀಪಿಸಿತ್ತು.

ಅಂತಹ ವಿಚಾರ, ಸ್ಥಾಪನೆಗಳು ಹೇಗೆ ಹುಟ್ಟಿಕೊಂಡುವು? ಯಾವ ಕಾರಣದಿಂದ ಅವುಗಳ ಅವಸಾನವಾಯಿತು? ಮನುಷ್ಯರ ಪ್ರತ್ಯಕ್ಷ ಆಚರಣೆಯಿಂದಲೇ ಯಾವಾಗಲೂ ಅಂತಹ ವಿಚಾರ–ಸ್ಥಾಪನೆಗಳು ಹುಟ್ಟಿಕೊಂಡುವು ಎಂದು ಮಾರ್ಕ್ಸ್ ತೋರಿಸಿಕೊಟ್ಟ. ಆಹಾರ, ಬಟ್ಟೆಬರೆ, ವಸತಿ, ಇಂತಹ ಜೀವನಾವಶ್ಯಕ ಸಾಮಗ್ರಿಗಳ ಉತ್ಪಾದನೆಯೇ ಮೊದಲ ವಿಷಯ. ಪುರಾತನದ ಪಂಗಡಗಳಿರಲಿ, ಗುಲಾಮ ಸಮಾಜವಿರಲಿ, ಪಾಳೆಯಗಾರ ಸಮಾಜವಿರಲಿ, ಆಧುನಿಕ ಭಂಡವಳಶಾಹಿ ಸಮಾಜವಿರಲಿ- ಪ್ರತಿಯೊಂದು ಚಾರಿತ್ರಿಕ ಸಾಮಾಜಿಕ ವಿಭಾಗದಲ್ಲೂ ಅದರ ವ್ಯಕ್ತಿಗಳೊಳಗಿನ ಸಂಬಂಧ ಉತ್ಪಾದನೆಯ ರೂಪವನ್ನು ಹೊಂದಿಕೊಂಡಿತ್ತು. ಸ್ಥಾಪನೆಗಳನ್ನು ಮೊದಲೇ ಯಾರೂ ಯೋಚಿಸಿ ಇಟ್ಟಿರಲಿಲ್ಲ; ಪ್ರತಿಯೊಂದು ವಿಭಾಗದ ಪದ್ಧತಿಗನುಗುಣವಾಗಿ ಅವು ಹುಟ್ಟಿಕೊಂಡುವು. ಸ್ಥಾಪನೆಗಳು, ಶಾಸನಗಳು, ನೈತಿಕ ಧರ್ಮ ಮತ್ತಿತರ ವಿಚಾರಗಳು ರೂಢಿ–ಪದ್ಧತಿಗಳ ಮೇಲಿಂದ ರೂಪುಗೊಂಡುವು. ಈ ರೂಢಿ–ಪದ್ಧತಿಗಳಿಗಂತೂ ಉತ್ಪಾದನೆಯ ವಿಧಾನದೊಡನೆ ನಿಕಟ ಸಂಬಂಧವಿತ್ತು.

ಪಾಳೆಯಗಾರತನದಿಂದ ಭಂಡವಳಶಾಹಿಗೆ ಬಂದ ರೀತಿಯಲ್ಲೇ ಉತ್ಪಾದನ ವಿಧಾನ ಬದಲಾದಾಗ ಸ್ಥಾಪನೆಗಳೂ ವಿಚಾರಗಳೂ ಬದಲಾಯಿಸಿದುವು ಎಂಬುದು ಸ್ಪಷ್ಟವಾಯಿತು. ಒಂದು ಕಾಲದಲ್ಲಿ ನೈತಿಕವಾಗಿ

ದ್ದುದು ಮತ್ತೆ ಅನೈತಿಕವಾಯಿತು; ಅನೈತಿಕವಾಗಿದ್ದುದು ನೈತಿಕವಾಯಿತು. ಉತ್ಪಾದನ ವಿಧಾನದಲ್ಲಿನ ಬದಲಾವಣೆಯಂತಹ ವಿಶೇಷ ಬದಲಾವಣೆಯ ಕಾಲದಲ್ಲಿ ಸ್ವಾಭಾವಿಕವಾಗಿಯೇ ವಿಚಾರ ಘರ್ಷಣೆಯಾಯಿತು; ಆಗಿನ ಸ್ಥಾಪನೆಗಳ ವಿರುದ್ಧ ಬಂಡಾಯವಾಯಿತು.

ಭಂಡವಳಶಾಹಿ ಉತ್ಪಾದನೆ ಬೆಳೆದಂತೆ ಪಾಳೆಯಗಾರವರ್ಗದೊಡನೆ ಘರ್ಷಣೆಯಾಯಿತು. ಉತ್ಪಾದನ ವಿಧಾನದಲ್ಲಿ ಭಂಡವಳವೇ ಪ್ರಧಾನವಾಯಿತು. ವಿಚಾರ ಘರ್ಷಣೆ ಸ್ಪಷ್ಟವಾಯಿತು; 'ದೈವದತ್ತ ಹಕ್ಕಿಲ್ಲ'; ಅದರ ಬದಲು 'ಪ್ರಾತಿನಿಧ್ಯವಿಲ್ಲದ ತೆರಿಗೆಯಿಲ್ಲ', ತಡೆಯಿಲ್ಲದೆ ವ್ಯಾಪಾರ ನಡೆಸಲು ಅಧಿಕಾರವಿರಬೇಕು, ವೈಯಕ್ತಿಕ ಸ್ವಾತಂತ್ರ್ಯವಿರುವ ಮನೋಭಾವನೆ ಸಾಕು, ಕೇಂದ್ರೀಕೃತ ನಿಯಂತ್ರಣ ಸಡಿಲಬೇಕು ತೋರಿಕೆಗೇನೋ ಅಸ್ಪಷ್ಟ ಹಕ್ಕು ಮತ್ತು ಧಾರ್ಮಿಕ ನೀತಿಗಾಗಿ ಸ್ವತಂತ್ರ ಮಾನವರು ನಡೆಸುತ್ತಿದ್ದ ಜೀವನ ಮರಣ ಹೋರಾಟ. ವಾಸ್ತವವಾಗಿ ಎದ್ದೇಳುತ್ತಿದ್ದ ಭಂಡವಳಶಾಹಿ ಕಣ್ಣು ಮುಚ್ಚುತ್ತಲಿದ್ದ ಪಾಳೆಯಗಾರತನದ ವಿರುದ್ಧ ನಡೆಸುತ್ತಿದ್ದ ಸಮರ. 'ವಿಚಾರ' ಘರ್ಷಣೆಯ ಪ್ರಾಧಾನ್ಯ ಎರಡನೆಯದು.

ಈ ಕಾರಣದಿಂದಲೇ ಮಾರ್ಕ್ಸ್‌ವಾದಿಗಳು, ಕನಸಿನ ರಾಜ್ಯಗಳ ಬಗ್ಗೆ ಬರೆಯುವ ಲೇಖಕರಂತೆ ಸಮಾಜ ರಚನೆಗೆ ಅಸ್ಪಷ್ಟ 'ತತ್ವ' ಗಳನ್ನು ನಿರ್ಧರಿಸ ಹೊರಡುವುದಿಲ್ಲ. ಮನುಷ್ಯನಲ್ಲಿ ನುಳಿಯುವ ಅಂತಹ ತತ್ವಗಳು ಒಂದು ನಿರ್ದಿಷ್ಟ ಸ್ಥಳದ, ಕಾಲದ, ವಾಸ್ತವ ಸಮಾಜ ರಚನೆಯನ್ನು ಪ್ರತಿಬಿಂಬಿಸುತ್ತವೆಯೇ ಹೊರತು, ಯಾವಾಗಲೂ ಎಲ್ಲೆಡೆಗಳಲ್ಲೂ ಅನ್ವಯಿಸುವಂತಿಲ್ಲವೆಂದು ಮಾರ್ಕ್ಸ್‌ವಾದ ಹೇಳುತ್ತದೆ. ಅಷ್ಟೇ ಅಲ್ಲದೆ, ಸಾರ್ವತ್ರಿಕವಾಗಿ ಅನ್ವಯಿಸುತ್ತದೆ ಎನ್ನುವ ವಿಚಾರವೂ ಕೂಡ-ಉದಾಹರಣೆಗಾಗಿ ಮಾನವ ಸಮಾನತೆ-ಸಮಾಜದ ವಿವಿಧ ಘಟ್ಟಗಳಲ್ಲಿ ಒಂದೇ ಅರ್ಥಕೊಡುವುದಿಲ್ಲ. ಗ್ರೀಕರ 'ನಗರ ರಾಷ್ಟ್ರ' ಗಳಲ್ಲಿ 'ಮಾನವರೊಳಗಿನ ಸಮಾನ ಹಕ್ಕುಗಳು' ಎಂಬ ತತ್ವ ಗುಲಾಮ ಜನರಿಗೆ ಅನ್ವಯಿಸಲಿಲ್ಲ. ಮಹಾ ಫ್ರೆಂಚ್ ಕ್ರಾಂತಿಯ "ಸ್ವಾತಂತ್ರ್ಯ, ಸಮಾನತೆ, ಸೌಹಾರ್ದ" ತತ್ವವೂ ಹಾಗೆಯೇ. ಸ್ವಾತಂತ್ರ್ಯವೆಂದರೆ ಏಳುತ್ತಿದ್ದ ಭಂಡವಳಶಾಹಿಗೆ ತಡೆಯಿ

ಲ್ಲದೆ ವ್ಯಾಪಾರ ನಡೆಸಲು ಸ್ವಾತಂತ್ರ್ಯ; ಸಮಾನತೆಯೆಂದರೆ ಈ ವರ್ಗ ಮತ್ತು ಪಾಳೆಯಗಾರ ಭೂಪತಿಗಳೊಳಗೆ ಸಮಾನತೆ; ಸೌಹಾರ್ದವೆಂದರೆ ಜಮೀನ್ದಾರಿ ಮರ್ದನ ನಿರ್ಬಂಧಗಳಿಗಿದಿರಾಗಿ ತಮ್ಮ ವರ್ಗದವರೊಳಗೇ ಸೌಹಾರ್ದ. ಫ್ರೆಂಚ್ ವಸಾಹತುಗಳಲ್ಲಿದ್ದ ಗುಲಾಮರಿಗೆ ಮಾತ್ರವಲ್ಲ ಫ್ರೆಂಚ್‌ಜನ ಕೋಟಿಯಲ್ಲೇ ದರಿದ್ರವರ್ಗಕ್ಕೂ ಈ ಘೋಷಣೆ ಅನ್ವಯಿಸಲಿಲ್ಲ.

ಆದುದರಿಂದ ನಾವು ಇಷ್ಟನ್ನು ಹೇಳಬಹುದು: ಹೆಚ್ಚಾಗಿ ವಿಚಾರ ಗಳು, ಅದರಲ್ಲೂ ಸಮಾಜದ ರಚನೆಗೆ ಸಂಬಂಧಿಸಿದುವು, 'ವರ್ಗ' ವಿಚಾ ರಗಳು; ಪ್ರಚಾರ ಯಂತ್ರವನ್ನು ವಶಪಡಿಸಿ, ವಿದ್ಯಾಭ್ಯಾಸವನ್ನು ನಿಯಂ ತ್ರಿಸಿ, ತಮ್ಮ ನ್ಯಾಯಾಸ್ಥಾನದ ಮೂಲಕ, ಉದ್ಯೋಗದಿಂದ ಹೊರಹಾಕು ವುದರ ಮೂಲಕ, ವಿರುದ್ಧಾಭಿಪ್ರಾಯವುಳ್ಳವರನ್ನು ಶಿಕ್ಷಿಸಿ, ಸಮಾಜದಲ್ಲಿನ ಹಿರಿಯವರ್ಗ ತನ್ನ ವರ್ಗ ವಿಚಾರವನ್ನು ಉಳಿದವರ ಮೇಲೆ ಹೊರಿಸು ವುದು. "ಇಲ್ಲೊಂದು ವಿಚಾರವಿದೆ; ಇದು ಸತ್ಯವಲ್ಲ ನಿಜ. ಆದರೆ ಅದನ್ನು ನಂಬುವಂತೆ ಅಥವಾ ಅಲ್ಲಗಳೆಯದಿರುವಂತೆ ಜನರನ್ನು ಒತ್ತಾ ಯಿಸೋಣ" ಎಂದು ಆ ಹಿರಿಯವರ್ಗ ಭಾವಿಸುತ್ತದೆ ಎಂದಲ್ಲ. ಹಿರಿಯ ವರ್ಗ ಸಾಮಾನ್ಯವಾಗಿ ಅಂತಹ ವಿಚಾರಗಳನ್ನು ನಿರ್ಮಿಸುವುದೇ ಇಲ್ಲ. ಪ್ರತ್ಯಕ್ಷ ಜೀವನದಿಂದಲೇ ಆ ವಿಚಾರಗಳು ಹುಟ್ಟುತ್ತವೆ. 'ಶ್ರೀಮಂತ' ರಾಗಿ ಗಣಿಸಲ್ಪಟ್ಟಿರುವ ಪಾಳೆಯಗಾರ ಧನಿಯ ಅಥವಾ ಧನಿಕ ಭಂಡವಳ ಗಾರನ ಪ್ರತ್ಯಕ್ಷ ಶಕ್ತಿಯೇ, ಸಾಮಾನ್ಯ ಮನುಷ್ಯನಿಗಿಂತ ತಾನು ಮೇಲು ಎಂಬ ಭಾವನೆಯನ್ನು ಹುಟ್ಟಿಸುತ್ತದೆ. ಒಮ್ಮೆ ಈ ವಿಚಾರ ಹುಟ್ಟಿ ಸ್ಥಾಪಿತವಾದಮೇಲೆ ಪ್ರತಿಯೊಬ್ಬನೂ ಅದನ್ನು ಒಪ್ಪಿಕೊಳ್ಳಬೇಕೆಂದು ಹಿರಿಯವರ್ಗ ಹೇಳುತ್ತದೆ. ಏಕೆಂದರೆ, ಒಪ್ಪಿಕೊಳ್ಳದೇ ಇದ್ದರೆ ಜನ ಆ ವಿಚಾ ರಕ್ಕನುಗುಣವಾಗಿ ನಡೆಯಲಾರರು. ಅರಸನ ದೈವದತ್ತ ಹಕ್ಕನ್ನೂ ಪ್ರಶ್ನಿ ಸುವ ಉದ್ಧಟತನವನ್ನು ಮಾಡಬಹುದು. [ಅವನ ರುಂಡವನ್ನು ಉರುಳಿ ಸುವುದಕ್ಕೂ ಹೋಗಬಹುದು.] ಆದುದರಿಂದ ಜಪಾನಿನ ಮಾತ್ರವಲ್ಲ, ಪ್ರತಿಯೊಂದು ರಾಷ್ಟ್ರದ ಹಿರಿಯವರ್ಗವೂ "ಅಪಾಯಕಾರಿ ವಿಚಾರ" ಗಳು ಹರಡದಂತೆ ಸಾಧ್ಯವಿರುವುದನ್ನೆಲ್ಲ ಮಾಡುತ್ತದೆ.

ವಿಚಾರಗಳಿಗೆ ಪ್ರಾಧಾನ್ಯವಿಲ್ಲವಾದರೆ, ಉತ್ಪಾದನ ವಿಧಾನದಲ್ಲಾಗುವ ವಿಶೇಷ ಬದಲಾವಣೆಯೇ ಮೊದಲ ವಿಷಯವಾದರೆ, 'ಅಪಾಯಕಾರಿ ವಿಚಾರ' ಹುಟ್ಟುವುದಾದರೂ ಹೇಗೆ? ಹೊಸ ಉತ್ಪಾದನ ವಿಧಾನ ಬರುವ ಮೊದಲೇ ಅದರ ಬಗ್ಗೆ ಜನ ಹೇಗೆ ಯೋಚಿಸಬಹುದು? ಎಂಬ ಪ್ರಶ್ನೆಯನ್ನು ಕೇಳುವುದು ಸಾಧ್ಯ.

ಉತ್ತರವಿದು: ಅದರ ಇರುವಿಕೆಗೆ ತಕ್ಕ ಪರಿಸ್ಥಿತಿ ಒದಗುವ ಮೊದಲು ಜನ ಆ ವಿಚಾರಮಾಡುವುದಿಲ್ಲ. ಆದರೆ ಆ ಪರಿಸ್ಥಿತಿ ಒದಗಿದಾಗ ಹಳೆಯ ಸ್ಥಿತಿಗೂ ಉತ್ಪಾದನೆಯ ಹೊಸ ಶಕ್ತಿಗಳಿಗೂ ಆಗುವ ತಿಕ್ಕಾಟವನ್ನು ನೋಡಿ, ಜನ ತಾವಾಗಿಯೇ ಅದರ ಬಗ್ಗೆ ವಿಚಾರಮಾಡುವಂತಾಗುವುದು.

ಉದಾಹರಣೆಗಾಗಿ, ದಿನಕೂಲಿಯಿಂದ ಉತ್ಪಾದನ ಹೆಚ್ಚುತ್ತ ಹೋದಂತೆ, ಲಾಭ ಗಳಿಸುವುದಕ್ಕೋಸ್ಕರ ಅದೆಲ್ಲವನ್ನೂ ಮಾರುವುದು ಅವಶ್ಯವಾದಂತೆ, ಮೊದಮೊದಲಿನ ಭಂಡವಳಗಾರ, ವ್ಯಾಪಾರದ ಮೇಲೆ ಪಾಳೆಯಗಾರರು ಹೊರಿಸಿದ್ದ ಅಡೆತಡೆಗಳನ್ನು ಸಹಿಸಲಿಲ್ಲ; ಘರ್ಷಣೆಗೆ ಆರಂಭವಾಯಿತು. ಆದುದರಿಂದ, ನಿರ್ಬಂಧಗಳು ಹೋಗಬೇಕು, ತೆರಿಗೆಯನ್ನು ಗೊತ್ತುಮಾಡುವುದರಲ್ಲಿ ತಮಗೂ ಒಂದು ಹಕ್ಕಿರಬೇಕು, ಎಂಬ ಯೋಚನೆಗಳು ಹುಟ್ಟಿದುವು. ಆಗಲೇ ಅದು ಭಂಡವಳಶಾಹಿ ಸಮಾಜವಾಗಿರಲಿಲ್ಲ. ಆದರೆ ಅಂತಹ ಸಮಾಜ ರೂಪುಗೊಳ್ಳಲು ತಕ್ಕ ಪರಿಸ್ಥಿತಿ ಒದಗಿತ್ತು. ಅದರಿಂದಲೇ ಭಂಡವಳಶಾಹಿ ವಿಚಾರಗಳು ಉತ್ಪನ್ನವಾಗುತ್ತಿದ್ದುವು.

ಸಮತಾವಾದಿ ಭಾವನೆಗಳಾದರೂ ಹಾಗೆಯೇ. ಸಮತಾವಾದಿ ಸಮಾಜ ರೂಪುಗೊಳ್ಳಲು ಅವಶ್ಯವಿರುವ ಪರಿಸ್ಥಿತಿ ಒದಗಿದಾಗ, ದೊಡ್ಡ ಮಟ್ಟದ ಉತ್ಪಾದನ ಎಲ್ಲೆಲ್ಲೂ ಹಬ್ಬಿದಾಗ, ಮೇರೆ ತಪ್ಪಿದ ಉತ್ಪಾದನೆಯಿಂದಾಗುವ ವಿಷಮ ಪರಿಣಾಮಗಳನ್ನು ನೋಡಿ ಸಮಾಜದ ಪ್ರಗತಿಗೆ ಭಂಡವಳಶಾಹಿ ವಿರುದ್ಧವಿದೆ ಎಂಬುದನ್ನು ತಿಳಿದಾಗ, ಆಗ ಮಾತ್ರ, ಸ್ವಪ್ನ ರಾಜ್ಯದ ಸಮತಾವಾದಿ ಭಾವನೆಗಳ ಬದಲು ಶಾಸ್ತ್ರೀಯ ವಿಚಾರಗಳು ಹುಟ್ಟುವುವು.

ವಾಸ್ತವಿಕ ಬದಲಾವಣೆಯಿಂದಲೇ ವಿಚಾರಗಳು ಉತ್ಪನ್ನವಾಗುವು

ವಾದರೂ ಒಮ್ಮೆ ಅವು ಹುಟ್ಟಿದ ಮೇಲೆ ಮನುಷ್ಯನ ಕೃತಿಯ ಮೇಲೂ ಅದರ ಫಲವಾಗಿ ಪರಿಸ್ಥಿತಿ ಬದಲಾಗುವುದರ ಮೇಲೂ ಪ್ರಭಾವ ಬೀರುತ್ತವೆ. ಹಳೆಯ ಉತ್ಪಾದನ ಪದ್ಧತಿಯ ಮೇಲಿನ ವಿಚಾರಗಳೆಲ್ಲ ಸಂಪ್ರದಾಯವಾದಿ ರೀತಿಯವು. ಮನುಷ್ಯನ ಕೃತಿ-ಕಾರ್ಯಗಳನ್ನು ಅವು ತಡೆಯುತ್ತವೆ. ಆದುದರಿಂದಲೇ ಆಯಾ ಕಾಲದ ಹಿರಿಯವರ್ಗ ಆ ವಿಚಾರಗಳನ್ನು ಕಲಿಸಿಕೊಡಲು ಸಾಧ್ಯವಿದ್ದಷ್ಟು ಯತ್ನಿಸುತ್ತದೆ. ಉತ್ಪಾದನದ ಹೊಸ ವಿಧಾನಗಳನ್ನು ಅವಲಂಬಿಸಿದ್ದೆಲ್ಲ ಪುರೋಗಾಮಿ ವಿಚಾರಗಳು. ಬದಲಾವಣೆಯನ್ನು ಮುಂದೊತ್ತಿ ಹೊಸ ಪದ್ಧತಿಯೆಡೆಗೆ ಸಾಗಲು ಕಾರ್ಯಾಚರಣೆ ಮಾಡುವಂತೆ ಅವು ಪ್ರೋತ್ಸಾಹಿಸುತ್ತವೆ. ಅದಕ್ಕೇ ಇವು 'ಅಪಾಯಕಾರಿ ವಿಚಾರ' ಗಳು ಎಂದು ಹಿರಿಯ ವರ್ಗ ಭಾವಿಸುವುದು ಹೀಗೆ, ಸಾವಿರಾರು ಮಂದಿ ಅರೆಹೊಟ್ಟೆಯಲ್ಲಿರುವಾಗ ಬೆಲೆ-ಧಾರಣೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಆಹಾರವನ್ನು ನಾಶಮಾಡುವ ಸಮಾಜಪದ್ಧತಿ ಕೆಟ್ಟ ಪದ್ಧತಿ—ಎನ್ನುವುದು 'ಅಪಾಯಕಾರಿ ವಿಚಾರ' ವಾಗುವುದು. ಉತ್ಪಾದನ ಉಪಯೋಗಕ್ಕೋಸ್ಕರ ಇರಬೇಕು; ಲಾಭಕ್ಕಾಗಿ ಅಲ್ಲ—ಎಂಬ ಭಾವನೆ ಹುಟ್ಟಿ, ಅಂತಹ ಸಮಾಜದ ರಚನೆಯಾಗಬೇಕೆಂಬ ವಿಚಾರ ಮೂಡುವುದು. ಇದರ ಫಲವಾಗಿ ಹೊಸ ಪದ್ಧತಿಗಾಗಿ ಯತ್ನಿಸುವ ಸಮಾಜವಾದಿ-ಸಮತಾವಾದಿ ಪಕ್ಷಗಳು ಹುಟ್ಟಿಕೊಳ್ಳುವುವು.

ಆದುದರಿಂದ ಸಮಾಜದ ಬೆಳವಣಿಗೆಯ ಬಗ್ಗೆ ಮಾರ್ಕ್ಸ್‌ವಾದಿಗಿರುವ ಕಲ್ಪನೆ ['ಚಾರಿತ್ರಿಕ ಭೌತಿಕವಾದ' ವೆಂದು ಹೆಸರು], ಮನುಷ್ಯನ ಕೃತಿಗಳಿಗೆಲ್ಲ ಅವನ ಸುತ್ತಲಿನ ವಸ್ತುಪರಿಸ್ಥಿತಿಯೊಂದೇ ಕಾರಣ ಎಂಬ ಸಿದ್ಧಾಂತವಾಗಿರುವ ಭೌತಿಕ 'ನಿರ್ದಿಷ್ಟವಾದ' ವಲ್ಲ. ಅದರ ಬದಲು, ಮನುಷ್ಯನ ಕೃತಿಗಳೂ ಆ ಕೃತಿಗಳಿಗೆ ಕಾರಣವಾದ ಭೌತಿಕ ಬದಲಾವಣೆಗಳೂ ಹುಟ್ಟುವುದು, ಸ್ವಲ್ಪಾಂಶ ಅವನ ಸುತ್ತಲಿನ ವಸ್ತು ಪರಿಸ್ಥಿತಿಯಿಂದ, ಸ್ವಲ್ಪಾಂಶ ಭೌತಿಕ ಜಗತ್ತನ್ನು ನಿಯಂತ್ರಿಸಲು ಅವನಿಗಿರುವ ಸ್ವಂತ ಬುದ್ಧಿಶಕ್ತಿಯಿಂದ. ಮೊದಲು ತಿಳಿಯುವ ಭೌತಿಕ ಜಗತ್ತಿನ ಅನುಭವದಿಂದಲೇ ಅವನಿಗೆ ಈ ಬುದ್ಧಿಶಕ್ತಿ ಬರುವುದು. ಈ ಭೌತಿಕ

ಜಗತ್ತಿನ ಅನುಭವ ಬರುವುದು ಅಸ್ಪಷ್ಟ–ಸುಲಭ–ಸರಳ ರೀತಿಯಲ್ಲಲ್ಲ; ತನ್ನ ಜೀವನಾವಶ್ಯಕ ವಸ್ತುಗಳನ್ನು ಉತ್ಪಾದಿಸುತ್ತ ಹೋದಂತೆ ಅವನಿಗೆ ಈ ಅನುಭವವಾಗುವುದು. ಅವನ ಬುದ್ಧಿಶಕ್ತಿ ಹೆಚ್ಚಿದಂತೆ, ಉತ್ಪಾದನೆಯ ಹೊಸ ವಿಧಾನಗಳನ್ನು ಹುಡುಕಿ ಕಾರ್ಯರೂಪಕ್ಕೆ ತಂದಂತೆ, ಹಳೆಯ ಸಮಾಜ ಘಟನೆಯ ನಿಯಮಗಳು, ಈ ವಿಧಾನಗಳ ಪೂರ್ಣ ಉಪಯೋಗವಾಗದಂತೆ ಮಾಡುವ ನಿರ್ಬಂಧಗಳಾಗುವುವು. ಪ್ರತ್ಯಕ್ಷ ಜೀವನದಲ್ಲಿ ಮನುಷ್ಯನಿಗೆ ಇವರ ಅನುಭವವಾಗುವುದು. ಮೊದಲು ಅವನು, ತನಗೆ ತಡೆಯಾಗಿರುವ ಕೆಲ ಶತ್ರುಗಳನ್ನು, ಹಳೆಯ ಸಮಾಜ ಘಟನೆಯ ಕೆಲ ನಿರ್ಬಂಧಗಳನ್ನು ಇದಿರಿಸುವನು. ಮತ್ತೆ ಅನಿವಾರ್ಯವಾಗಿ ಹಳೆಯ ಪದ್ಧತಿಯನ್ನೆಲ್ಲ ಇದಿರಿಸುವ ಮಹಾ ಸಮರಕ್ಕೆ ಧುಮುಕುವನು.

ಒಂದು ನಿರ್ದಿಷ್ಟ ಮಿತಿಯವರೆಗೆ, ಹಳೆಯ ಸಮಾಜ ಪದ್ಧತಿಯಿಂದ ಹೊಸ ಉತ್ಪಾದಕ ಶಕ್ತಿಗಳು ಹುಟ್ಟಿ ಬೆಳೆದುದೆಲ್ಲ ಅರಿವಿಲ್ಲದೆ ಪೂರ್ವ ಹಂಚಿಕೆಯಿಲ್ಲದೆ ನಡೆಯುವುದು. ಹಳೆಯ ಪದ್ಧತಿಯೇ ಬೇಕೆನ್ನುವ ಹಿಂದಿನ ಸಮಾಜ ರಚನೆಯ ನಿಯಮಗಳ ವಿರುದ್ಧವಾದ ಹೋರಾಟ ಅದೇ ರೀತಿಯಲ್ಲಿ ಆಗುವುದು. ಆದರೆ ಯಾವಾಗಲೂ ಹೊಸ ಉತ್ಪಾದಕ ಶಕ್ತಿಗಳ ಪೂರ್ಣ ಉಪಯೋಗಕ್ಕೆ ಹಳೆಯ ವರ್ಗ ಸಂಬಂಧಗಳು ವಿರೋಧವಾಗಿವೆ ಎಂಬ ಭಾವನೆ ಒಮ್ಮೆ ಸ್ಪಷ್ಟವಾಗುವುದು. ಆ ಘಟ್ಟದ ಅನಂತರ 'ಭವಿಷತ್ತನ್ನು ತನ್ನ ಕೈಯಲ್ಲಿರಿಸಿಕೊಂಡಿರುವ ವರ್ಗ'ದ ಜಾಗೃತ ಕಾರ್ಯಾಚರಣೆ ಆರಂಭವಾಗುವುದು.

ಆದರೆ, ಉತ್ಪಾದಕ ಶಕ್ತಿಗಳನ್ನು ಬೆಳೆಸುವ ಪ್ರವೃತ್ತಿ, ತಿಳಿವಿಲ್ಲದೆ ಹಂಚಿಕೆಯಿಲ್ಲದೆ ಇನ್ನು ಆಗಬೇಕೆಂದಿಲ್ಲ. ಜಾಗೃತ ವ್ಯವಸ್ಥಿತ ವಿಧಾನದಲ್ಲಿ ಮುಂದಿನ ಘಟ್ಟಕ್ಕೆ ಹೋಗಿ, ಉತ್ಪಾದನೆ ತಿಳಿವಿದ್ದು ವ್ಯವಸ್ಥಿತವಾಗಿ ಆಗುವ ಒಂದು ಸಮಾಜವನ್ನು ರಚಿಸಲು ಬೇಕಾಗುವಷ್ಟು–ಸಾಕಾಗುವಷ್ಟು ಸಾಮಾಜಿಕ ನಿಯಮಗಳ ಬದಲಾವಣೆಯ ಬಗ್ಗೆ, ಮನುಷ್ಯ ಅನುಭವ ಪಡೆದಿದ್ದಾನೆ; ಬುದ್ಧಿಶಕ್ತಿಯನ್ನು ಸಂಪಾದಿಸಿದ್ದಾನೆ.

ಎಂಗೆಲ್ಸ್ ಹೇಳುವುದಿದು:

" ಆಗ, ಈ ತನಕ ಇತಿಹಾಸವನ್ನು ರೂಪಿಸುತ್ತಿದ್ದ ಹೊರಗಣ ಬಾಹ್ಯ ಶಕ್ತಿಗಳೇ ಮನುಷ್ಯರ ನಿಯಂತ್ರಣದೊಳಕ್ಕೆ ಬರುವುವು. ಈ ಸ್ಥಿತಿಯಿಂದ ಮುಂದೆ ಮನುಷ್ಯರು, ಪೂರ್ಣ ಜಾಗೃತರಾಗಿ, ತಮ್ಮ ಇತಿಹಾಸವನ್ನು ತಾವೇ ರೂಪಿಸುವರು."

## ೩

## ಭಂಡವಳಶಾಹಿ ಸಮಾಜ

ಬ್ರಿಟನ್ನಿನಲ್ಲಿ ಪಾಳೆಯಗಾರತನವನ್ನು ಹಿಂಬಾಲಿಸಿ ಮುಂದಕ್ಕೆ ಬಂದ, ಕಳೆದ ಶತಮಾನದಲ್ಲಿ ಲೋಕದ ಎಲ್ಲಾ ಕಡೆಗಳಲ್ಲಿ ಸ್ಥಾಪಿತವಾದ, ಉತ್ಪಾದನ ವಿಧಾನವನ್ನು, ಭಂಡವಳ ಪದ್ಧತಿಯನ್ನು, ಅಭ್ಯಾಸಿಸುವುದರಲ್ಲಿ ಮಾರ್ಕ್ಸ್ ತನ್ನ ಜೀವನದ ಹೆಚ್ಚಿನಂಶವನ್ನು ಕಳೆದ. ಭಂಡವಳಶಾಹಿ ವರ್ಗದ " ಚಲನೆಯ ವಿಧಿ " ಯನ್ನು ಹುಡುಕಿ ಹಿಡಿಯುವುದೇ ಅವನ ಅಧ್ಯಯನದ ಉದ್ದೇಶವಾಗಿತ್ತು. ಭಂಡವಳಶಾಹಿ ಯಾವಾಗಲೂ ಇದ್ದಿರಲಿಲ್ಲ, ಅನುಕ್ರಮವಾಗಿ ಬೆಳೆಯುತ್ತ ಬಂದಿತ್ತು. ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಬ್ರಿಟನಿನ " ಔದ್ಯೋಗಿಕ ಕ್ರಾಂತಿ "ಯ ಕಾಲದಲ್ಲಾದ ಭಂಡವಳಶಾಹಿ ಸಮಾಜವೂ ಮಾರ್ಕ್ಸ್‌ನ ಕಾಲದಲ್ಲಿದ್ದುದೂ ಒಂದೇ ರೀತಿಯವಲ್ಲ. ತನ್ನ ಕಾಲದ ಭಂಡವಳಶಾಹಿ ಉತ್ಪಾದನ ವಿಧಾನವನ್ನು ವಿವರಿಸುವುದಷ್ಟೇ ಅವನ ಉದ್ದೇಶವಾಗಿರಲಿಲ್ಲ; ವಸ್ತು ಸ್ಥಿತಿಯ ವಿಭಜನೆಮಾಡಿ ಉತ್ಪಾದನ ವಿಧಾನದ ಬದಲಾವಣೆ ಯಾವ ವಿಧವಾಗಿ ಆಗುತ್ತದೆಂಬುದನ್ನು ಆತ ತೋರಿಸಿ ಕೊಡಬೇಕಾಗಿತ್ತು. ಈ ವಿಷಯವೇ ಹೊಸದಾಗಿತ್ತು. ಇತರ ಆರ್ಥಿಕ ತಜ್ಞರು ಭಂಡವಳ ಶಾಹಿಯನ್ನು ಇದ್ದದ್ದಿದ್ದಂತೆ ತೆಗೆದುಕೊಂಡು, ಅದೊಂದು ನಿರ್ದಿಷ್ಟ—ಸದಾ ಕಾಲ ಹಾಗೆಯೇ ಇರುವ—ಪದ್ಧತಿ ಎಂಬಂತೆ ಬರೆದರು ಮಾರ್ಕ್ಸ್‌ನ ದೃಷ್ಟಿಯಲ್ಲಾದರೆ ಉತ್ಪಾದನ ಪದ್ಧತಿ, ಇತಿಹಾಸದಲ್ಲಿರುವ ಇತರ ಎಲ್ಲಾ ಪದ್ಧತಿಗಳಂತೆ ಬದಲಾಗುತ್ತಿತ್ತು. ಅವನ ಅಧ್ಯಯನದ ಪರಿಣಾಮ ಬರೇ ವಿವರಣೆಯಾಗಿರದೆ ಶಾಸ್ತ್ರೀಯ ಭವಿಷ್ಯತ್ ಕಥನವಾಗಿತ್ತು. ನಿಜಕ್ಕೂ

ಭಂಡವಳಶಾಹಿ ಯಾವ ರೀತಿಯಾಗಿ ಬೆಳೆಯುವುದೆಂಬುದನ್ನು ತೋರಿಸಿ ಕೊಡಲು ಆತ ಶಕ್ತನಾದ.

ಪಾಳೆಯಗಾರರ ಕಾಲದ ವೈಯಕ್ತಿಕ ಉತ್ಪಾದನ ಕ್ರಮದಿಂದಲೇ ಭಂಡವಳಶಾಹಿ ಉತ್ಪಾದನ ಹುಟ್ಟಿ ಬೆಳೆಯಿತು. ಸ್ಥಳೀಯ ಉಪಯೋಗ ಕ್ಕಾಗಿ ಉತ್ಪಾದನವಾಗುತ್ತಿದ್ದುದು ಸರಿಯಾದ ಪಾಳೆಯಗಾರ ವಿಧಾನ: ಆಹಾರ ಬಟ್ಟೆ ಮತ್ತಿತರ ಸಾಮಗ್ರಿಗಳನ್ನು ಗುಲಾಮರು ತಮಗಾಗಿಯೂ ತಮ್ಮ ಧನಿಗಾಗಿಯೂ ಮಾತ್ರ ನಿರ್ಮಿಸುತ್ತಿದ್ದರು. ಆ ಪಂಗಡಕ್ಕೆ ಬೇಕಾ ದಷ್ಟು ನಿರ್ಮಾಣವಾದ ಮೇಲೆ ಉಳಿತಾಯವಾದುದನ್ನು ದೇಶದ ಬೇರೆ ಭಾಗಗಳ ಅಥವಾ ಬೇರೆ ದೇಶಗಳ ಸಾಮಗ್ರಿಗಳೊಡನೆ ವಿನಿಮಯಮಾಡು ವುದು ಆರಂಭವಾಯಿತು. ಆದರೂ ಉತ್ಪಾದನದಲ್ಲಿ ಹೆಚ್ಚಿನಂಶ ಆ ಪಂಗಡ ದವರ ಮತ್ತು ಅವರ ಭೂಮಾಲಿಕನ ವೆಚ್ಚಕ್ಕಾಗಿ ಹೋಗುತ್ತಿತ್ತು.

ಪಾಳೆಯಗಾರ ಪಂಗಡಗಳು ಛಿದ್ರವಾಗಲು ಆರಂಭವಾದಂತೆ ಸ್ವಲ್ಪ ಸ್ವಲ್ಪವಾಗಿ ಉತ್ಪಾದನ ವಿಧಾನ ಬದಲಾಯಿತು ಭಂಡವಳ ಪದ್ಧತಿಯ ಮುಖ್ಯ ಗುಣವಾದ ಲಾಭಕ್ಕಾಗಿ ಉತ್ಪಾದನ ಆರಂಭವಾಯಿತು. ಹೀಗಾ ಗಲು ಎರಡು ವಿಷಯಗಳು ಅಗತ್ಯವಿದ್ದುವು. ಮಗ್ಗ, ನೂಲುವ ಯಂತ್ರ ಮತ್ತಿತರ ಉತ್ಪಾದನ ಸಾಮಗ್ರಿಗಳನ್ನು ಕೊಂಡುಕೊಳ್ಳಲು ದುಡ್ಡಿದ್ದವರು; ಮತ್ತು, ಸ್ವಂತ ಸಾಮಗ್ರಿಗಳಿಲ್ಲದೆ, ಸ್ವತಂತ್ರವಾಗಿ ಜೀವನ ನಡೆಸಲು ಸಾಧ್ಯವಿಲ್ಲದೆ ಇದ್ದವರು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಉತ್ಪಾದನ ಸಾಮಗ್ರಿಗಳನ್ನು ಸ್ವಾಧೀನಪಡಿಸಿಕೊಂಡ "ಭಂಡವಳ ಗಾರರು"; ಮತ್ತು, ಅವರ ಯಂತ್ರಗಳನ್ನು ಚಲಿಸಿ ಸಂಪಾದಿಸುವುದರಿಂದ ಮಾತ್ರ ಬದುಕುವುದು ಸಾಧ್ಯವಿದ್ದ "ಕೂಲಿಕಾರರು."

ಕೂಲಿಕಾರರು ಸಾಮಗ್ರಿಗಳನ್ನು ಉತ್ಪಾದಿಸತೊಡಗಿದ್ದು ತಮ ಗಾಗಿಯೂ ಅಲ್ಲ; ಹೊಸ ಧನಿಯ ಉಪಯೋಗಕ್ಕಾಗಿಯೂ ಅಲ್ಲ; ಭಂಡವಳಗಾರ ದುಡ್ಡಿಗೋಸ್ಕರ ಅವನ್ನು ಮಾರುವುದಕ್ಕಾಗಿ. ಈ ರೀತಿ ನಿರ್ಮಾಣವಾದ ವಸ್ತುಗಳಿಗೆ 'ಸರಕು' [ವ್ಯಾಪಾರದ ದಿನಸು, ಸಾಮಾನು] ಎಂದು ಹೆಸರು; ಅಂದರೆ, ಮಾರ್ಕೆಟಿನಲ್ಲಿ ಮಾರುವುದಕ್ಕಾಗಿ ನಿರ್ಮಾಣವಾದ ವಸ್ತು. ದುಡಿಯುವವನಿಗೆ ಕೂಲಿ ಸಿಕ್ಕಿತು; ಮಾಲಿಕನಿಗೆ

ಲಾಭ ಸಿಕ್ಕಿತು. ಕೊಂಡುಕೊಂಡವನು ಕೊಟ್ಟ ಹಣದಿಂದ ಕೂಲಿಯನ್ನು ಕಳೆದು, ಕಚ್ಚಾಮಾಲು ಮತ್ತಿತರ ಉತ್ಪಾದನ ವೆಚ್ಚಗಳನ್ನು ಕಳೆದು, ಭಂಡವಳಗಾರನ ಕೈಯಲ್ಲಿ ಉಳಿಯುವ ಹಣವೇ ಲಾಭ.

ಈ ಲಾಭ ಹೇಗೆ ಹುಟ್ಟಿತು? ಭಂಡವಳಗಾರ ಉತ್ಪಾದನ ವಸ್ತುಗಳನ್ನು ಅವುಗಳ ಮೌಲ್ಯಕ್ಕಿಂತ ಹೆಚ್ಚು ಬೆಲೆಗೆ ಮಾರಿದುದರಿಂದಲೇ ಈ ಲಾಭ ಹುಟ್ಟಿರಲಾರದು ಎಂದು ಮಾರ್ಕ್ಸ್ ಹೇಳಿದ. ಹಾಗಾಗುವುದಾದರೆ, ಭಂಡವಳಗಾರರೆಲ್ಲ ಎಲ್ಲಾ ಸಮಯದಲ್ಲೂ ಒಬ್ಬರನ್ನೊಬ್ಬರು ಮೋಸಗೊಳಿಸುತ್ತಿದ್ದಾರೆಂದಾಯಿತು. ಒಬ್ಬನು ಈ ರೀತಿಯ ಲಾಭ ಮಾಡಿದಾಗ ಇನ್ನೊಬ್ಬನು ಸಹಜವಾಗಿಯೇ ನಷ್ಟಕ್ಕೊಳಗಾಗಬೇಕೆಂದಾಯಿತು. ಲಾಭ ಮತ್ತು ನಷ್ಟ ಒಂದಕ್ಕೊಂದು ಸರಿಹೋಗಿ, ಕೊನೆಗೆ ಏನೂ ಲಾಭ ಉಳಿಯಲಾರದೆಂದಾಯಿತು. ಆದುದರಿಂದ ಮಾರ್ಕೆಟಿನಲ್ಲಿರುವ ಒಂದು ವಸ್ತುವಿನ ಮೌಲ್ಯದಲ್ಲಿ ಲಾಭವೂ ಅಡಕವಾಗಿರಬೇಕೆಂಬುದು ಸ್ಪಷ್ಟವಾಯಿತು. ವಸ್ತು ಉತ್ಪಾದನೆಯಾಗುತ್ತಿರುವಾಗಲೇ ಈ ಲಾಭ ಹುಟ್ಟಿಕೊಳ್ಳಬೇಕು. ಅದರ ಮಾರಾಟದಿಂದ ಅಲ್ಲ.

ವಸ್ತುವಿನ ನಿಜವಾದ ಬೆಲೆಗಿಂತ ಹೆಚ್ಚು ಮೌಲ್ಯವನ್ನು ಅದಕ್ಕೆ ಸೇರಿಸುವ ಅಂಶವೇನಾದರೂ ಉತ್ಪಾದನದಲ್ಲಿದೆಯೇ ಎಂಬುದನ್ನು ನೋಡಬೇಕು. ಇದಕ್ಕಾಗಿ ಉತ್ಪಾದನದ 'ಗತಿ'ಯನ್ನು ಮೊದಲಿನಿಂದ ಕೊನೆಯ ವರೆಗೆ ಪರೀಕ್ಷಿಸುವುದಗತ್ಯ.

'ಬೆಲೆ' ಎಂಬುದರ ಅರ್ಥವೇನೆಂದು ಮೊದಲು ನೋಡುವುದವಶ್ಯ. ಸಾಮಾನ್ಯ ಭಾಷೆಯಲ್ಲಿ ಅದಕ್ಕಿರುವ ಸ್ಪಷ್ಟ ಅರ್ಥಗಳೆರಡು. ಅದು ಯಾರಿಗಾದರೂ ಬೇಕಾಗಬಹುದು; ಅದಕ್ಕೆ ಬೆಲೆ ಇದೆ; ಅದನ್ನು ಯಾರಾದರೂ ಉಪಯೋಗಿಸುವುದು ಸಾಧ್ಯ-ಎಂಬುದೊಂದು; ಬಾಯಾರಿದ ಮನುಷ್ಯ ಪಾನೀಯಕ್ಕೆ ಬೆಲೆ ಕಟ್ಟುತ್ತಾನೆ; ಕೆಲ ವಸ್ತುವಿಗೆ ಬರೇ ಭಾವನಾಪ್ರಧಾನ ಬೆಲೆ ಕೊಡುವವರೂ ಇರುತ್ತಾರೆ ಆದರೆ ಬಳಕೆಯಲ್ಲಿ 'ಬೆಲೆ'ಗೆ ಇನ್ನೊಂದು ಅರ್ಥವೂ ಇದೆ—ಒಬ್ಬ ಮಾರಾಟಗಾರ ಕೊಂಡುಕೊಳ್ಳುವವನೊಬ್ಬನಿಗೆ ಮಾರ್ಕೆಟಿನಲ್ಲಿ ಒಂದು ವಸ್ತುವನ್ನು ಮಾರುವ ಬೆಲೆ; ಇದಕ್ಕೇ 'ವಿನಿಮಯ ಬೆಲೆ' ಎನ್ನುವುದು.

ಭಂಡವಳಶಾಹಿ ಪದ್ಧತಿಯಲ್ಲೂ ಕೆಲ ವಸ್ತುಗಳನ್ನು, ಕೊಂಡು ಕೊಳ್ಳುವ ಕೆಲ ನಿರ್ದಿಷ್ಟ ಜನರಿಗಾಗಿ, ವಿಶೇಷ ಬೆಲೆಗೆ ಸಿದ್ಧಗೊಳಿಸ ಬಹುದೆಂಬುದು ಸರಿ. ಆದರೆ, ಲಕ್ಷಗಟ್ಟಲೆ ಟನ್ ಭಾರದ ಎಲ್ಲಾ ವಿಧದ ಎಲ್ಲರೂ ಕೊಂಡುಕೊಳ್ಳಬಹುದಾದ ಸರ್ವಸಾಮಾನ್ಯ ಭಂಡವಳಶಾಹಿ ಉತ್ಪಾದನೆಯನ್ನೇ ಮಾರ್ಕ್ಸ್ ಗಣನೆಗೆ ತೆಗೆದುಕೊಂಡ ಸಾಮಾನ್ಯವಾಗಿ ಮಾರ್ಕೆಟಿನಲ್ಲಿ ಒಂದು ವಸ್ತುವಿಗೆ 'ವಿನಿಮಯ ಬೆಲೆ' ಹೇಗೆ ಬರುತ್ತದೆ? ಉದಾಹರಣೆಗಾಗಿ, ಒಂದು ಗಜ ಬಟ್ಟೆಗೆ ಒಂದು ಸೂಜಿ [ಪಿನ್] ಗಿಂತ ಹೆಚ್ಚು ವಿನಿಮಯ ಬೆಲೆ ಇರುವುದೇಕೆ?

ವಿನಿಮಯ ಬೆಲೆಯನ್ನು ಹಣದ ರೂಪದಲ್ಲಿ ನಿರ್ಧರಿಸುತ್ತಾರೆ. ಇಂತಿಷ್ಟು ಹಣ ಒಂದು ವಸ್ತುವಿನ ಬೆಲೆ, ಹಣದ ಮೂಲಕವಾಗಿಯಾಗಲೀ, ವಸ್ತುಗಳ ವಿನಿಮಯದಿಂದಲೇ ಆಗಲಿ, ಒಂದರ ಬೆಲೆಯನ್ನು ಇನ್ನೊಂದ ರೊಡನೆ ತುಲನೆಮಾಡುವುದು ಹೇಗೆ ಸಾಧ್ಯವಾಗಿದೆ? ಸ್ವಲ್ಪ ಹೆಚ್ಚು ಪ್ರಮಾಣದಲ್ಲಿ, ಇಲ್ಲವೆ ಕಡಿಮೆ ಸಂಖ್ಯೆಯಲ್ಲಿ, ಸಾಮಾನ್ಯವಾದ ಒಂದು ಅಂಶ ಪ್ರತಿಯೊಂದು ವಸ್ತುವಿನಲ್ಲೂ ಕಂಡುಬಂದರೆ ಮಾತ್ರ ಈ ತುಲನೆ ಸಾಧ್ಯ ವೆಂದು ಮಾರ್ಕ್ಸ್ ಹೇಳಿದ. ಈ ಸಾಮಾನ್ಯ ಅಂಶ ಬಣ್ಣವಾಗಿರಲಾರದು; ಭಾರವಾಗಿರಲಾರದು; ಮಾನವ ಜೀವನದಲ್ಲಿ ಪ್ರಯೋಜನಕ್ಕೆ ಬೀಳುವ 'ಉಪಯೋಗದ ಬೆಲೆ' ಯಾಗಿರಲಾರದು ಒಂದೇ ಒಂದು ಅಂಶ ಎಲ್ಲಾ ಸಾಮಗ್ರಿಗಳಲ್ಲೂ ಸಾಮಾನ್ಯವಾಗಿ ಕಂಡುಬರುತ್ತದೆ: ಪ್ರತಿಯೊಂದು ವಸ್ತುವೂ ಮನುಷ್ಯನ ದುಡಿಮೆಯಿಂದಲೇ ನಿರ್ಮಿಸಲ್ಪಡುವುದು. ಒಂದು ವಸ್ತುವನ್ನು ತಯಾರಿಸಲು ಹೆಚ್ಚು ಮನುಷ್ಯ ಶ್ರಮದ ಉಪಯೋಗವಾಗಿದ್ದರೆ ಅದಕ್ಕೆ ಹೆಚ್ಚು ವಿನಿಮಯ ಬೆಲೆ ಇರುವುದು ಪ್ರತಿಯೊಂದು ವಸ್ತುವಿನ ಉತ್ಪಾದನೆಗೂ ಬೇಕಾಗುವ 'ದುಡಿಮೆಯ ಸಮಯ' ವನ್ನು ಲೆಕ್ಕಹಾಕಿ ವಿನಿಮಯ ಬೆಲೆಯನ್ನು ಗೊತ್ತುಮಾಡಲಾಗುವುದು.

ಅಂದರೆ, ಪ್ರತಿಯೊಬ್ಬನ ದುಡಿಮೆಯ ಸಮಯವನ್ನೂ ಗಮನಿಸು ತ್ತಾರೆಂದಲ್ಲ. ಮಾರ್ಕೆಟಿನಲ್ಲಿರುವ ಕೊಂಡುಕೊಳ್ಳುವ ಮಾರುವ ಸಾಮಗ್ರಿಗಳ ಬೆಲೆಯೆಲ್ಲ ಸರಾಸರಿ ಬೆಲೆ. ಇಂತಿಷ್ಟು ಭಾರದ ಇಂತಹ ರೀತಿಯ ಒಂದು ಗಜ ನಿರ್ದಿಷ್ಟ ಬಟ್ಟೆಯ ವಿನಿಮಯ ಬೆಲೆಯನ್ನಾದರೆ,

ಅದರ ಉತ್ಪಾದನಕ್ಕೆ 'ಸರಾಸರಿ ಅವಶ್ಯವಿರುವ ದುಡಿಮೆಯ ಸಮಯ' ವನ್ನು ಗೊತ್ತುಹಚ್ಚಿ ನಿರ್ಧರಿಸಲಾಗುವುದು.

ಈ ಸಾಮಾನ್ಯ ತಳಹದಿಯ ಮೇಲೆ, ಭಂಡವಳ ಪದ್ಧತಿಯ ಕೆಳಗೆ ನಿರ್ಮಾಣವಾದ ವಸ್ತುಗಳ ವಿನಿಮಯ ಬೆಲೆಯನ್ನು ನಿರ್ಧರಿಸುವುದೆಂದಾದರೆ, ನಿಜವಾದ ನಿರ್ಮಾಪಕನಿಗೆ—ಕೂಲಿಕಾರನಿಗೆ—ಕೊಡುವ ಕೂಲಿ ಎಷ್ಟೆಂದು ನಿರ್ಣೈಸುವುದು ಹೇಗೆ? ಮಾರ್ಕ್ಸ್ ಇದೇ ರೀತಿ ಪ್ರಶ್ನಿಸಿದ. ಮಾರ್ಕೆಟಿನಲ್ಲಿ ವಿನಿಮಯ ಬೆಲೆ ಇರುವ ಭಂಡವಳ ಪದ್ಧತಿಯ ಕೈಕೆಳಗೆ ನಿರ್ಮಾಣವಾದ ವಸ್ತುಗಳಲ್ಲೂ ಭಂಡವಳ ಪದ್ಧತಿಯ ಕೆಳಗಿರುವ ಕೂಲಿಕಾರರ ಶ್ರಮದಲ್ಲೂ ಸಾಮಾನ್ಯವಾಗಿ ಕಾಣುವ ಅಂಶ ಯಾವುದು? ಸಾಮಾನ್ಯ ವಸ್ತುಗಳ ವಿನಿಮಯ ಬೆಲೆಯನ್ನು ನಿರ್ಧರಿಸುವ ದುಡಿಮೆಯೇ ಆ ಅಂಶ. ಶ್ರಮ ಶಕ್ತಿಯನ್ನು ಉಂಟುಮಾಡಲು ವ್ಯಯವಾದ ದುಡಿಮೆಯ ಸಮಯ ಎಂದರೇನರ್ಥ? ಬದುಕುವುದಕ್ಕಾಗಿ ತನ್ನ ಆಹಾರ, ವಸತಿ, ಬಟ್ಟೆ ಬರೆಗಳನ್ನು ನಿರ್ಮಿಸಲು ಕೂಲಿಕಾರ ವ್ಯಯಮಾಡುತ್ತಿರುವ ಸಮಯವೇ ದುಡಿಮೆಯ ಸಮಯ. ಸಾಧಾರಣವಾಗಿ ಭಂಡವಳ ಸಮಾಜದಲ್ಲಿ ಕೂಲಿಕಾರ ತನ್ನ ಕುಟುಂಬ ಪೋಷಣೆಯ ವಿಚಾರವನ್ನು ಲೆಕ್ಕಕ್ಕೆ ತೆಗದುಕೊಳ್ಳಬೇಕಾಗುತ್ತದೆ. ಈ ಎಲ್ಲ ವಸ್ತುಗಳನ್ನು ನಿರ್ಮಿಸಲು ಅವಶ್ಯವಿರುವ ದುಡಿಮೆಯ ಸಮಯವೇ ಕೂಲಿಕಾರನ ಶ್ರಮಶಕ್ತಿಯ ವಿನಿಮಯ ಬೆಲೆಯನ್ನು ಗೊತ್ತುಮಾಡುತ್ತದೆ. ಆ ಶ್ರಮಶಕ್ತಿಯನ್ನೇ ಕೂಲಿ ಸಂಪಾದಿಸುವುದಕ್ಕೋಸ್ಕರ ಭಂಡವಳಗಾರನಿಗೆ ಆತ ಮಾರುತ್ತಾನೆ.

ಈ ಆಧುನಿಕ ಭಂಡವಳಶಾಹಿ ಸಮಾಜದಲ್ಲಿ ಒಬ್ಬ ಕೂಲಿಕಾರ ತನಗೆ ಅವಶ್ಯವಿರುವ ಸಾಮಗ್ರಿಗಳನ್ನು ನಿರ್ಮಿಸಲು ಬೇಕಾಗುವ ಶ್ರಮಶಕ್ತಿ ನಾಲ್ಕೇ ಗಂಟೆಗಳ ಕಾಲದ್ದಿರಬಹುದು; ಆದರೆ ಎಂಟು, ಹತ್ತು, ಇಲ್ಲವೆ ಅದಕ್ಕಿಂತಲೂ ಹೆಚ್ಚು ಗಂಟಗಳ ಕಾಲ ಆತ ದುಡಿಯುತ್ತಾನೆ. ಪ್ರತಿ ದಿನದ ಮೊದಲ ನಾಲ್ಕು ಗಂಟೆಗಳ ಕಾಲ ಕೂಲಿಕಾರ ತನಗೆ ಬರಬೇಕಾದ ಕೂಲಿಗೆ ಸರಿಯಾಗುವಷ್ಟು ದುಡಿಯುತ್ತಾನೆ. ಉಳಿದ ಸಮಯದಲ್ಲಿ ಅವನು ಉತ್ಪಾದಿಸುವುದೆಲ್ಲ "ಉಳಿತಾಯ ಬೆಲೆ"; ಮಾಲಿಕ ಅದನ್ನು ವಶಪಡಿಸಿಕೊಳ್ಳುತ್ತಾನೆ. ಹೀಗೆ ಭಂಡವಳಶಾಹಿಗೆ ಲಾಭ ಸಿಗುತ್ತದೆ. ತನ್ನ

ಜೀವನಕ್ಕೆ ಬೇಕಾಗುವ ಬೆಲೆಗಿಂತ ಕೂಲಿಕಾರ ಹೆಚ್ಚು ನಿರ್ಮಿಸಿದ್ದೆಲ್ಲ ಲಾಭ. ಕೂಲಿಯ ರೂಪದಲ್ಲಿ ಅವನಿಗೆ ಸಿಗುವ ಹಣಕ್ಕಿಂತ ಹೆಚ್ಚಿನದೆಲ್ಲ ಲಾಭ.

ಬೆಲೆ ಮತ್ತು ಉಳಿತಾಯ ಬೆಲೆಯ ಬಗ್ಗೆ ಮಾರ್ಕ್ಸ್ ಕೊಟ್ಟಿರುವ ವಿವರಣೆಯ ಸೂಕ್ಷ್ಮ ನಿರೂಪಣೆ ಇದು. ವಿವಿಧ ರೂಪಗಳೆಲ್ಲವನ್ನೂ ವಿಸ್ತೃತವಾಗಿ ವಿವರಿಸುವುದು ಇಲ್ಲಿ ಸಾಧ್ಯವಿಲ್ಲ. ಆದರೂ ಕೆಲ ಸಾಮಾನ್ಯ ವಿಷಯಗಳನ್ನು ಎತ್ತಿ ತೋರಿಸಬಹುದು.

ಈ ಎಲ್ಲ ಪೃಥಕ್ಕರಣದ ತಳಹದಿ 'ವಿನಿಮಯ ಬೆಲೆ'ಯಾದುದರಿಂದ ಆ ಪದವನ್ನು ಉಪಯೋಗಿಸಲಾಗಿದೆ. ಆದರೆ ಪ್ರತ್ಯಕ್ಷ ಜೀವನದಲ್ಲಿ ವಿನಿಮಯ ಬೆಲೆಯಷ್ಟಕ್ಕೇ ವಸ್ತುಗಳ ಮಾರಾಟವಾಗುವುದು ಬಲು ಕಡಿಮೆ. ನಿರ್ಮಿತ ವಸ್ತುವಿಗಾಗಲೀ, ದೈಹಿಕ ಶ್ರಮ-ಶಕ್ತಿಗಾಗಲೀ, ಮಾರ್ಕೆಟಿನಲ್ಲಿ ಒಂದು 'ಕ್ರಯ' ವಿರುತ್ತದೆ; ಸರಿಯಾದ ವಿನಿಮಯ ಬೆಲೆಗಿಂತ ಇದು ಹೆಚ್ಚಿರಬಹುದು ಇಲ್ಲವೆ ಕಡಿಮೆ ಇರಬಹುದು. ಯಾವುದಾದರೊಂದು ವಸ್ತು ಮಾರ್ಕೆಟಿನಲ್ಲಿ ಆ ದಿನ ಬೇಕಷ್ಟು ಇದ್ದರೆ, ಸರಿಯಾದ ವಿನಿಮಯ ಬೆಲೆಗಿಂತ ಕ್ರಯ ಎಷ್ಟೋ ಕಡಿಮೆ ಇರಬಹುದು. ಅಥವಾ ಆ ವಸ್ತುವಿನ ಅಭಾವವಿದ್ದರೆ ಕ್ರಯ ವಿನಿಮಯ ಬೆಲೆಗಿಂತ ಹೆಚ್ಚಿರಬಹುದು ಕ್ರಯದ ಈ ಏರಿಳಿತಕ್ಕೆ 'ಪೂರೈಕೆ ಮತ್ತು ಬೇಡಿಕೆ'ಯೇ ಪ್ರಧಾನ ಕಾರಣ. ಇದನ್ನು ನೋಡಿದ ಭಂಡವಳಶಾಹಿ ಅರ್ಥಶಾಸ್ತ್ರಜ್ಞರು ಕ್ರಯವನ್ನು ಗೊತ್ತು ಮಾಡುವುದು 'ಪೂರೈಕೆ ಮತ್ತು ಬೇಡಿಕೆ' ಯೊಂದೇ ಎಂದು ಹೇಳಿದರು. ಆದರೆ ಪೂರೈಕೆ ಮತ್ತು ಬೇಡಿಕೆ ಕ್ರಯದಲ್ಲಿನ ಏರಿಳಿತಕ್ಕೆ ಮಾತ್ರ ಕಾರಣ ಎಂಬುದು ಸ್ಪಷ್ಟ ಆ ಕ್ರಯದ ಮಟ್ಟ ಒಂದು ಬಿಡಿ ಕಾಸೋ ನೂರು ರೂಪಾಯಿಯೋ ಎಂದು ಗೊತ್ತುಪಡಿಸುವುದು ಪೂರೈಕೆ ಮತ್ತು ಬೇಡಿಕೆಯಲ್ಲ; ಆ ವಸ್ತುವಿನ ನಿರ್ಮಾಣಕ್ಕಾಗಿ ಉಪಯೋಗಿಸಲ್ಪಡುವ ದುಡಿಮೆಯ ಸಮಯ. ಪೂರೈಕೆ ಮತ್ತು ಬೇಡಿಕೆ, ಶ್ರಮಶಕ್ತಿಯ ಕ್ರಯದ ಮೇಲೆ ಕೊಡಲಾಗುವ ಕೂಲಿಯ ಮೇಲೆ ಪ್ರಭಾವ ಬೀರುತ್ತದೆ. ಆ ಸ್ಥಳದ ಕಾರ್ಮಿಕ ಸಂಘಟನೆಯ ಶಕ್ತಿಯಂತಹ ಬೇರೆ ಅಂಶಗಳೂ ಶ್ರಮಶಕ್ತಿಯ ಕ್ರಯದ ಕೂಲಿಯ ಮೇಲೆ ಪ್ರಭಾವ ಬೀರುತ್ತವೆ. ಹೀಗಿದ್ದರೂ ಸಾಧಾರಣ ಭಂಡವಳಶಾಹಿ ಸಮಾಜದಲ್ಲಿ ಶ್ರಮಶಕ್ತಿಯ ಬೆಲೆ ಒಂದು

ನಿರ್ದಿಷ್ಟ ಮಟ್ಟದ ಮೇಲೋ ಕೆಳಗೋ ಏರಿಳಿಯುತ್ತಿರುತ್ತದೆ. ಆ ಕೂಲಿಕಾರ ಜೀವಿಸಿರಲು ಬೇಕಾಗುವ ವೆಚ್ಚವೇ ಆ ಕೂಲಿಯ ಮಟ್ಟ. ಇದನ್ನು ವಿಚಾರಿಸುವಾಗ ವಿವಿಧ ತರಗತಿಯ ಬೇರೆ ಬೇರೆ ಸಂಗಡಗಳ ಕೂಲಿಕಾರರ ಜೀವನ ವೆಚ್ಚವೂ ವಿಭಿನ್ನವಾಗಿಯೇ ಇದೆ ಎಂಬುದನ್ನು ಗಮನಿಸಬೇಕು. ಈ ರೀತಿಯ ವಿಭಿನ್ನತೆಗೆ ಹಿಂದಿನ ಕಾರ್ಮಿಕ ಸಂಘಗಳ ಚಳುವಳಿಯೇ ಕಾರಣ ಅಂತಹ ಆಂದೋಲನಗಳ ಪರಿಣಾಮವಾಗಿಯೇ ಬರೇ ಉಸಿರು ಹಿಡಿದುಕೊಂಡು ಬದುಕಿರುವುದಕ್ಕಿಂತಲೂ ಸ್ವಲ್ಪ ಮೇಲಣ ಮಟ್ಟದ ಜೀವನ ಕೆಲವರಿಗೆ ಸಿಕ್ಕಿತು.

ವಿವಿಧ ವಿಭಾಗಗಳ ಕೂಲಿಕಾರರ ಶ್ರಮಶಕ್ತಿಯ ಬೆಲೆಯೂ ಒಂದೇ ವಿಧವಾಗಿಲ್ಲ. ನುರಿತ ಯಂತ್ರಜ್ಞ ಒಂದು ಗಂಟೆಯಲ್ಲಿ ಉತ್ಪಾದಿಸುವ ಬೆಲೆ ಸಾಮಾನ್ಯ ಕೂಲಿಕಾರ ಒಂದು ಗಂಟೆಯಲ್ಲಿ ಮಾಡುವ ಕೆಲಸಕ್ಕಿಂತ ಎಷ್ಟೋ ಹೆಚ್ಚು. ಮಾರ್ಕೆಟಿನಲ್ಲಿ ವಸ್ತುಗಳನ್ನು ಮಾರುವಾಗ ಈ ವ್ಯತ್ಯಾಸಗಳನ್ನು ಗಮನಿಸಲಾಗುವುದೆಂದು ಮಾರ್ಕ್ಸ್ ತೋರಿಸಿಕೊಟ್ಟ. "ಹೆಚ್ಚು ನುರಿತ ಕೆಲಸಗಾರ ಒಂದು ಘಂಟೆಯಲ್ಲಿ ಮಾಡಿದುದಕ್ಕೂ ಕೂಲಿಕಾರ ಒಂದು ಘಂಟೆಯಲ್ಲಿ ಮಾಡಿದುವಕ್ಕೂ ಇರುವ ನಿರ್ದಿಷ್ಟ ಸಂಬಂಧವನ್ನು ವಸ್ತುಗಳ ಬೆಲೆ ತೋರಿಸಿತು."

ಈ ಬೆಲೆಯೊಳಗಿನ ವ್ಯತ್ಯಾಸ ಹೇಗೆ ಹುಟ್ಟುತ್ತದೆ? ಮಾರ್ಕ್ಸ್‌ನ ಉತ್ತರವಿದು: ಜಾಣ್ಮೆ ಇಲ್ಲದಿರುವುದರಿಂದ ಜಾಣ್ಮೆ ಇರುವುದೇ ನೈತಿಕವಾಗಿ ಮೇಲು ಎಂಬ ಯಾವುದಾದರೂ 'ತತ್ವ' ದಿಂದಲ್ಲ; ಬೇರೆ ಯಾವುದಾದರೂ ಅಸ್ಪಷ್ಟ ಕಲ್ಪನೆಯಿಂದಲ್ಲ. ನುರಿತ ಕೆಲಸಗಾರನ ಶ್ರಮಶಕ್ತಿಗೆ ಕೂಲಿಕಾರನ ಶ್ರಮಶಕ್ತಿಗಿಂತ ಹೆಚ್ಚು ವಿನಿಮಯ ಬೆಲೆ ಇರುವಂತೆ ಮಾಡಿರುವ ಅಂಶವೇ ಉಗಿಹಡಗ ದೋಣಿಗಿಂತ ಹೆಚ್ಚು ಬೆಲೆಬಾಳುವಂತೆ ಮಾಡಿದೆ. ಉಗಿ ಹಡಗನ್ನು ಮಾಡಲು ಹೆಚ್ಚು ದೈಹಿಕ ದುಡಿಮೆ ವ್ಯಯವಾಗಿದೆ. ಕೆಲಸ ಗಾರನನ್ನು ವಿಚಕ್ಷಣನಾಗಿ ಮಾಡುವ ಶಿಕ್ಷಣಕ್ಕೂ ಆ ಜಾಣ್ಮೆಯನ್ನು ಉಳಿಸಿಕೊಳ್ಳಲು ಅವಶ್ಯವಿರುವ ಮೇಲ್ಮಟ್ಟದ ಜೀವನ ಪದ್ಧತಿಗೂ ಹೆಚ್ಚು ದುಡಿಮೆಯ ಸಮಯ ಬೇಕು.

ಹಿಂದಿನ ಸರಾಸರಿಗಿಂತಲೂ ಮುಂದೆ ದುಡಿಮೆಯ ವೇಗವನ್ನು

ಹೆಚ್ಚಿಸುವುದು, ಇಲ್ಲವೆ ದುಡಿಮೆಯ ಸಮಯವನ್ನೇ ಹೆಚ್ಚಿಸುವುದು— ಎರಡೂ ಒಂದೇ; ಎಂಟು ಗಂಟೆಗಳ ಕಾಲ ವೇಗವಾಗಿ ದುಡಿದು, ಸಾಧಾರಣವಾಗಿ ಹತ್ತು ಗಂಟೆಗಳ ದುಡಿಮೆಯಿಂದ ಉತ್ಪಾದಿಸುವ ಬೆಲೆಯನ್ನೇ ಉಂಟುಮಾಡಬಹುದು.

ಲಾಭದ ಮೂಲವನ್ನು ತೋರಿಸಲು ಮಾರ್ಕ್ಸ್ ಮಾಡಿದ ಪೃಥಕ್ಕರಣದ ಪ್ರಾಧಾನ್ಯವೇನು? ಭಂಡವಳಶಾಹಿ ಕಾಲದ ವರ್ಗಸಮರವನ್ನು ಅದು ವಿವರಿಸುತ್ತದೆ. ಯಾವ ಕಾರ್ಖಾನೆ ಇಲ್ಲವೆ ಉದ್ಯಮದಲ್ಲೇ ಆಗಲಿ ದುಡಿದವರಿಗೆ ಸಿಗುವ ಕೂಲಿ ಅವರು ಉತ್ಪಾದಿಸುವ ಬೆಲೆಗೆ ಸಮವಾಗಿರುವುದಿಲ್ಲ. ಆ ಬೆಲೆಯ ಅರ್ಧದಷ್ಟು ಇಲ್ಲವೆ ಅದಕ್ಕಿಂತಲೂ ಕಡಿಮೆ ಇರುತ್ತದೆ. ದುಡಿಮೆಯ ದಿನದಲ್ಲಿ ಕೂಲಿಕಾರ ಉತ್ಪಾದಿಸುವ ಬೆಲೆಯ ಉಳಿದ ಅಂಶವೆಲ್ಲ [ತನ್ನ ಕೂಲಿಗೆ ಸಮವಾಗುವಷ್ಟನ್ನು ಕಳೆದು ಉಳಿದ ಭಾಗವೆಲ್ಲ] ನೇರವಾಗಿ ಮಾಲಿಕನ ಚೀಲದೊಳಗೆ ಬೀಳುವುದು. ಆದುದರಿಂದ ಮಾಲಿಕ ಕೂಲಿಕಾರನ ದುಡಿಮೆಯನ್ನು ಹೆಚ್ಚಿಸಲು ಯಾವಾಗಲೂ ಯತ್ನಿಸುತ್ತಿರುತ್ತಾನೆ. ಇದನ್ನು ಅವನು ಹಲ ವಿಧಗಳಲ್ಲಿ ಸಾಧಿಸಬಹುದು; ದುಡಿಯುವವನ ಕೂಲಿಯನ್ನು ಕಡಿಮೆ ಮಾಡುವುದು; ಇದರಿಂದ ಕೂಲಿಕಾರ ದಿನದಲ್ಲ ಕಡಿಮೆ ಅಂಶವನ್ನು ತನಗಾಗಿಯೂ ಹೆಚ್ಚಿನದನ್ನು ಮಾಲಿಕನಿಗಾಗಿಯೂ ಉಪಯೋಗಿಸುತ್ತಾನೆ ದುಡಿಮೆಯನ್ನು ಬಿಗಿ ಮಾಡುವುದರಿಂದ ಇಲ್ಲವೆ ಅದರ ವೇಗವನ್ನು ಹೆಚ್ಚಿಸುವುದರಿಂದ ಮೇಲಿನ ಪ್ರತಿಫಲವೇ ಸಿಗುತ್ತದೆ; ದಿನದ ಸ್ವಲ್ಪ ಅಂಶವನ್ನು ಮಾತ್ರ ಕೂಲಿಕಾರ ತನ್ನ ಅವಶ್ಯತೆಗಳಿಗಾಗಿ ಉಪಯೋಗಿಸಿ ಹೆಚ್ಚು ಹೊತ್ತು ಧನಿಗಾಗಿ ದುಡಿಯುತ್ತಾನೆ. ದುಡಿಮೆಯ ಸಮಯವನ್ನು ದೀರ್ಘಗೊಳಿಸುವುದರಿಂದಲೂ ಅದೇ ಫಲ ಸಿಗುವುದು; ಮಾಲಿಕನಿಗಾಗಿ ದುಡಿಯುವ ದಿನದ ಅಂಶ ಜಾಸ್ತಿಯಾಗುವುದು. ಕೂಲಿಕಾರ ಮಾತ್ರ, ಹೆಚ್ಚು ಕೂಲಿ ಮತ್ತು ಕಡಿಮೆ ದುಡಿಮೆಯ ಸಮಯವನ್ನು ಕೇಳಿಯೂ ವೇಗಗೊಳಿಸುವುದನ್ನು ಪ್ರತಿಭಟಿಸಿಯೂ ತನ್ನ ಸ್ಥಿತಿಯನ್ನು ಸುಧಾರಿಸಲು ಯತ್ನಿಸುವನು.

ಇದೊಂದು ನಿರಂತರ ಸಮರ: ಭಂಡವಳಶಾಹಿ ಪದ್ಧತಿಯ ಉತ್ಪಾದನವಿರುವವರೆಗೆ ಮಾಲಿಕ ಕೂಲಿಕಾರರೊಳಗಿನ ಹೋರಾಟ ನಿಲ್ಲದು. ಮಾಲಿಕ

ನೊಬ್ಬನನ್ನು ಇದಿರಿಸುವ ಒಬ್ಬ ಕೂಲಿಕಾರ ಇಲ್ಲವೆ ಕೂಲಿಕಾರರ ಒಂದು ತಂಡ—ಈ ತಳಹದಿಯ ಮೇಲೆ ಆರಂಭವಾದ ಹೋರಾಟ ಕ್ರಮಶಃ ವಿಸ್ತೃತವಾಗುವುದು. ಕಾರ್ಮಿಕ ಸಂಘ, ಮಾಲಿಕರ ಸಂಘ—ಇವೆರಡು, ಎರಡೂ ವರ್ಗಗಳ ಮುಖ್ಯ ವಿಭಾಗಗಳು ಒಂದಕ್ಕೊಂದು ಇದಿರಾಗಿ ಕಾರ್ಯ ಪ್ರವೃತ್ತವಾಗುವಂತೆ ಮಾಡುವುವು. ಕೊನೆಯದಾಗಿ, ಕೂಲಿಕಾರರ ರಾಜಕೀಯ ಸಂಘಟನೆಗಳು ಕಟ್ಟಲ್ಪಡುವುವು. ಇವು ಬೆಳೆದಂತೆ ಜನತೆಯ ಎಲ್ಲಾ ಔದ್ಯೋಗಿಕ ಸಂಗಡಗಳೂ ವಿಭಾಗಗಳೂ ಒಂದುಗೂಡುವುವು. ಭಂಡವಳವರ್ಗಕ್ಕಿದಿರಾದ ಸಂಘಟಿತ ಸಮರ ಆರಂಭವಾಗುವುದು. ಅತಿ ಬಲವಾದ ಹೋರಾಟವೆಂದರೆ ಕ್ರಾಂತಿ—ಭಂಡವಳವರ್ಗವನ್ನು ಉರುಳಿಸುವುದು: ಕೂಲಿಕಾರರು, ದಿನದ ಒಂದು ಭಾಗವನ್ನು ಇನ್ನೊಂದು ವರ್ಗದ ಲಾಭಕ್ಕಾಗಿ ದುಡಿಯುವ ಅಗತ್ಯವಿಲ್ಲದಿರುವ ಹೊಸ ಉತ್ಪಾದನ ಪದ್ಧತಿಯನ್ನು ಸ್ಥಾಪಿಸುವುದು. ಈ ವಿಷಯವನ್ನು ಮುಂದಿನ ಅಧ್ಯಾಯಗಳಲ್ಲಿ ಹೆಚ್ಚಾಗಿ ವಿವರಿಸಲಾಗಿದೆ. ತಿಳಿದುಕೊಳ್ಳಬೇಕಾದ ಮುಖ್ಯ ವಿಷಯವಿದು: ಭಂಡವಳಶಾಹಿ ಸಮಾಜದಲ್ಲಿ ವರ್ಗಸಮರವಾಗುತ್ತಿರುವುದಕ್ಕೆ ಭಂಡವಳಶಾಹಿ ಉತ್ಪಾದನ ಪದ್ಧತಿಯ ಗುಣವೇ ಕಾರಣ ಉತ್ಪಾದನ ವ್ಯವಸ್ಥೆಯಲ್ಲಿ ಹೆಜ್ಜೆ ಹೆಜ್ಜೆಗೂ ಒಂದಕ್ಕೊಂದು ತಾಗಿ ಬರುವ ಎರಡು ವರ್ಗಗಳ ಪರಸ್ಪರ ವಿರೋಧವಾದ 'ಸ್ವಾರ್ಥ' ವೇ ಹೋರಾಟಕ್ಕೆ ಕಾರಣ.

ಕೂಲಿ ಮತ್ತು ಲಾಭದ ವಿವರಣೆಯಾಯಿತು; ಇನ್ನು 'ಭಂಡವಳ'ದ ಅಭ್ಯಾಸಕ್ಕೆ ತೊಡಗೋಣ. ಉತ್ಪಾದನದ ಸಮಯದಲ್ಲಿ ಕೂಲಿಕಾರ ಉಂಟುಮಾಡುವ 'ಉಳಿತಾಯ ಬೆಲೆ'ಯೆಲ್ಲವನ್ನೂ ಮಾಲಿಕನೊಬ್ಬನೇ ಅನುಭವಿಸುವುದಿಲ್ಲವೆಂಬುದನ್ನು ಮೊದಲು ಗಮನಿಸಬೇಕು. ಈ 'ಉಳಿತಾಯ ಬೆಲೆ' ಒಂದು ನಿಧಿಯಾಗಿರುವುದು. ವಿವಿಧ ಭಂಡವಳಶಾಹಿ ಸಂಗಡಗಳು ಅದರಿಂದ ಪಾಲು ಪಡೆಯುವುವು. ಭೂಮಾಲಿಕನಿಗೆ ಬಾಡಿಗೆ ಬರುವುದು. ಬ್ಯಾಂಕರಿಗೆ ಬಡ್ಡಿ ಸಿಗುವುದು; ಮಧ್ಯಸ್ಥ [ದಲ್ಲಾಲಿ] ತನ್ನ "ವ್ಯಾಪಾರಿಯ ಲಾಭ"ವನ್ನು ಪಡೆಯುವನು; ಇಷ್ಟಾಗಿ ಉಳಿದುದೆಲ್ಲ ಆ ಔದ್ಯೋಗಿಕ ಮಾಲಿಕನಿಗೆ ಸಿಗುವ ಲಾಭ. ಹೀಗೆಂದು ಹಿಂದೆ ಮಾಡಿದ ವಿವರಣೆಗೇನೂ ಇದರಿಂದ ಧಕ್ಕೆ ತಗಲುವುದಿಲ್ಲ. ಭಂಡವಳಶಾಹಿ ವಿಭಾಗ

ಗಳು ಲಾಭವನ್ನು ಹಂಚಿಕೊಳ್ಳುವ ಕೆಲಸದಲ್ಲಿ ತಮ್ಮೊಳಗೇ ಒಂದು ಚಿಕ್ಕ ಹೋರಾಟವನ್ನು ನಡೆಸುತ್ತಾರೆ ಎಂಬುದಷ್ಟೇ ಇದರ ಅರ್ಥ. ಆದರೆ, ಕೂಲಿಕಾರವರ್ಗದಿಂದ ಎಷ್ಟು ಹೆಚ್ಚು ಸಾಧ್ಯವೋ ಅಷ್ಟೆಲ್ಲವನ್ನೂ ಸಂಪಾದಿಸುವುದರಲ್ಲಿ ಅವರು ಸಂಘಟಿತರಾಗಿದ್ದಾರೆ.

ಭಂಡವಾಳವೆಂದರೇನು?

ಅದಕ್ಕೆ ಹಲವು ರೂಪಗಳಿವೆ: ಯಂತ್ರಗಳು, ಕಟ್ಟಡ, ಕಚ್ಚಾಮಾಲು, ಇದ್ದಲು ಮತ್ತು ಉತ್ಪಾದನೆಗೆ ಅವಶ್ಯವಿರುವ ಇತರ ಸಾಮಗ್ರಿಗಳು; ಉತ್ಪಾದಿಸಿದುದಕ್ಕಾಗಿ ಕೂಲಿಕೊಡಲು ಬೇಕಾಗುವ ಹಣವೂ ಭಂಡವಾಳವೇ.

ಆದರೆ ಎಲ್ಲಾ ಯಂತ್ರ, ಕಟ್ಟಡ, ಇತ್ಯಾದಿಗಳೂ ಎಲ್ಲಾ ಹಣವೂ ಭಂಡವಾಳವಲ್ಲ ಉದಾಹರಣೆಗಾಗಿ, ಸಮುದ್ರತೀರದಲ್ಲಿರುವ ಒಬ್ಬ ರೈತನಿಗೆ [ಕೃಷಿಕ, ಕಿಸಾನ], ಉಳಿದುಕೊಳ್ಳಲು ಒಂದು ಮನೆಯಿರಬಹುದು; ಅದರ ಸುತ್ತೂ ಕೆಲ ಚದರ ಗಜ ನೆಲವಿರಬಹುದು; ದನ, ಹೋರಿ, ಕೋಳಿ, ಒಂದು ದೋಣಿ–ಇಷ್ಟಿರಬಹುದು: ಚಿಲ್ಲರೆ ಸ್ವಂತದ ಸ್ವಲ್ಪ ಹಣವೂ ಇರಬಹುದು. ಆದರೆ, ಅವನ ಕೈಕೆಳಗೆ ಬೇರೆ ಯಾರೂ ದುಡಿಯುವುದಿಲ್ಲವಾದರೆ, ಆತ ತನ್ನೊಬ್ಬನ ಮಾಲಿಕನೇ ಆಗಿದ್ದರೆ, ಅವನ ಸೊತ್ತು 'ಭಂಡವಾಳ'ವಲ್ಲ. ಸೋವಿಯೆಟ್ ಯೂನಿಯನಿನಲ್ಲಿ ಈ ದಿನ ರೈತನ ಪರಿಸ್ಥಿತಿ ಇದೇ.

ಸೊತ್ತು, ಅದು ಯಾವ ರೂಪದಲ್ಲೇ ಇರಲಿ, ಉಳಿತಾಯ ಬೆಲೆಯನ್ನು ಉತ್ಪಾದಿಸಲು ಉಪಯೋಗಿಸಲ್ಪಟ್ಟಾಗ ಮಾತ್ರ ಭಂಡವಾಳವಾಗುವುದು. ಎಂದರೆ, ಉತ್ಪಾದನೆಯ ಕಾಲದಲ್ಲಿ ಉಳಿತಾಯ ಬೆಲೆಯನ್ನು ಉಂಟುಮಾಡುವ ಕೂಲಿಕಾರರನ್ನು ನೇಮಿಸಲು ಆ ಸೊತ್ತು ಉಪಯೋಗಿಸಲ್ಪಟ್ಟರೆ ಅದು ಭಂಡವಾಳವಾಗುವುದು

ಅಂತಹ ಭಂಡವಾಳದ ಮೂಲ ಯಾವುದು?

ಹಿಂದಿನ ಇತಿಹಾಸದಲ್ಲಿ ಇಣಿಕಿ ನೋಡಿದರೆ ತಿಳಿದೀತು. ತಲೆಯೊಡೆದು ದರೋಡೆ ಮಾಡಿದ್ದೇ ಹಿಂದಿನ ಭಂಡವಾಳವಾಗುತ್ತಿತ್ತು. ಅಮೆರಿಕ, ಹಿಂದೂಸ್ಥಾನ, ಆಫ್ರಿಕಗಳಿಂದ ಕೆಲ ಸಾಹಸಿ–ಪ್ರವಾಸಿಗಳು ಚಿನ್ನ ಮತ್ತಿತರ ಬೆಲೆಬಾಳುವ ವಸ್ತುಗಳ ರೂಪದಲ್ಲಿ ಅಗಣಿತ ಭಂಡವಾಳವನ್ನು ಲೂಟಿಮಾಡುತ್ತಿದ್ದರು. ಈ ರೀತಿಯ ದರೋಡೆಯೊಂದರಿಂದಲೇ ಭಂಡವಾಳ

ಹುಟ್ಟಿದ್ದಲ್ಲ. ಬ್ರಿಟನಿನಲ್ಲೇ "ಭದ್ರಗೊಳಿಸುವ ಕಾನೂನಿ" ಗೆ ಅನುಸಾರವಾಗಿಯೇ ಎಷ್ಟೋ ಭೂಮಿ ಭಂಡವಳಶಾಹಿ ಭೂಮಾಲಿಕನ ಬಗಲೊಳಗೆ ಬಿತ್ತು. ಹಾಗೆ ಮಾಡಿದ್ದುದರಿಂದ ಎಷ್ಟೋ ರೈತರಿಗೆ ಜೀವನ ಸಾಧನವಿಲ್ಲದಾಯಿತು. ಅವರು ಕೂಲಿಕಾರರಾದರು. ಬೇರೆ ಜೀವನೋಪಾಯವಿಲ್ಲದೆ, ಹೊಸ ಮಾಲಿಕನಿಗಾಗಿ ಆ ಹೊಲಗಳಲ್ಲಿ ಅವರು ದುಡಿದರು. ಹೀಗೆ ಕಸಿದುಕೊಂಡ ಸೊತ್ತುಗಳೇ ["ಪುರಾತನ ಸಂಗ್ರಹ"] ಭಂಡವಳದ ಮೂಲವೆಂದು ಮಾರ್ಕ್ಸ್ ತೋರಿಸಿಕೊಟ್ಟಿದ್ದಾನೆ. ಕೆಲವರು, ಬಾಯಿಕಟ್ಟಿ ಕಾಸಿಗೆ ಕಾಸುಕೂಡಿಸಿ, ಭಂಡವಳ ಹುಟ್ಟಿದ್ದಲ್ಲ. ಅಂತಹ ಕಟ್ಟುಕತೆಯನ್ನು ಮಾರ್ಕ್ಸ್ ಈ ಕೆಳಗಿನ ಮಾತುಗಳಲ್ಲಿ ಛೀಗಳೆದಿದ್ದಾನೆ.

"ವೇದಾಂತದಲ್ಲಿ 'ಮೂಲ ಪಾಪ' ಹೇಗೆಯೋ ಹಾಗೆಯೇ ರಾಜಕೀಯ ಅರ್ಥಶಾಸ್ತ್ರದಲ್ಲಿ 'ಪುರಾತನ ಸಂಗ್ರಹ'. ಆಡಂ ಸೇಬು ಹಣ್ಣನ್ನು ಕಚ್ಚಿದ, ಹೀಗಾಗಿ ಮಾನವ ಕುಲವೇ ಪಾಪಿಯಾಯಿತು.... ಹಿಂದಿನ ಕಾಲದಲ್ಲಿ ಎರಡು ರೀತಿಯ ಜನರಿದ್ದರು: ಕಾರ್ಯಸಕ್ತರಾದ, ಬುದ್ಧಿವಂತರಾದ, ಮುಖ್ಯವಾಗಿ ಮಿತವ್ಯಯಿಗಳಾದ, ಗೃಹಸ್ಥರು ಒಂದು ರೀತಿ; ಸೋಮಾರಿ-ದಡ್ಡರು, ತಮ್ಮ ಸೊತ್ತನ್ನು ಉಪಯೋಗಿಸಿ ಕಳೆದುಕೊಳ್ಳುವವರು, ಮಹಾ ದುರ್ವ್ಯಯಿಗಳು ಇನ್ನೊಂದು ರೀತಿ ... ಈ ಕಾರಣದಿಂದಲೇ ಕಾಲಕ್ರಮೇಣ ಮೊದಲ ರೀತಿಯವರು ಹಣವನ್ನು ಕೂಡಿಟ್ಟರು. ಎರಡನೆ ರೀತಿಯವರು ತಮ್ಮ ತೊಗಲು ಶರೀರ ಇಷ್ಟನ್ನುಳಿದು ಎಲ್ಲವನ್ನೂ ಕಳೆದುಕೊಂಡರು. ಈ ಮೂಲ ಪಾಪದಿಂದಲೇ ಹಿರಿಯ ಜನ ವಿಭಾಗದ ದಾರಿದ್ರ್ಯ ಆರಂಭವಾಯಿತು. ಅದು ಎಷ್ಟು ದುಡಿದರೇನು? ಅದರಲ್ಲಿ ಏನೂ ಉಳಿದಿಲ್ಲ. ಇನ್ನೊಬ್ಬರಿಗೆ ತನ್ನನ್ನ ತಾನು ಮಾರುವುದೊಂದೇ. ಆ ಕೆಲ ಮಂದಿ ಬಹುಕಾಲದ ಹಿಂದೆಯೇ ದುಡಿಯುವುದನ್ನು ಬಿಟ್ಟುಕೊಟ್ಟಿದ್ದರೂ ಅವರ ಐಶ್ವರ್ಯವೇನೋ ಬೆಳೆಯುತ್ತಲೇ ಇದೆ."

ಆದರೆ ಭಂಡವಳ, ಪುರಾತನ ಸಂಗ್ರಹದ ಮಟ್ಟದಲ್ಲೆ ನಿಲ್ಲುವುದಿಲ್ಲ. ಎಷ್ಟೋ ಹಿರಿದಾಗಿ ಬೆಳೆದಿದೆ. ಈ ಮೂಲ ಭಂಡವಳ ಪ್ರತ್ಯಕ್ಷವಾಗಿ

ದರೋಡೆಮಾಡಿದುದರಿಂದಲೇ ಬಂತೆಂದು ಒಪ್ಪಿದರೂ ಆ ಕಾಲದಿಂದ ಈವರೆಗೆ ಹೆಚ್ಚುತ್ತ ಬಂದ ಜಾಸ್ತಿ ಭಂಡವಳ ಹೀಗೆ ಉಂಟಾಯಿತು?

ಅಪ್ರತ್ಯಕ್ಷವಾದ ದರೋಡೆ—ಎನ್ನುತ್ತಾನೆ ಮಾರ್ಕ್ಸ್. ತನ್ನ ಅವಶ್ಯತೆಗೆ ಬೇಕಾಗಿರುವುದಕ್ಕಿಂತಲೂ ಹೆಚ್ಚು ಹೊತ್ತು ಕೂಲಿಕಾರ ದುಡಿಯುವಂತೆ ಮಾಡುವುದು, ಆ ಹೆಚ್ಚಿನ ಸಮಯದಲ್ಲಿ ಅವನು ಉತ್ಪಾದಿಸುವ 'ಉಳಿತಾಯ ಬೆಲೆ'ಯನ್ನೆಲ್ಲ ದೋಚಿಕೊಳ್ಳುವುದು—ಇದು ದರೋಡೆಯಲ್ಲದೆ ಇನ್ನೇನು? ಭಂಡವಳಗಾರ ಈ ಉಳಿತಾಯ ಬೆಲೆಯ ಸ್ವಲ್ಪ ಅಂಶವನ್ನು ತನ್ನ ಉಪಯೋಗಕ್ಕಾಗಿ ವೆಚ್ಚಮಾಡುತ್ತಾನೆ; ಉಳಿದುದು ಹೊಸ ಭಂಡವಳವಾಗುವುದು. ಹಿಂದಿನ ಭಂಡವಳಕ್ಕೆ ಅದನ್ನು ಸೇರಿಸುವುದರಿಂದ ಭಂಡವಳ ಹೆಚ್ಚುವುದು ಹೆಚ್ಚು ಕೂಲಿಕಾರರನ್ನು ಆತ ನೇಮಿಸುವನು. ಪುನಃ ಉತ್ಪಾದನದಲ್ಲಿ ಉಳಿತಾಯ ಬೆಲೆ ಹೆಚ್ಚಾಗುವುದು. ಹೊಸ ಭಂಡವಳ ಹುಟ್ಟುವುದು. ಪುನಃ ಅದನ್ನು ಹಿಂದಿನ ಭಂಡವಳಕ್ಕೆ ಸೇರಿಸುವನು. ಹೀಗೆ ಇದು ಸಾಗುವುದು .

ಆರ್ಥಿಕ ಮತ್ತು ಸಾಮಾಜಿಕ ನಿಯಮಗಳು ಕೆಲವು ಅಡ್ಡ ಬರದಿದ್ದರೆ ಇದು ಸದಾಕಾಲ ಹೀಗೆಯೇ ಸಾಗುವುದರಲ್ಲಿ ಸಂಶಯವಿಲ್ಲ. ಆದರೆ ಪ್ರಧಾನ ತಡೆಯಾದ ವರ್ಗಸಮರವಿದೆ. ಇದು ಆಗಾಗ್ಗ ಉತ್ಪಾದನ 'ಗತಿ' ಯನ್ನು ವಿರೋಧಿಸುವುದು; ಕೊನೆಗೊಮ್ಮೆ ಭಂಡವಳಶಾಹಿ ಉತ್ಪಾದನ ಪದ್ಧತಿಯನ್ನೇ ಕೊನೆಗಾಣಿಸುವುದು. ಆದರೆ ಭಂಡವಳಶಾಹಿ ಬೆಳವಣಿಗೆಯ ಸುಲಭ ಹಾದಿಯಲ್ಲಿ, ಭಂಡವಳಶಾಹಿ ಪದ್ಧತಿಯ ಫಲವಾಗಿಯೇ ಹುಟ್ಟಿಕೊಳ್ಳುವ ಬೇರೆ ಕೆಲ ಅಡೆತಡೆಗಳಿವೆ.

ಆರ್ಥಿಕ ದುರ್ದೆಸೆಯಿಂದಾಗಿ ಭಂಡವಳದ ಬೆಳವಣಿಗೆ ನಿರ್ಬಂಧಿಸಲ್ಪಡುವುದು; ಇಲ್ಲವೆ ಹಿಂದಿನ ವರ್ಷಗಳಲ್ಲಿ ಸಂಗ್ರಹವಾಗಿದ್ದ ಭಂಡವಳದ ಒಂದಂಶ ನಾಶವಾಗುವುದು. "ಇಂತಹ ದುರ್ದೆಶೆಗಳಲ್ಲಿ, ಹಿಂದೆಲ್ಲ ತೀರ ಅಸಂಬದ್ಧವೆಂದು ಕಂಡಿರಬಹುದಾದ ಒಂದು ಮಹಾ ಜಾಡ್ಯಹುಟ್ಟುವುದು—ಮಿತಿಮೀರಿದ ಉತ್ಪಾದನೆಯ ಮಹಾ ಜಾಡ್ಯ" ಎಂದಿದ್ದಾನೆ ಮಾರ್ಕ್ಸ್ ['ಕಮ್ಯೂನಿಸ್ಟ್ ಘೋಷಣೆ' ಯಲ್ಲಿ]. ಪಾಳೆಯಗಾರ ಸಮಾಜದಲ್ಲಿ ಗೋಧಿಯ ಬೆಳೆ ಜಾಸ್ತಿಯಾಯಿತೆಂದರೆ ಪ್ರತಿಯೊಬ್ಬರಿಗೂ ಹೆಚ್ಚು ಆಹಾರ

ಸಿಗುತ್ತಿತ್ತು; ಭಂಡವಳಶಾಹಿ ಸಮಾಜದಲ್ಲಿ ಮಾತ್ರ ಕೂಲಿಕಾರರು ಉಪವಾಸ ಬೀಳಬೇಕಾಗುವುದು, ನಿರುದ್ಯೋಗ ಉಂಟಾಗುವುದು, ಆ ಗೋಧಿಯನ್ನೆಲ್ಲ ಮಾರುವುದು ಸಾಧ್ಯವಿಲ್ಲವಾದುದರಿಂದ ಮುಂದಿನ ವರ್ಷ ಕಡಿಮೆ ಗೋಧಿಯನ್ನು ಬಿತ್ತಲಾಗುವುದು.

ಭಂಡವಳ ದುರ್ದೆಸೆಯ ರೂಪರೇಖೆಗಳು ಪರಿಚಿತವಾದುವುಗಳೇ: ಮಿತಿಮೀರಿದ ಉತ್ಪಾದನೆ; ಅದರಿಂದ ಹೊಸ ಉತ್ಪಾದನೆ ಕಡಿಮೆಯಾಗುವುದು; ಕೂಲಿಕಾರರು ನಿರುದ್ಯೋಗಿಗಳಾಗುವರು; ಅವರ ನಿರುದ್ಯೋಗವೆಂದರೆ ಕೊಂಡುಕೊಳ್ಳುವವರ ಸಂಖ್ಯೆ ಮತ್ತಷ್ಟು ಕಡಿಮೆಯಾಗುವುದು; ಹೆಚ್ಚು ಕಾರ್ಖಾನೆಗಳು ಉತ್ಪಾದನೆಯ ವೇಗವನ್ನು ಕಡಿಮೆಮಾಡುವುವು; ಹೊಸ ಕಾರ್ಖಾನೆಗಳನ್ನು ಆರಂಭಿಸುವುದೇ ಇಲ್ಲ, ಬದಲಿಗೆ ಕೆಲವನ್ನು ನಾಶಪಡಿಸಲಾಗುವುದು; ಗೋಧಿ ಮತ್ತಿತರ ಸಾಮಗ್ರಿಗಳೂ ನಾಶಗೊಳಿಸಲ್ಪಡುವುವು;— ಆದರೆ ಕೂಲಿಕಾರರೂ ಅವರ ಹೆಂಡಿರುಮಕ್ಕಳೂ ಉಪವಾಸ, ರೋಗ–ರುಜೆಗಳಿಂದ ನರಳುವರು. ಅದೆಲ್ಲ, ಮನುಷ್ಯರೆಲ್ಲರೂ ಹುಚ್ಚರಾಗಿರುವ ಒಂದು ಲೋಕದಂತೆ ಕಾಣುವುದು. ಒಮ್ಮೆ ಇರುವ ದಾಸ್ತಾನೆಲ್ಲ ಮುಗಿದು ಹೋದಮೇಲೆ, ಇಲ್ಲವೆ ನಾಶಗೊಳಿಸಲ್ಪಟ್ಟ ಅನಂತರ, ಉತ್ಪಾದನ ಹೆಚ್ಚುವುದು; ವ್ಯಾಪಾರ ಬೆಳೆಯುವುದು; ಹೆಚ್ಚು ಉದ್ಯೋಗ ದೊರಕುವುದು; ಒಂದೆರಡು ವರ್ಷಗಳವರೆಗೆ ಹೀಗೆಯೇ ಪ್ರಗತಿಯಾಗಿ ಉತ್ಪಾದನ ಬಲು ವಿಸ್ತೃತವಾಗುವುದು. ಮತ್ತೆ ಒಮ್ಮೆಲೆ, ಮಿತಿಮೀರಿದ ಉತ್ಪಾದನೆಯಾಗಿ ದುರ್ದೆಸೆ ಒದಗುವುದು. ಪುನಃ ಮೇಲಿನ ಕತೆಯ ಓಂ ಶ್ರೀ.

ಈ ದುರ್ದೆಸೆಗಳಿಗೇನು ಕಾರಣ? ಮಾರ್ಕ್ಸ್‌ನ ಉತ್ತರವಿದು: ಭಂಡವಳದ ಪ್ರತಿಯೊಂದು ಅಂಶವೂ ವಿಸ್ತರಿಸಲು, ಹೆಚ್ಚು ಲಾಭಮಾಡಲು, ಅದಕ್ಕಾಗಿ ಹೆಚ್ಚನ್ನು ಉತ್ಪಾದಿಸಿ ಮಾರಲು ಯತ್ನಿಸಬೇಕೆಂಬುದು ಭಂಡವಳಶಾಹಿ ಉತ್ಪಾದನ ಪದ್ಧತಿಯ ನಿಯಮ. ಭಂಡವಳ ಹೆಚ್ಚಿದಷ್ಟು ಉತ್ಪಾದನವೂ ಹೆಚ್ಚುವುದು. ಆದರೆ ಭಂಡವಳ ಹೆಚ್ಚಿದಂತೆ ಉಪಯೋಗಿಸಲ್ಪಡುವ ಶ್ರಮಶಕ್ತಿಯೂ ಕಡಿಮೆ; ಮನುಷ್ಯನ ಬದಲು ಯಂತ್ರ ಬರುವುದು [ ಇದಕ್ಕೇ 'ಕೈಗಾರಿಕೋದ್ಯಮದಲ್ಲಿ ವಿವೇಕದ ಉಪಯೋಗ'

ಎನ್ನುವೆವು.] ಬೇರೆ ಮಾತುಗಳಲ್ಲಿ ಹೇಳುವುದಾದರೆ ಭಂಡವಳ ಹೆಚ್ಚಿದಂತೆ ಉತ್ಪಾದನ ಹೆಚ್ಚುವುದು; ಕೊಡುವ ಕೂಲಿ ಕಡಿಮೆಯಾಗುವುದು; ಆದುದರಿಂದ, ಉತ್ಪಾದಿಸಲ್ಪಟ್ಟ ಸಾಮಗ್ರಿಗಳನ್ನು ಕೊಂಡುಕೊಳ್ಳುವವರ ಸಂಖ್ಯೆಯೂ ಕಡಿಮೆಯಾಗುವುದು. [ಅಂದರೆ ಒಟ್ಟು ಕೂಲಿ ಒಂದೇ ಸವನೆ ಕಡಿಮೆಯಾಗಬೇಕೆಂದೇನೂ ಇಲ್ಲ. ಕೂಲಿಯ ಅನುಕ್ರಮವಾದ ಇಳಿತದಿಂದಲೇ ದುರ್ದೆಸೆಯುಂಟಾಗುವುದು. ವ್ಯಾಪಾರಾಭಿವೃದ್ಧಿಯ ಕಾಲದಲ್ಲಿ ಕೂಲಿ ಜಾಸ್ತಿಯಾಗಬಹುದಾದರೂ ಒಟ್ಟು ಉತ್ಪಾದನೆ ಹೆಚ್ಚಿದಷ್ಟು ಅದು ಹೆಚ್ಚುವುದಿಲ್ಲ. ಇದರಿಂದಾಗಿ ಉತ್ಪಾದನೆಯಾದ ಎಲ್ಲ ಸಾಮಗ್ರಿಗಳಿಗೆ ಬೇಡಿಕೆ ಇರುವುದಿಲ್ಲ.]

ಭಂಡವಳದ ವ್ಯಾಪ್ತಿ ಮತ್ತು ಕೂಲಿಕಾರರ ಕೊಂಡುಕೊಳ್ಳುವ ಶಕ್ತಿ– ಇವುಗಳೊಳಗಿನ ಪರಿಮಾಣ ಅನುಕ್ರಮವಾಗಿ ಇಲ್ಲದಿರುವುದೇ ದುರ್ದೆಸೆಗೆ ಕಾರಣವಾಗುವುದು. ಆದರೆ, ದುರ್ದೆಸೆಯುಂಟಾಗುವ ಸಮಯವೂ ಪರಿಸ್ಥಿತಿ ಕೆಡುತ್ತ ಹೋಗುವ ವಿಧಾನವೂ ಬೇರೆ ವಿಷಯಗಳನ್ನು ಅವಲಂಬಿಸಿವೆ ಎಂಬುದು ನಿಜ. ಉದಾಹರಣೆಗಾಗಿ ೧೯೩೯ ರ ಬ್ರಿಟನನ್ನು ತೆಗೆದುಕೊಳ್ಳೋಣ. ಸಾಮಾನ್ಯವಾಗಿ ಇಲ್ಲದಿರುವ ಯುದ್ಧೋಪಕರಣಗಳ ಉತ್ಪಾದನೆ, ಅನಿವಾರ್ಯವಾಗಿದ್ದ ದುರ್ದೆಸೆಯನ್ನು ಸ್ವಲ್ಪ ಕಾಲ ಮುಂದೆ ನೂಕಬಹುದು, ಇಲ್ಲವೆ ಮರೆಮಾಡಬಹುದು

ಭಂಡವಳಶಾಹಿಯ ಬೆಳವಣಿಗೆಯಲ್ಲಿ ಮುಖ್ಯವಾದ ಇನ್ನೂ ಒಂದು ಅಂಶವಿದೆ. ಅದು ಸ್ಪರ್ಧೆ [ಪೈಪೋಟಿ, ಮೇಲಾಟ]. ಭಂಡವಳಶಾಹಿ ಉತ್ಪಾದನದ ಇತರ ಎಲ್ಲಾ ವಿಷಯಗಳಂತೆ ಇದರಿಂದಲೂ ಪರಸ್ಪರ ವಿರುದ್ಧವಾದ ಎರಡು ಫಲಿತಾಂಶಗಳಾಗುತ್ತವೆ. ಸ್ಪರ್ಧೆಯಿಂದಾಗಿ, ವಸ್ತುಗಳ ಮಾರಾಟವನ್ನು ಜಾಸ್ತಿ ಮಾಡುವುದಕ್ಕೋಸ್ಕರ, ಉತ್ಪಾದನ ವೆಚ್ಚವನ್ನು ಕಡಿಮೆ ಮಾಡಲು ಮಾಲಿಕ ಯತ್ನಿಸುವನು. ಇದಕ್ಕಾಗಿ ಕೂಲಿ ಕಡಿಮೆ ಮಾಡುವನು, ವೇಗವಾಗಿ ಶ್ರಮಶಕ್ತಿಯನ್ನು ಉಪಯೋಗಿಸುವನು, ಇಲ್ಲವೆ ಮತ್ತಿತರ 'ವಿವೇಕದ ಉಪಯೋಗ'ಗಳನ್ನು ಮಾಡುವನು. ಆದರೆ ಇನ್ನೊಂದೆಡೆ, ಸಾಕಷ್ಟು ಹೊಸ ಭಂಡವಳ ಕೂಡಿಸಬಲ್ಲ ಉದ್ಯಮಗಳು, ಯಾಂತ್ರಿಕ ಅಭಿವೃದ್ಧಿಯನ್ನು ಮಾಡಿ, ಕಡಿಮೆ ಶ್ರಮಶಕ್ತಿ

ಯನ್ನು ಉಪಯೋಗಿಸಿ ಹೆಚ್ಚನ್ನು ಸಂಪಾದಿಸುವುವು. ಹೀಗೆ ಮಾಡುವು ದರಿಂದ ಮೊದಲೇ ಹೇಳಿದಂತೆ ಉತ್ಪಾದನ ಹೆಚ್ಚುವುದು, ಅದಕ್ಕೆ ಅನುಗುಣ ವಾಗಿ ಕೂಲಿ ಹೆಚ್ಚದೆ, ಒಟ್ಟು ಕೂಲಿಯಲ್ಲಿ ಕಡಿತವಾಗುವುದು; ಸಾಮಗ್ರಿ ಗಳಿಗಾಗಿ ಬೇಡಿಕೆಯು ಕಡಿಮೆಯಾಗುವುದು.

ಹೀಗಿದ್ದರೂ, ಯಾಂತ್ರಿಕ ಸುಧಾರಣೆಯನ್ನು ಮಾಡಿದ ಉದ್ಯಮ ದವರಿಗೆ ಸ್ವಲ್ಪ ಕಾಲ ಹೆಚ್ಚು ಲಾಭ ಸಿಕ್ಕುವುದು. ಆದರೆ ಇದು, ಅದರ ಸ್ಪರ್ಧಿಗಳೂ ಅದೇ ಮಟ್ಟಕ್ಕೆ ಬಂದು, ಕಡಿಮೆ ಶ್ರಮಶಕ್ತಿಯನ್ನು ಉಪಯೋಗಿಸಿ ಹೆಚ್ಚು ಉತ್ಪಾದಿಸಲು ಆರಂಭಿಸುವ ವರೆಗೆ ಮಾತ್ರ. ಆದರೆ ಎಲ್ಲಾ ಸ್ಪರ್ಧಿಗಳೂ ಆ ಮಟ್ಟಕ್ಕೆ ಬರುವುದು ಸಾಧ್ಯವಿಲ್ಲ. ಸರ್ವ ಸಾಮಾನ್ಯವಾದೊಂದು ಉದ್ಯಮ ಬೆಳೆಯುತ್ತಾ ಹೋದಂತೆ, ಅದರ ಯಾಂತ್ರಿಕ ಅಭಿವೃದ್ಧಿಗಾಗಿ ಹೆಚ್ಚು ಹೆಚ್ಚು ಭಂಡವಳ ಬೇಕಾಗುವುದು. ಆದರೆ ಈ ಪ್ರಗತಿಯ ಓಟದಲ್ಲಿ ಎಷ್ಟೋ ಕಂಪೆನಿಗಳು ಹಿಂದೆ ಬೀಳುವುವು. ಇಂಥವು ಹಾಳಾಗಿ ಹೋಗುತ್ತವೆ; ದಿವಾಳಿಯಾಗುತ್ತವೆ; ಕೆಲವನ್ನು ದೊಡ್ಡ ಸ್ಪರ್ಧಿಗಳು ಕೊಂಡುಕೊಳ್ಳುತ್ತಾರೆ. "ಒಬ್ಬ ಭಂಡವಳಗಾರ ಎಷ್ಟೋ ಜನ ಭಂಡವಳಗಾರರನ್ನು ಕೊಲ್ಲುತ್ತಾನೆ" ಹೀಗೆ, ಕೈಗಾರಿ ಕೋದ್ಯಮದ ಪ್ರತಿಯೊಂದು ಶಾಖೆಯಲ್ಲೂ ಪ್ರತ್ಯಪ್ರತ್ಯೇಕವಾಗಿರುವ ಕಂಪೆನಿಗಳ ಸಂಖ್ಯೆ ಕಡಿಮೆಯಾಗುತ್ತದೆ. ಕೆಲವೇ ದೊಡ್ಡ ಸಂಸ್ಥೆಗಳು ಹುಟ್ಟುತ್ತವೆ ಉದ್ಯಮದ ಆ ಕ್ಷೇತ್ರವನ್ನು ಅವುಗಳೇ ಆಳುತ್ತವೆ. ಭಂಡವಳಶಾಹಿ ಸ್ಪರ್ಧೆಯ ಫಲವಾಗಿ ಅದಕ್ಕೆ ಇದಿರಾದ ಭಂಡವಳಶಾಹಿ ಗುತ್ತಿಗೆ [ ಸರ್ವಾಧಿಪತ್ಯ ] ಹುಟ್ಟುತ್ತದೆ.

೬

## ಭಂಡವಳಶಾಹಿಯ ಸಾಮ್ರಾಜ್ಯವಾದಿ ಘಟ್ಟ

ಸಾಮ್ರಾಜ್ಯವಾದವೆಂದರೆ ವಿಸ್ತರಣದ ಧೋರಣೆ, ಸುಧಾರಿಸದೆ ಹಿಂದುಳಿದಿದ್ದ ರಾಷ್ಟ್ರಗಳನ್ನು ಗೆದ್ದು ಒಂದು ಸಾಮ್ರಾಜ್ಯವನ್ನು ಕಟ್ಟುವುದು; —ಇದೀಗ ಪ್ರಚಾರದಲ್ಲಿರುವ ತಿಳಿವಳಿಕೆ. ಈ ಧೋರಣೆಯೆಂದರೆ ಬರೇ

ಬೇರೆ ಬೇರೆ ಕಡೆಗಳಲ್ಲಿ ಬಾವುಟವನ್ನೇರಿಸುವ–ದೇಶದ ರಾಜ್ಯವನ್ನು ವಿಸ್ತರಿಸುವ ಅಸ್ಪಷ್ಟ ಆಸೆಯಷ್ಟೇ ಅಲ್ಲ ಎಂದು ತಿಳಿದಾಗ, ವಿಸ್ತರಣದ ಧೋರಣೆಗೆ ಆರ್ಥಿಕ ಕಾರಣವೂ ಇದೆ ಎಂಬುದು ಸ್ಪಷ್ಟವಾಗುವುದು. ಮಾರ್ಕೆಟುಗಳನ್ನು ಹುಡುಕುವುದು, ಜನಸಂಖ್ಯೆ ವಿಪರೀತವಾದಾಗ ಅವರು ಹೋಗಿ ವಾಸಮಾಡಲು ಸ್ಥಳವನ್ನು ಸಂಪಾದಿಸುವುದು—ಇದು ವಿಸ್ತರಣದ ಕಾರಣವಾಗಿರಲಾರದು.

ಒಟ್ಟಾಗಿ ನೋಡಿ, ಇನ್ನೂ ಆಳವಾಗಿ ಯೋಚಿಸಿ ವಿಚಾರಿಸದಿದ್ದರೆ ಈ ಯಾವ ಕಾರಣವೂ ತೃಪ್ತಿಕರವಾಗಿ ತೋರದು. ವಸಾಹತೇ ಬೇಕೆಂದಿಲ್ಲ, ವಿದೇಶಗಳ ಮಾರ್ಕೆಟುಗಳಲ್ಲೂ ಒಳ್ಳೆಯ ವ್ಯಾಪಾರವಾಗುತ್ತದೆ. ಅಷ್ಟು ದೊಡ್ಡ ಸಾಮ್ರಾಜ್ಯವಿದ್ದರೂ ಕೂಡ ಬ್ರಿಟನ್ನಿನ ವ್ಯಾಪಾರದಲ್ಲಿ ಹೆಚ್ಚಿನಂಶ ವಿದೇಶಗಳೊಡನೆ ನಡೆಯುವುದು. ವಿದೇಶಗಳಿಂದ ಇಲ್ಲವೆ ಅವುಗಳ ವಸಾಹತುಗಳಿಂದ ಕಚ್ಚಾ ಮಾಲುಗಳನ್ನು ಆಹಾರ ಪೂರೈಕೆಗಳನ್ನು ಯಾವಾಗೂ ಒದಗಿಸಿಕೊಳ್ಳಬಹುದು. ಯಾರು ಕೊಂಡುಕೊಳ್ಳುತ್ತಾರೆ ಎಂದು ಹಾದಿನೋಡುವ, ಮಾರಾಟವಾಗದ, ಉಳಿತಾಯ ಸಾಮಗ್ರಿ ಯಾವಾಗಲೂ ಇದ್ದೇ ಇರುತ್ತದೆ. ಮನೆಕಟ್ಟಿ ನೆಲೆಸಲು ಜಾಗ ಬೇಕೆನ್ನುವುದೂ ಸರಿಯಲ್ಲ; ವಸಾಹತುಗಳ ಎಷ್ಟೋ ಭಾಗಗಳು ಯೂರೋಪಿಯನರು ವಾಸಮಾಡಲು ಯೋಗ್ಯವಾಗಿಲ್ಲ. ಪ್ರದೇಶ ಯೋಗ್ಯವಾಗಿರುವಲ್ಲಿ ವಿದೇಶಗಳಲ್ಲಿ ಆಗುವುದಕ್ಕಿಂತ ಹೆಚ್ಚು ಸಂಪಾದನೆಯನ್ನು ಯೂರೋಪಿಯನರು ಮಾಡುವಂತೆಯೂ ಇಲ್ಲ. ಮೇಲಿನವೆಲ್ಲ ವಿಸ್ತರಣಕ್ಕಾಗಿ ಫ್ಯಾಸಿಸ್ಟರು ಮುಂದಿರಿಸುವ ವಾದಗಳು. ವಿಚಾರ ಮಾಡದೆ ಯುದ್ಧ ವಿರೋಧಿಗಳೂ ಒಮ್ಮೊಮ್ಮೆ ಆ ಕಾರಣಗಳನ್ನೇ ಮುಂದೆ ನೂಕುತ್ತಾರೆ. ಅದಕ್ಕೆ ಬುಡವಿಲ್ಲ, ಬಲವಿಲ್ಲ.

ಆಧುನಿಕ ಸಾಮ್ರಾಜ್ಯವಾದದ ಬಗ್ಗೆ ಮಾರ್ಕ್ಸ್‌ವಾದಿ ವಿವರಣೆಯನ್ನು ಮೊದಲು ಕೊಟ್ಟವನು ಲೆನಿನ್. ಸಾಮಾನ್ಯ ದಿನಸುಗಳನ್ನು ಹೊರಕಳುಹುವುದಕ್ಕಿಂತಲೂ ಭಂಡವಳವನ್ನು ಹೊರಸಾಗಿಸುವುದೇ ಆಧುನಿಕ ಸಾಮ್ರಾಜ್ಯವಾದದ ವೈಶಿಷ್ಟ್ಯಗಳಲ್ಲೊಂದು ಎಂದು ಆತ ಸೂಚಿಸಿದ; ಭಂಡವಳಶಾಹಿಯೊಳಗೇ ಆದ ಕೆಲ ಬದಲಾವಣೆಗಳಿಂದ ಹೀಗಿದೆ–ಎಂದು

ಅವನು ತೋರಿಸಿಕೊಟ್ಟ; ಆದುದರಿಂದಲೇ ಆತ, ಸಾಮ್ರಾಜ್ಯವಾದವು ಭಂಡವಳ ಪದ್ಧತಿಯ ಒಂದು ವಿಶೇಷ ಘಟ್ಟವೆಂದು, ಆಗಲೇ ಪ್ರಧಾನ ಭಂಡವಳಶಾಹಿ ರಾಷ್ಟ್ರಗಳಲ್ಲೆಲ್ಲ ದೊಡ್ಡ ಗುತ್ತಿಗೆಗಳು ಹೆಚ್ಚು ಸಂಖ್ಯೆಯಲ್ಲಿ ಬೆಳೆಯುವುವೆಂದು, ವಿವರಿಸಿ ಹೇಳಿದ.

ಔದ್ಯೋಗಿಕ ಭಂಡವಳದ ಮೊದಲ ದಿನಗಳಲ್ಲಿ ಕಾರ್ಖಾನೆ, ಗನಿ ಮತ್ತಿತರ ಉದ್ಯಮಗಳೆಲ್ಲ ಬಲು ಚಿಕ್ಕದಾಗಿದ್ದುವು. ಸರ್ವಸಾಧಾರಣವಾಗಿ ಒಂದು ಚಿಕ್ಕ ಕುಟುಂಬ ಇಲ್ಲವೆ ಸ್ವಲ್ಪ ಜನ ಪಾಲುಗಾರರ ತಂಡ ಆ ಉದ್ಯಮಗಳ ಮಾಲಿಕವರ್ಗವಾಗಿರುತ್ತಿತ್ತು. ಒಂದು ಕಾರ್ಖಾನೆಯನ್ನು ತೆರೆಯಲು ಇಲ್ಲವೆ ಗನಿಯನ್ನು ಆರಂಭಿಸಲು ಬೇಕಾಗಿದ್ದ ಸ್ವಲ್ಪ ಹಣವನ್ನು ಅವರೇ ಒದಗಿಸುತ್ತಿದ್ದರು. ಆದರೆ ತಾಂತ್ರಿಕ ಸುಧಾರಣೆಯಾಗುತ್ತ ಹೋದಂತೆ ಹೆಚ್ಚು ಹೆಚ್ಚು ಭಂಡವಳ ಅವಶ್ಯವಾಯಿತು; ಇದರ ಜತೆಯಲ್ಲಿ ಗುಡಿ ಕೈಗಾರಿಕೆಗಳು ಮೂಲೆ ಪಾಲಾಗಿ ಔದ್ಯೋಗಿಕ ಉತ್ಪನ್ನಗಳನ್ನು ಕೊಂಡುಕೊಳ್ಳುವವರ ಸಂಖ್ಯೆ ಹೆಚ್ಚುತ್ತ ಹೋಯಿತು. ಮೊದಲು ಬ್ರಿಟನಿನಲ್ಲಿ, ಅನಂತರ ಬೇರೆ ದೇಶಗಳಲ್ಲಿ ಇದೇ ಪರಿಸ್ಥಿತಿ ಒದಗಿತು. ಆದುದರಿಂದ ಔದ್ಯೋಗಿಕ ಉದ್ಯಮದ ಪ್ರಮಾಣ ಬೇಗನೆ ಹಿರಿದಾಯಿತು. ಉಗಿಬಂಡಿ—ಉಗಿ ಹಡಗ ಬಂದಮೇಲೆ ಕಬ್ಬಿಣದ, ಅನಂತರ ಉಕ್ಕಿನ, ಉದ್ಯಮಗಳು ಹೆಚ್ಚು ಹೆಚ್ಚಾಗಿ ಬೆಳೆದುವು. ಯಾವ ಕೈಗಾರಿಕೆಯೇ ಇರಲಿ, ಉದ್ಯಮ ದೊಡ್ಡದಿದ್ದಷ್ಟು ಅದನ್ನು ನಡೆಸುವ ವೆಚ್ಚ ಕಡಿಮೆಯಾಯಿತು; ಲಾಭ ಹೆಚ್ಚಿತು; ಫಲವಾಗಿ ಉದ್ಯಮ ಬೇಗನೆ ಮತ್ತಷ್ಟು ಅಭಿವೃದ್ಧಿ ಹೊಂದಿತು. ಚಿಕ್ಕ ಪುಟ್ಟ ಉದ್ಯಮಗಳು ಸ್ಪರ್ಧೆಗೆ ನಿಲ್ಲಲಾರದೆ ಕೆಲಸ ನಿಲ್ಲಿಸಬೇಕಾಯಿತು ಇಲ್ಲವೆ ದೊಡ್ಡ ಉದ್ಯಮಗಳೊಡನೆ ಅಂತರ್ಗತವಾಗಬೇಕಾಯಿತು.

ಹೀಗೆ ಒಮ್ಮೆಲೆ ಎರಡು ಕೆಲಸಗಳಾಗತೊಡಗಿದುವು. ಹಿರಿಯ ಉದ್ಯಮಗಳಲ್ಲೇ ಕೇಂದ್ರೀಕೃತವಾಗಿ ಉತ್ಪಾದನ ಆಗತೊಡಗಿತು ಮತ್ತು ಕೆಲವೇ ಮಂದಿ ಶ್ರೀಮಂತರ ನಿಯಂತ್ರಣದಲ್ಲಿದ್ದ ಉತ್ಪಾದನದ ದಾಮಾಶಯ ಹೆಚ್ಚುತ್ತಾ ಹೋಯಿತು.

ತನ್ನ ಕಾಲದಲ್ಲೇ ಹೀಗಾಗುತ್ತಿದ್ದುದನ್ನು ಮಾರ್ಕ್ಸ್ ಚೆನ್ನಾಗಿ ತಿಳಿದಿದ್ದ; ತಾಂತ್ರಿಕ ವಿಚಾರಕ್ಕೆ ಗಮನವನ್ನೆಳೆದ; ದೊಡ್ಡ ಉದ್ಯಮಗಳಲ್ಲಿ

ಉತ್ಪಾದನ ಕೇಂದ್ರೀಕೃತವಾಗುತ್ತಿದ್ದುದನ್ನೂ ಭಂಡವಳವನ್ನು ನಿಯಂತ್ರಿಸುವವರ ಇಲ್ಲವೆ ಅದರ ಯಜಮಾನಿಕೆಯನ್ನು ನೋಡುವವರ ಸಂಖ್ಯೆ ಕ್ರಮ ಕ್ರಮವಾಗಿ ಚಿಕ್ಕದಾಗುತ್ತಿದ್ದುದನ್ನೂ ತೋರಿಸಿದ. ಇದರ ಫಲವಾಗಿ ಸ್ವಚ್ಛಂದ ಸ್ಪರ್ಧೆಯ ಬದಲು ವ್ಯಾಪಾರದ ಸರ್ವಾಧಿಕಾರತ್ವ ಬರುವುದೆಂದೂ ಭಂಡವಳ ಪದ್ಧತಿಯಲ್ಲಿರುವ ದೋಷಗಳೆಲ್ಲ ಮತ್ತಷ್ಟು ತೀಕ್ಷ್ಣವಾಗುವುವೆಂದೂ ಸ್ಪಷ್ಟಪಡಿಸಿದ.

ಈ ಶತಮಾನದ ಆದಿಯಲ್ಲಿ ಎಷ್ಟೋ ಉದ್ಯಮಗಳಲ್ಲಿ ಹೆಚ್ಚಿನ ಸರ್ವಾಧಿಪತ್ಯವಿದ್ದುದನ್ನು ಆರ್ಥಿಕ ಶಾಸ್ತ್ರಜ್ಞರು ನೋಡಿದರು. ಯುದ್ಧ ಕಾಲದಲ್ಲಿ ಲೆನಿನ್, ಗುತ್ತಿಗೆಗಳ ಬೆಳವಣಿಗೆಯ ಬಗ್ಗೆ ವಿಷಯಗಳನ್ನು ಸಂಗ್ರಹಿಸಿದ; ಆ ಪರಿಸ್ಥಿತಿಯ ರಾಜಕೀಯ, ಸಾಮಾಜಿಕ ಮತ್ತು ತೀರ ಆರ್ಥಿಕ ವಿಷಯಗಳೆಡೆಗೆ ಆತ ತನ್ನ ದೃಷ್ಟಿಯನ್ನು ಹರಿಸಿದ. ಮಾರ್ಕ್ಸ್‌ನ ಮರಣಾನಂತರ ಆದ ಬೆಳವಣಿಗೆಯ ಆಧಾರದಮೇಲೆ ಲೆನಿನ್ ಮಾರ್ಕ್ಸ್‌ನ ತೀರ್ಮಾನವನ್ನು ವಿಸ್ತರಿಸಿ ಬೆಳೆಸಿದ. ೧೯೦೦ರ ಸುಮಾರಿಗೆ ಬೆಳೆದ ಭಂಡವಳ ಪದ್ಧತಿಯ ಸಾಮ್ರಾಜ್ಯವಾದಿ ಘಟ್ಟದಲ್ಲಿ ಐದು ಮುಖ್ಯ ಆರ್ಥಿಕ ಲಕ್ಷಣಗಳಿದ್ದುವೆಂದು ಲೆನಿನ್ ತೋರಿಸಿಕೊಟ್ಟ.

೧. ಉತ್ಪಾದನದ ಮತ್ತು ಭಂಡವಳದ ಕೇಂದ್ರೀಕರಣ ಬೆಳೆದು ಬೆಳೆದು, ಆರ್ಥಿಕ ಜೀವನದಲ್ಲಿ ಪ್ರಧಾನ ಪಾತ್ರವಹಿಸಿದ ಗುತ್ತಿಗೆಗಳು ಹುಟ್ಟಿಕೊಂಡಿದ್ದುವು.

ಮುಂದುವರಿದಿದ್ದ ಪ್ರತಿಯೊಂದು ಭಂಡವಳ ರಾಷ್ಟ್ರದಲ್ಲೂ ಹೀಗಾಗಿತ್ತು. ಜರ್ಮನಿ ಮತ್ತು ಅಮೆರಿಕದ ಸಂಯುಕ್ತ ರಾಷ್ಟ್ರಗಳಲ್ಲಿ [ಯುನೈಟೆಡ್ ಸ್ಟೇಟ್ಸ್] ಇದು ವಿಶೇಷ ಸ್ಪಷ್ಟವಾಯಿತು. ಈ ಬೆಳವಣಿಗೆ ಬಲು ವೇಗದಿಂದಲೇ ನಡೆದಿದೆ. [ಮೊದಲ] ಯುದ್ಧಾನಂತರ ಗುತ್ತಿಗೆಗಳು ಇಂಗ್ಲೆಂಡಿನಲ್ಲಿ ಬಹಳ ವಿಸ್ತೃತವಾಗಿವೆ. ಉದಾಹರಣೆಗಾಗಿ ಲಂಡನ್ ಟ್ರಾನ್ಸ್‌ಪೋರ್ಟ್ ಬೋರ್ಡ್, ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ ಮತ್ತು ಯೂನಿಲಿವರ್—ಪ್ರತಿಯೊಂದರ ಭಂಡವಳವೂ ಹತ್ತುಕೋಟಿ ಪವನುಗಳಷ್ಟು ಇಲ್ಲವೆ ಅದಕ್ಕಿಂತ ಹೆಚ್ಚು. [ಲಂಡನ್ ಟ್ರಾನ್ಸ್‌ಪೋರ್ಟ್ ಬೋರ್ಡ್ ಹೆಸರಿಗೇನೋ ಸಾರ್ವಜನಿಕ ಸಂಸ್ಥೆ. ಆದರೆ ಯಜಮಾನಿಕೆಯೆಲ್ಲ

ಭಂಡವಳಗಾರರದು. ಇಂತಹ ಸಂಸ್ಥೆಗಳಲ್ಲಿ ಪಾರ್ಲಿಮೆಂಟಿನ ಬೆಂಬಲ ವಿರುವ ಗುತ್ತಿಗೆಗಳು. ಆದುದರಿಂದ ಮಾರ್ಕ್ಸ್‌ವಾದಿ ಇವನ್ನು ಸೋಶಿಯಲಿಸ್ಟ್ ಸಂಸ್ಥೆಗಳೆಂದು ಒಪ್ಪುವುದಿಲ್ಲ.] ಪ್ರತಿ ಉದ್ಯಮದಲ್ಲೂ ಪೂರ್ಣ ವ್ಯಾಪಾರದ ಹೆಚ್ಚಿನಂಶವನ್ನು ಕೆಲವೇ ದೊಡ್ಡ ಸಂಸ್ಥೆಗಳು ನೋಡಿಕೊಳ್ಳುವುವು. ಬೆಲೆ ನಿರ್ಧರಿಸುವುದರಲ್ಲಿ, ಮಾರಾಟದ–ಕಚ್ಚಾಮಾಲುಗಳ ಅಂಶವನ್ನು ಗೊತ್ತುಮಾಡುವ ವಿಷಯದಲ್ಲಿ, ಈ ಸಂಸ್ಥೆಗಳೊಳಗೆ ಒಪ್ಪಂದವಿರುವುದು. ಹೀಗಾಗಿ ಇದೊಂದು ಸಂಘಟಿತ ಗುತ್ತಿಗೆಯಾಗುವುದು.

೨. ಬ್ಯಾಂಕ್ ಭಂಡವಳವು ಔದ್ಯೋಗಿಕ ಭಂಡವಳದೊಡನೆ ಬೆರಕೆಯಾಗಿ "ನಿಧಿ-ಭಂಡವಳ" ದ ಉತ್ಪನ್ನವಾಯಿತು. ಪ್ರತಿ ರಾಷ್ಟ್ರದಲ್ಲೂ "ನಿಧಿ–ಭಂಡವಳ" ದ ಸ್ವಲ್ಪ ಮಂದಿಯ ಆಳ್ವಿಕೆಗೆ ಆರಂಭವಾಯಿತು.

ಈ ವಿಚಾರವನ್ನು ಸ್ವಲ್ಪ ವಿವರಿಸಬೇಕಾಗಿದೆ. ಆರಂಭದ ದಿನಗಳಲ್ಲಿ ಔದ್ಯೋಗಿಕ ಭಂಡವಳಗಾರರೂ ಬ್ಯಾಂಕರುಗಳೂ ಪ್ರತ್ಯೇಕವಾಗಿದ್ದರು. ಬ್ಯಾಂಕರುಗಳು ಸಾಲಕೊಡುತ್ತಿದ್ದರು, ಬಡ್ಡಿಯ ರೂಪವಾಗಿ ಲಾಭದಿಂದ ಒಂದಂಶವನ್ನು ಪಡೆಯುತ್ತಿದ್ದರು; ಅಷ್ಟೇ ಅಲ್ಲದೆ ಕೈಗಾರಿಕೋದ್ಯಮಗಳಲ್ಲಿ ನೇರವಾಗಿ ಅವರು ತಲೆಹಾಕಿದ್ದಿಲ್ಲ. ಆದರೆ ಉದ್ಯಮಗಳು ಬೆಳೆದುವು. 'ಶೇರ್ ಕಂಪೆನಿ' ಗಳು ವಿಸ್ತೃತವಾಗಿ ಸ್ಥಾಪಿಸಲ್ಪಟ್ಟುವು. ಆಗ ಬ್ಯಾಂಕುಗಳ ಯಜಮಾನರು ಔದ್ಯೋಗಿಕ ಕಂಪೆನಿಗಳಲ್ಲಿ ಶೇರ್‌ಗಳನ್ನು ತೆಗೆದುಕೊಳ್ಳಲು ಆರಂಭಿಸಿದರು; ಶ್ರೀಮಂತ ಔದ್ಯೋಗಿಕ ಭಂಡವಳಗಾರರು ಬ್ಯಾಂಕುಗಳಲ್ಲಿ ಶೇರ್ ತೆಗೆದುಕೊಳ್ಳತೊಡಗಿದರು. ಬ್ಯಾಂಕರಾಗಿ ಜೀವನ ಆರಂಭಿಸಿರಲಿ, ಇಲ್ಲವೆ ಕೈಗಾರಿಕಾ ಪ್ರಭುವಾಗಿ ತೊಡಗಿರಲಿ, ಅತ್ಯಂತ ಶ್ರೀಮಂತ ಭಂಡವಳಗಾರರೆಲ್ಲ ಬ್ಯಾಂಕರ್–ಕೈಗಾರಿಕಾ ಪ್ರಭುಗಳಾದರು. ಒಂದೇ ಒಂದು ಕೂಟದಲ್ಲಿ ಭಂಡವಳಶಾಹಿ ಕೆಲಸಗಳ ಮಿಲನವಾದುದರಿಂದ ಅವರ ಶಕ್ತಿ ವಿಪುಲವಾಗಿ ಬೆಳೆಯಿತು. [ಬ್ರಿಟನಿನಲ್ಲಂತೂ ಹಿರಿಯ ಜಮೀನ್ದಾರರೂ ಕೂಡಾ ಈ ಕೂಟವನ್ನು ಸೇರಿಬಿಟ್ಟರು.] ಈ ರೀತಿಯಾಗಿ ಒಂದು ಔದ್ಯೋಗಿಕ ಸಂಸ್ಥೆಯೊಡನೆ ಸಂಬಂಧವಿರಿಸಿಕೊಂಡ ಬ್ಯಾಂಕು ಆ ಸಂಸ್ಥೆಗೆ ಸಾಲಕೊಡುವುದರ ಮೂಲಕ ಸಹಾಯಮಾಡುವುದು ಸಾಧ್ಯವಾಯಿತು. ತನ್ನ ಔದ್ಯೋಗಿಕ

ಸಂಸ್ಥೆಗೇ ಎಲ್ಲ ಆರ್ಡರುಗಳನ್ನು ಕೊಡಬೇಕೆಂಬ ಶರತದಮೇಲೆ ಇತರ ಕಂಪೆನಿಗಳಿಗೆ ಬ್ಯಾಂಕು ಸಾಲಕೊಡುವಂತಾಯಿತು. ಇದೇ ರೀತಿ ಇನ್ನೆಷ್ಟೋ ಸಾಧ್ಯತೆಗಳುಂಟಾದುವು. ಹೀಗೆ ನಿಧಿ-ಭಂಡವಳ ಕೂಟವು ಶೀಘ್ರದಲ್ಲಿ ತನ್ನ ಐಶ್ವರ್ಯವನ್ನು ಹೆಚ್ಚಿಸಿಕೊಂಡಿತು; ಒಂದರ.ಅನಂತರ ಒಂದಾಗಿ ಆ ಉದ್ಯಮದ ಅಂಶಗಳ ಮೇಲಿನ ಅದರ ಸರ್ವಾಧಿಕಾರಿ ನಿಯಂತ್ರಣ ಬಲವಾಯಿತು. ಇದರ ಜೊತೆಯಲ್ಲಿ ಈ ಕೂಟಕ್ಕೆ ರಾಷ್ಟ್ರದ ಆಡಳಿತದಲ್ಲಿ ಹೆಚ್ಚಿನ ಸ್ವರ ಸಿಕ್ಕಿಯೇ ಸಿಕ್ಕಿತೆನ್ನಿ.

ಬ್ಯಾಂಕು ಮತ್ತು ಉದ್ಯಮದ ಬೆರಕೆಯಾಯಿತು ಎಂದೆವಲ್ಲ. ಬ್ಯಾಂಕ್ ಡಿರೆಕ್ಟರರ ಹಿಡಿತದಲ್ಲಿದ್ದ ಸಂಸ್ಥೆಗಳಲ್ಲಿ ಡಿರೆಕ್ಟರ್‌ಶಿಪ್ಪಿನ ಸಂಖ್ಯೆ ಹೆಚ್ಚುತ್ತ ಹೋಯಿತು—ಎಂಬುದರಿಂದಲೇ ಆ ಬೆರಕೆ ಹೇಗಾಯಿತೆಂಬುದು ಸ್ಪಷ್ಟವಾಗುತ್ತದೆ. ಇದರಿಂದ ಆ ಸಂಸ್ಥೆಗಳ ಮಾಲಿಕತ್ವವನ್ನೇ ಬ್ಯಾಂಕು ಗಳು ವಹಿಸಿದುವು ಎಂದಲ್ಲ. ಬ್ಯಾಂಕಿಂಗ್ ಜಗತ್ತಿನ ಶಕ್ತಿವಂತ ವ್ಯಕ್ತಿಗಳೇ ಕೈಗಾರಿಕೋದ್ಯಮ ಮತ್ತು ವ್ಯಾಪಾರದಲ್ಲೂ ಶಕ್ತಿವಂತ ವ್ಯಕ್ತಿಗಳಾದರು. ಅದೊಂದು ಶ್ರೀಮಂತ ಜನರ ಕೂಟ; ಬ್ರಿಟಿಷ್ ಭಂಡವಳ ಪದ್ಧತಿಯಲ್ಲಿ ಈ ಜನರ ಭಂಡವಳವೇ ಓಡಾಡುವುದು. ೧೮೭೦ ರಲ್ಲಿ ಬ್ಯಾಂಕ್ ಆಫ್ ಇಂಗ್ಲೆಂಡಿನವರು ಮತ್ತು ಉಳಿದ ಬ್ಯಾಂಕುಗಳ ಡಿರೆಕ್ಟರುಗಳು [ಈ ಬ್ಯಾಂಕು ಗಳೇ ಅನಂತರ "ಮಹಾ ಐದು" ಬ್ಯಾಂಕುಗಳಾಗಿ ರೂಪುಗೊಂಡುವು] ಒಟ್ಟುಗೂಡಿ ಇತರ ಸಂಸ್ಥೆಗಳ ೧೫೭ ಡಿರೆಕ್ಟರ್‌ಶಿಪ್ಪುಗಳನ್ನು ಸ್ವಾಧೀನ ಪಡಿಸಿಕೊಂಡಿದ್ದರು; ೧೯೧೩ ರಲ್ಲಿ ಅಂತಹ ಡಿರೆಕ್ಟರ್‌ಶಿಪ್ಪುಗಳ ಸಂಖ್ಯೆ ೩೯೯ ಆಯಿತು; ೧೯೩೯ ರಲ್ಲಿ ೧,೧೫೦. ೧೯೩೯ ರ ಸಂಖ್ಯೆಯಲ್ಲಿ ಇನ್ನಿತರ ಎಷ್ಟೋ ಚಿಕ್ಕ ಪುಟ್ಟ ಉದ್ಯಮಗಳನ್ನು ತಾವೇ ನುಂಗಿದ ಲಂಡನ್ ಟ್ರಾನ್ಸ್‌ಪೋರ್ಟ್ ಮತ್ತು ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್‌ನವರು ಸೇರಿದರೆಂದಾಗ ಆ ಡಿರೆಕ್ಟರ್‌ಶಿಪ್ಪುಗಳ ಪೂರ್ಣಶಕ್ತಿ ಎಷ್ಟೆಂಬುದು ತಿಳಿದೀತು.

೩. ದಿನಸುಗಳ ರಫ್ತಿಗಿಂತ ಪ್ರತ್ಯೇಕವಾಗಿರುವ ಭಂಡವಳದ ರಫ್ತು ಪ್ರಾಧಾನ್ಯದಲ್ಲಿ ಬೆಳೆಯಿತು.

ಭಂಡವಳ ಪದ್ಧತಿಯ ಆರಂಭದ ಕಾಲದಲ್ಲಿ ಬ್ರಿಟನು ಬಟ್ಟೆ ಮತ್ತಿತರ

ಸಾಮಗ್ರಿಗಳನ್ನು ವಿದೇಶಗಳಿಗೆ ರಫ್ತುಮಾಡಿತು. ಬಂದ ಹಣದಿಂದ ಆ ದೇಶಗಳ ಉತ್ಪತ್ತಿಗಳನ್ನೇ ಕೊಂಡುಕೊಂಡಿತು. ಹೀಗೆ ತಮ್ಮ ಸಾಮಗ್ರಿಗಳ ಬದಲು ತಮಗೆ ಬೇಕಾಗುವ ಕಚ್ಚಾಮಾಲು ಆಹಾರಗಳನ್ನು ಕೊಂಡುಕೊಳ್ಳುವ ಕೆಲಸ ನಡೆಯಿತು. ಆದರೆ ಕಳೆದ ಶತಮಾನದ ಉತ್ತರಾರ್ಧದಲ್ಲಿ, ಅದರಲ್ಲೂ ಶತಮಾನದ ಕೊನೆಯಲ್ಲಿ, 'ನಿಧಿ–ಭಂಡವಳ'ದವರಿಗೆ ಭಂಡವಳವನ್ನೇ ರಫ್ತುಮಾಡುವ ಯೋಚನೆ ಬಲವಾಯಿತು. ವ್ಯಾಪಾರದ ವಿನಿಮಯದಿಂದಷ್ಟೇ ಏನು ಪ್ರಯೋಜನ? ಕಳುಹಿಕೊಟ್ಟ ಭಂಡವಳದ ಮೇಲಿನ ಬಡ್ಡಿ ಪ್ರತಿ ವರ್ಷ ಬರುತ್ತಿರುವುದೇ ಮುಖ್ಯವಾಯಿತು. ಹೀಗೆ ಭಂಡವಳವನ್ನು ರಫ್ತುಮಾಡುವುದೆಂದರೆ ವಿದೇಶೀಯ ರಾಷ್ಟ್ರಗಳಿಗೆ ಇಲ್ಲವೆ ಕಂಪೆನಿಗಳಿಗೆ ಸಾಲಕೊಡುವುದು, ಬ್ರಿಟಿಷ್ ವಸಾಹತುಗಳಲ್ಲಿ ರೈಲುಮಾರ್ಗ ಇಲ್ಲವೆ ಬಂದರು ಕಟ್ಟಿಸಲು ದುಡ್ಡು ನೀಡುವುದು, ಇ., ಇ. ಆದರೆ ಇಂತಹ ವ್ಯವಹಾರಗಳಲ್ಲೆಲ್ಲ ಶರತವಿಲ್ಲದೆ ಇಲ್ಲ;—ಬೇಕಾಗಿರುವ ಸಾಮಗ್ರಿಗಳನ್ನೆಲ್ಲ ಆ ಬ್ಯಾಂಕಿಗೆ ಸಂಬಂಧವಿರುವ ಔದ್ಯೋಗಿಕ ಸಂಸ್ಥೆಯಿಂದಲೇ ಕೊಂಡುಕೊಳ್ಳಬೇಕು. ಹೀಗೆ ನಿಧಿ ಭಂಡವಳದ ಎರಡು ಶಾಖೆಗಳು ಜತೆಯಾಗಿ ಹರಿದುವು; ಪ್ರತಿಯೊಂದೂ ಒಳ್ಳೆಯ ಲಾಭಮಾಡಿತು; ಪ್ರತಿಸ್ಪರ್ಧಿಗಳು ಆ ವ್ಯವಹಾರಕ್ಕೆ ಬರಲು ಅವಕಾಶವನ್ನೇ ಕೊಡಲಿಲ್ಲ.

೪. ಭಂಡವಳಗಾರರ ಅಂತರ ರಾಷ್ಟ್ರೀಯ ಸರ್ವಾಧಿಪತ್ಯದ ಗುತ್ತಿಗೆಗಳು ಸ್ಥಾಪಿತವಾದುವು; ಲೋಕ ಅವರೊಳಗೆ ವಿಭಾಗಿಸಲ್ಪಟ್ಟಿತು.

ಉಕ್ಕು, ಎಣ್ಣೆ ಮತ್ತಿತರ ಹಲ ಉದ್ಯಮಗಳಲ್ಲಿ ಇಂತಹ ವ್ಯವಸ್ಥೆಯಾಯಿತು. ಒಟ್ಟು ವಿದೇಶೀಯ ವ್ಯಾಪಾರದಲ್ಲಿ ಒಬ್ಬೊಬ್ಬರಿಗೆ ಎಷ್ಟೆಷ್ಟು ಪಾಲು—ಎಂಬುದು ವಿವಿಧ ರಾಷ್ಟ್ರಗಳ ಭಂಡವಳಶಾಹಿ ಗುತ್ತಿಗೆಗಳೊಳಗೆ ಒಪ್ಪಂದವಾಯಿತು. ಒಮ್ಮೊಮ್ಮೆ, ಇಂಥ ಮಾರ್ಕೆಟು ಇಂಥವರಿಗೆ ಎಂದು ಗೊತ್ತುಮಾಡಿ, ಬೆಲೆ ನಿರ್ಧರಿಸಲ್ಪಟ್ಟಿತು. ಆದರೆ ಅಂತಹ ಒಪ್ಪಂದಗಳಿಗೂ ಮಿತಿ ಇಲ್ಲದಿಲ್ಲ. ಆ ಬಗ್ಗೆ ವಿವರಣೆ ಮುಂದಿದೆ.

೫. ಅತಿ ಪ್ರಬಲರಾಷ್ಟ್ರಗಳು ಲೋಕವನ್ನು ವಿಭಾಗಿಸಿ ತಮ್ಮೊಳಗೆ ಹಂಚಿಕೊಳ್ಳುವ ಕೆಲಸ ಪೂರ್ಣವಾಗುತ್ತ ಬಂತು. [೧೮೭೬ ರಲ್ಲಿ ಆಫ್ರಿಕದ

ಶೇಕಡ ೧೧ರಷ್ಟು ಭಾಗ ಯುರೋಪಿಯನರಿಗೆ ಸೇರಿತ್ತು; ೧೯೦೦ರಲ್ಲಿ ಅದು ಶೇಕಡ ೯೦ ಆಯಿತು.]

ಇದರ ಪ್ರಾಧಾನ್ಯವೇನೆಂದರೆ, ಹೆಚ್ಚು ಕಡಿಮೆ ನಿಸ್ಸಹಾಯವಾದ ರಾಷ್ಟ್ರಗಳನ್ನು ಇನ್ನು ಸ್ವಾಹಾ ಮಾಡುತ್ತಲೇ ಹೋಗುವುದು ಸಾಧ್ಯವಿರಲಿಲ್ಲ. ಅತಿ ಶ್ರೀಮಂತ ರಾಷ್ಟ್ರಗಳ ನಿಧಿ–ಭಂಡವಳ ಕೂಟಗಳು ತಾವು ವಶಪಡಿಸಿ ಕೊಂಡಿದ್ದ ರಾಷ್ಟ್ರಗಳನ್ನು ತಮ್ಮಲ್ಲೇ ಒಬ್ಬರೊಬ್ಬರ ಅಹಿತಕ್ಕೆ ಕಾರಣ ವಾಗದೆ ವಿಸ್ತರಿಸುವುದು ದುಃಸಾಧ್ಯವಾಗಿತ್ತು—ಅಂದರೆ ಬಲಶಾಲಿಗೆ ಉಪಯೋಗವಾಗುವಂತೆ ಲೋಕವನ್ನು ತಿರುಗಿ ವಿಭಜಿಸಲು ದೊಡ್ಡ ಯುದ್ಧ ವೊಂದೇ ಹಾದಿಯಾಗಿತ್ತು.

ಈ ಸಂಬಂಧದಲ್ಲಿ ಲೆನಿನ್ ಮಾಡಿದ ಇನ್ನೊಂದು ವಿಶೇಷ ಸೂಚನೆ ಯನ್ನು ಗಮನಿಸಬೇಕು. ಸಾಮ್ರಾಜ್ಯಶಾಹಿ ರಾಜ್ಯದ ವಿಸ್ತರಣೆಯೆಂದರೆ ವಸಾಹತುಗಳನ್ನು ನುಂಗುವುದು ಎಂದು ಸಾಮಾನ್ಯ ಆರ್ಥ. ಹಾಗಾ ಗಲೇಬೇಕೆಂದಿಲ್ಲವೆಂದು ಲೆನಿನ್ ಹೇಳಿದ; ವಿಸ್ತರಣ, ಅನುಕೂಲ ಸಂದರ್ಭ ಗಳಲ್ಲಿ ಯೂರೋಪಿನ ಇತರ ರಾಷ್ಟ್ರಗಳಿಗಿದಿರಾಗಿಯೂ ನಡೆಯಬಹುದು. ಜರ್ಮನಿ ಮತ್ತು ಇಟಲಿ ಆರಂಭಿಸಿದ ವಿಸ್ತರಣ ಯುದ್ಧ ಮೇಲಿನ ಮಾತಿ ಗೊಂದು ಸ್ಪಷ್ಟ ನಿದರ್ಶನ.

ಇದೆಲ್ಲ ಸರಿಯೆಂಬುದನ್ನು ಕಳೆದ ಇಪ್ಪತ್ತೈದು ವರ್ಷಗಳ ಘಟನೆಗಳು ತೋರಿಸಿಕೊಟ್ಟಿವೆ. ಮೇಲಿನ ಪೃಥಕ್ಕರಣದ ಆಧಾರದ ಮೇಲೆಯೇ, ಭಂಡ ವಳಶಾಹಿ ಪದ್ಧತಿಯ ಸಾಮ್ರಾಜ್ಯವಾದಿ ಘಟ್ಟದಿಂದ ಹೆಚ್ಚಿನ ಆರ್ಥಿಕ ದುರಂತಗಳಾಗುವುವೆಂದು, ಜಾಗತಿಕ ಯುದ್ಧಗಳು ಹೂಡಲ್ಪಡುವುವೆಂದು, ಕೂಲಿಕಾರವರ್ಗದ ಕ್ರಾಂತಿಗಳಾಗುವುವೆಂದು, ಸಾಮ್ರಾಜ್ಯವಾದಿಗಳ ಶೋಷಣೆಗಿದಿರಾಗಿ ವಸಾಹತು ಮತ್ತು ಅರ್ಧ ವಸಾಹತುಗಳ ಮರ್ದಿತ ಜನರು ಬಂಡಾಯ ಹೂಡುವರೆಂದು–ಲೆನಿನ್ ನಿರ್ಧರಿಸಿದ.

ಚಿಕ್ಕ ಪುಟ್ಟ ಕೂಟಗಳ ಕೈಯಲ್ಲಿ ಭಂಡವಳದ ಕೇಂದ್ರೀಕರಣವಾಗು ವುದೆಂದರೆ, ರಾಜ್ಯಯಂತ್ರ ಹೆಚ್ಚು ಹೆಚ್ಚಾಗಿ ಇವರ ಹಿಡಿತಕ್ಕೆ ಸೇರಿ ದಂತೆಯೇ. ಇದರಿಂದಾಗಿ ವಿವಿಧ ರಾಷ್ಟ್ರಗಳ ಧೋರಣೆಗೂ ಈ ಕೆಲವರ ಕೂಟಗಳ ಸ್ವಾರ್ಥಕ್ಕೂ ನಿಕಟ ಸಂಬಂಧ ಬೆಳೆಯಿತು. ಈ ಕಾರಣ

ದಿಂದಲೇ ಪ್ರತಿಯೊಂದು ರಾಷ್ಟ್ರದಲ್ಲೂ ಅಲ್ಲಿನ ನಿಧಿ–ಭಂಡವಳವರ್ಗ ತಮ್ಮ ವಿದೇಶೀಯ ಸ್ಪರ್ಧಿಗಳನ್ನು ಸುಂಕ ತೆರಿಗೆ ಇಂತಹ ರಾಜ್ಯಾಡಳಿತದ ನಿರ್ಬಂಧಗಳ ಸಹಾಯದಿಂದ ಬಗ್ಗುಬಡೆಯುವುದು ಸಾಧ್ಯವಾಗಿದೆ. ಒಂದು ರಾಜ್ಯ ಇನ್ನೊಂದರ ಮೇಲೆ ಯುದ್ಧ ಘೋಷಣೆ ಮಾಡುವುದಕ್ಕಾದರೂ ಇದೇ ಕಾರಣ.

ಪರಸ್ಪರ ಸ್ಪರ್ಧಿಸುವ ಕೂಟಗಳೊಳಗಿನ ತಿಕ್ಕಾಟ ಏಕೆ ಅನಿವಾರ್ಯವಾಗಿದೆ? ಲೋಕವನ್ನು ಒಮ್ಮೆ ತಮ್ಮೊಳಗೆ ಹಂಚಿಕೊಂಡು ಸುಮ್ಮನಿರಲು ಅವರು ಯಾಕೆ ಒಪ್ಪುವುದಿಲ್ಲ?

ಲೋಕದ ಮಾರ್ಕೆಟುಗಳನ್ನು ತಮ್ಮತಮ್ಮೊಳಗೆ ಹಂಚಿಕೊಳ್ಳುವ ವಿಷಯದಲ್ಲಿ ವಿವಿಧ ರಾಷ್ಟ್ರಗಳ ಗುತ್ತಿಗೆ ಕೂಟಗಳು ಒಪ್ಪಂದಕ್ಕೆ ಬರುತ್ತವೆ ಎಂದು ಮೇಲೆ ಹೇಳಿದೆ. ಮೇಲಿಂದ ಮೇಲೆ ನೋಡಿದರೆ, ಈ ವ್ಯವಸ್ಥೆಯಿಂದಾಗಿ ಸ್ಪರ್ಧೆಯೇ ಇಲ್ಲದಂತೆ ಚಿರಕಾಲ ಬಾಳಬಲ್ಲ ಸ್ವಾರ್ಥ ಲಾಭಗಳ ಅಂತರರಾಷ್ಟ್ರೀಯ ಮಿಲನವಾದಂತೆ, ತೋರಬಹುದು. ಆದರೆ ಅಂಥ ಅಂತರರಾಷ್ಟ್ರೀಯ ಒಪ್ಪಂದಗಳು ಹೆಚ್ಚು ಕಾಲ ಉಳಿಯುವುದಿಲ್ಲ ಎಂಬುದನ್ನು ಸಕಾರಣವಾಗಿ ಲೆನಿನ್ ತೋರಿಸಿಕೊಟ್ಟ. ೧೯೦೫ರಲ್ಲಿ ಒಂದು ಒಪ್ಪಂದವಾಯಿತೆಂದು ಇಟ್ಟುಕೊಳ್ಳೋಣ. ಆಗ ಬ್ರಿಟಿಷ್, ಫ್ರೆಂಚ್, ಜರ್ಮನ್ ಮತ್ತು ಅಮೆರಿಕನರ ಉತ್ಪಾದನ ಶಕ್ತಿ ಎಷ್ಟಿರುವುದೋ ಅದನ್ನು ಅವಲಂಬಿಸಿ ಆ ಒಪ್ಪಂದವಾಗುವುದು. ಆದರೆ ಅಸಮವಾದ, ಒಂದೇ ಸಮವಲ್ಲದ, ಬೆಳವಣಿಗೆಯೇ ಭಂಡವಳದ ಅಭಿವೃದ್ಧಿಯ ನಿಯಮ. ಅಂಥ ಒಪ್ಪಂದ ಮಾಡಿಕೊಂಡ ಕೆಲವೇ ವರ್ಷಗಳಲ್ಲಿ ಜರ್ಮನ್ ಕೂಟದ ಇಲ್ಲವೆ ಅಮೆರಿಕನರ ಅಥವಾ ಇನ್ನೊಂದು ಕೂಟದ ಉತ್ಪಾದನ ಶಕ್ತಿ ಬೆಳೆಯುವುದು. ಆಗ ಈ ಕೂಟ ತನ್ನ ಹಿಂದಿನ ಭಾಗದಲ್ಲೇ ಖಂಡಿತವಾಗಿ ತೃಪ್ತವಾಗಲಾರದು. ಒಪ್ಪಂದ ಇನ್ನು ತನಗೆ ಅನ್ವಯಿಸುವುದಿಲ್ಲ ಎಂದು ಆ ಕೂಟ ಹೇಳುವುದು. ಬೇರೆಯವರು ಕೂಡಲೆ ಅದರ ಕೇಳಿಕೆಯನ್ನು ಮನ್ನಿಸದಿದ್ದರೆ ಮಾರ್ಕೆಟುಗಳಿಗಾಗಿ ಹೊಸತೊಂದು ಅತ್ಯುಗ್ರ ಹೋರಾಟ ಆರಂಭವಾಗುವುದು. ಅಂಥ ಎಲ್ಲ ಒಪ್ಪಂದಗಳ ಗತಿಯೂ ಇದೇ. ಅಸಮ ಅಭಿವೃದ್ಧಿಯ ನಿಯಮ ಒಂದು ನಿರ್ದಿಷ್ಟ ಔದ್ಯೋಗಿಕ ಕೂಟಕ್ಕಷ್ಟೇ ಅಲ್ಲದೆ ವಿವಿಧ ರಾಷ್ಟ್ರಗಳೆಲ್ಲ

ದರ ಭಂಡವಳಕ್ಕೂ ಅನ್ವಯಿಸುವುದರಿಂದ, ಆರ್ಥಿಕ ಪಂಚಾಯಿತಿಗಳೆಲ್ಲ, ವಿವಿಧ ರಾಷ್ಟ್ರಗಳ ನಿಧಿ-ಭಂಡವಳವರ್ಗಗಳೊಳಗೆ ಒಂದೇ ಸವನೆ ನಡೆದಿರುವ ವ್ಯಾಪಾರ ಸಮರದಲ್ಲಿ ತಾತ್ಕಾಲಿಕ ಒಪ್ಪಂದಗಳಾಗಿರುತ್ತವೆ.

ಬರೇ ಆರ್ಥಿಕ ಸಮರವೊಂದರಿಂದಲೇ ಏನೂ ಪ್ರಯೋಜನವಾಗದು. ಅದಕ್ಕಾಗಿ ನಿಧಿ–ಭಂಡವಳ ವರ್ಗಗಳು ತಮ್ಮ ತಮ್ಮ ರಾಜ್ಯ ಯಂತ್ರದ ಮೂಲಕ ತಮ್ಮ ಸ್ಪರ್ಧಿಗಳಿಗಿದಿರಾಗಿ ಟಾರಿಫ್ ತಡೆಯನ್ನು ಏರ್ಪಡಿಸುವುವು. ಆಮದಾಗುವ [ಆಯಾತ] ಸಾಮಗ್ರಿ ಇಷ್ಟೇ ಇರಬೇಕೆಂದು ನಿರ್ಬಂಧ ಹೇರಿಸುವುವು. ಇತರ ರಾಷ್ಟ್ರಗಳೊಡನೆ ತಮಗೆ ಅನುಕೂಲ ಸ್ಥಾನ ಸಿಗುವಂತೆ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಳ್ಳುವುವು. ತಮ್ಮ ಸರ್ವಾಧಿಪತ್ಯವಿರುವ ಪ್ರದೇಶವನ್ನು ವಿಸ್ತರಿಸಲು ಯತ್ನಿಸುವುವು. ತಾತ್ಕಾಲಿಕವಾಗಿಯಾದರೂ ಎಲ್ಲರಲ್ಲಿ ಶ್ರೇಷ್ಠರಾಗುವುದಕ್ಕೋಸ್ಕರ ಯುದ್ಧಕ್ಕಾಗಿ, ·ಯುದ್ಧದಲ್ಲಿ ಜಯಸಂಪಾದಿಸುವುದಕ್ಕಾಗಿ, ಶಸ್ತ್ರಸನ್ನಾಹಕ್ಕೆ ತೊಡಗುವುವು.

ಪ್ರತಿ ರಾಷ್ಟ್ರದಲ್ಲೂ ನಿಧಿ–ಭಂಡವಳ ವರ್ಗದ ಕೈಯಲ್ಲಿ ಧನ ಸಂಗ್ರಹವಾಗುವುದರ ಫಲವಾಗಿಯೇ ದೊಡ್ಡ ಯುದ್ಧಗಳಾಗುತ್ತವೆ. ಹಿರಿಯ ರಾಷ್ಟ್ರಗಳೂ ಪರಸ್ಪರ ಹೋರಾಟದಲ್ಲಿ ಮಗ್ನವಾಗುತ್ತವೆ. ತೋರಿಕೆಗೆ ಬರೇ ಆರ್ಥಿಕ ಪ್ರವೃತ್ತಿಯಂತೆ ಕಂಡರೂ ಉತ್ಪಾದನ ಮತ್ತು ಭಂಡವಳ ಒಂದೇ ಕಡೆ ಸಂಗ್ರಹವಾಗುವುದರಿಂದ ಯುದ್ಧದಂಥ ಭಯಂಕರವಾದ ಸಾಮಾಜಿಕ ಮಹೋತ್ಪಾತವಾಗುವುದು. ಭಂಡವಳದ ಬೆಳವಣಿಗೆಯಿಂದ ಉತ್ಪನ್ನವಾಗುವ ಸಾಮಾಜಕ ಮಹೋತ್ಪಾತ ಇದೊಂದೇ ಅಲ್ಲ. ಉತ್ಪಾದನ ಶಕ್ತಿಗಳ ಕೊನೆಯಿಲ್ಲದ ಬೆಳವಣಿಗೆ ಒಂದೆಡೆ, ಪರಸ್ಪರ ವಿರೋಧಿಗಳಾದ ಗುತ್ತಿಗೆ ಗುಂಪುಗಳೊಳಗಿನ ಸ್ಪರ್ಧೆ ಇನ್ನೊಂದೆಡೆ-ಎರಡೂ ಸೇರಿ ಉತ್ಪಾದನೆಯಲ್ಲಿ ಸುಧಾರಣೆ ಮಾಡುವ "ವಿವೇಕದ ಉಪಯೋಗದ" ತೀಕ್ಷ್ಣತೆಯನ್ನು ಹೆಚ್ಚಿಸುವುವು. ಭಂಡವಳ ಪದ್ಧತಿಯಲ್ಲಿ ಪೂರ್ಣವಾದೊಂದು ಸಂದಿಗ್ಧ ಪರಿಸ್ಥಿತಿ ಬಂದೊದಗುವುದು. ಪ್ರಾಯಶಃ ಯುದ್ಧವೊಂದರಲ್ಲೇ ಉತ್ಪಾದನ ಶಕ್ತಿಯನ್ನು ಪೂರ್ಣವಾಗಿ ಉಪಯೋಗಿಸುವುದು ಸಾಧ್ಯ. ವ್ಯಾಪಾರಾಭಿವೃದ್ಧಿ ಅತ್ಯುತ್ತಮವಾಗಿರುವ ಕಾಲದಲ್ಲೂ ಕೂಡ ಯಂತ್ರ ಸಾಮಗ್ರಿಗಳು ರಾಶಿಗಟ್ಟಲೆಯಲ್ಲಿ ಹಾಗೆಯೇ ಉಳಿಯುತ್ತವೆ. ಎಷ್ಟೋ ಭೂಪ್ರದೇಶಗಳು

ಬಂಜರು ಬಿದ್ದಿರುತ್ತವೆ. ಲಕ್ಷಗಟ್ಟಲೆ ಕೂಲಿಕಾರರು ನಿರುದ್ಯೋಗಿಗಳಾಗಿರುತ್ತಾರೆ. ಬರೀ ಕೆಲ ಮಂದಿಯ ಗುಂಪಿನ ಕೈಯೊಳಗೆ ಧನ ರಾಶಿ ಕೂಡಿರುವುದರ ಫಲವಾಗಿ ಉತ್ಪಾದನಕ್ಕೆ ಪೂರ್ಣ ತಡೆಬೀಳುವ ಪರಿಸ್ಥಿತಿ ಬಂದೊದಗುತ್ತದೆ. ಹಿಂದೊಮ್ಮೆ ಖಾಸಗಿ ನಿಧಿ ಮಾನವವರ್ಗದ ಉತ್ಪಾದನ ಶಕ್ತಿಯನ್ನು ಹೆಚ್ಚಿಸಲು ನೆರವಾಯಿತು. ಈಗ ಅದರ ಮುಂದಿನ ಬೆಳವಣಿಗೆಗೆ ಪ್ರತಿಬಂಧಕವಾಯಿತು.

ಫಲವಾಗಿ ರಾಜಕೀಯ ಪರಿಣಾಮಗಳು ಆಗಿಯೇ ಆಗುತ್ತವೆ. ಪರಸ್ಪರ ವಿರೋಧಿಗಳಾದ ಸಾಮ್ರಾಜ್ಯಶಾಹಿಗಳೊಳಗಿನ ಸ್ಪರ್ಧೆಯ ಸಮರದಲ್ಲಿ ಕೂಲಿಕಾರರ ಸ್ಥಿತಿ ಕೆಡುತ್ತ ಹೋಗುವುದು. ತಾಂತ್ರಿಕ ನೈಪುಣ್ಯ ಮತ್ತು ಶ್ರಮಶಕ್ತಿಯನ್ನು ಕಡಿಮೆಮಾಡುವ ಯಂತ್ರದ ಉಪಯೋಗ ಒಂದೆಡೆ; ಜತೆಯಲ್ಲೇ ಉತ್ಪಾದನದ ವೇಗವನ್ನು ಹೆಚ್ಚಿಸುವಿಕೆ ಇನ್ನೊಂದೆಡೆ. ಯುದ್ಧಕ್ಕಾಗಿ ಶಸ್ತ್ರ ಸರಂಜಾಮು ಮತ್ತಿತರ ಸನ್ನಾಹಗಳಾಗುವಾಗ, ಸಾಮಾಜಿಕ ಉಪಯೋಗಕ್ಕೆ ಬೇಕಾಗುವ ಸಾಮಗ್ರಿಗಳ ಉತ್ಪಾದನೆ ಕಡಿಮೆಯಾಗುತ್ತದೆ. ನಿರುದ್ಯೋಗ ಮತ್ತು ಅರ್ಧ ಮರ್ಧ ಉದ್ಯೋಗ ಹೆಚ್ಚುತ್ತದೆ. ಪ್ರತಿಯೊಂದು ವ್ಯಾಪಾರದ ಉನ್ನತಿಯ ಅನಂತರ ಬರುವ ಅನಿವಾರ್ಯವಾದ ಆರ್ಥಿಕ ದುರಂತದ ಕಾಲದಲ್ಲಿ ಕೂಲಿಯಲ್ಲಿ ಕಡಿತವಾಗುವುದು. ಪರಿಣಾಮವಾಗಿ ವರ್ಗಸಮರ ಮತ್ತಷ್ಟು ತೀಕ್ಷ್ಣವಾಗುವುದು. ಕೂಲಿಕಾರವರ್ಗದ ಕ್ರಾಂತಿ ನೆನಸಾಗುವುದು, ಸಾಧ್ಯವಾಗುವುದು.

ಭಂಡವಳದ ಸಾಮ್ರಾಜ್ಯಶಾಹಿ ಘಟ್ಟದಲ್ಲಿ ಇನ್ನೊಂದು ಗುಣ ವಿಶೇಷವಿದೆ. ತನ್ನ ಪೃಥಕ್ಕರಣದಲ್ಲಿ ಲೆನಿನ್ ಅದನ್ನು ಸ್ಪಷ್ಟಗೊಳಿಸಿದ. ಹಿಂದುಳಿದಿರುವ ಜನರನ್ನು ಶೋಷಿಸುವುದರ ಮೂಲಕ ಸಾಮ್ರಾಜ್ಯವಾದಿ ರಾಷ್ಟ್ರಗಳಲ್ಲಿರುವ ಗುತ್ತಿಗೆ ಕೂಟಗಳು ಸರಾಸರಿ ಲಾಭಕ್ಕಿಂತಲೂ ಹೆಚ್ಚನ್ನು ಪಡೆಯುವುವು. ಇದಕ್ಕೆ ಕಾರಣಗಳಿವು: ಬಲು ಹಳೆಯ ಉತ್ಪಾದನ ವಿಧಾನಗಳನ್ನು ಉಪಯೋಗಿಸುತ್ತಿರುವ ಈ ಜನರ ಜೀವನ ಮಟ್ಟ ತೀರ ಕೆಳಗಿನದು; ಬಲು ನಿರ್ದಯರಾದ ಆಡಳಿತಗಾರರೂ ಭಂಡವಳಗಾರರೂ ಭಯಂಕರ ಪರಿಸ್ಥಿತಿಯನ್ನು ಆ ಜನರಿಗೆ ತಂದೊಡ್ಡಿದ್ದಾರೆ; ಯಾಂತ್ರಿಕ ಕೈಗಾರಿಕೆಯ ಉತ್ಪತ್ತಿಗಳ ಬದಲು ಏರಿದ ವಿನಿಮಯ ಬೆಲೆಯಲ್ಲಿ ಗುಡಿಸಲು ಕೈಗಾರಿಕೆ

ಗಳ ಉತ್ಪತ್ತಿಗಳನ್ನು ಬೇಕಾದ ಹಾಗೆ ಕೊಂಡುಕೊಳ್ಳಬಹುದು. ಯಾವು ದಾದರೊಂದು ವಸ್ತುವಿನ ವಿನಿಮಯ ಬೆಲೆಯು ಆ ವಸ್ತುವಿನ ಉತ್ಪಾದನೆಗೆ ಅವಶ್ಯವಾಗಿರುವ ಸರಾಸರಿ ಸಾಮಾಜಿಕ ಶ್ರಮವನ್ನು ಅನ್ವಯಿಸಿದೆ ಎಂದು ಮೊದಲೇ ಹೇಳಿದ್ದೇವೆ. ಬ್ರಿಟನಿನಲ್ಲಿ ಒಂದು ಗಜ ಬಟ್ಟೆಯನ್ನು ತಯಾರಿಸಲು ಅವಶ್ಯವಿರುವ ಸಾಮಾಜಿಕ ಶ್ರಮಸಮಯವು, ಕೈಮಗ್ಗದಲ್ಲಿ ಒಂದು ಗಜ ಬಟ್ಟೆಯನ್ನು ಸಿದ್ಧಗೊಳಿಸಲು ಬೇಕಾಗುವ ಶ್ರಮಸಮಯದ ಇನ್ನೂರರಲ್ಲಿ ಒಂದಂಶದಷ್ಟು ಮಾತ್ರ. ಆದರೆ ಬ್ರಿಟನಿನ ಆ ಒಂದು ಗಜ ಬಟ್ಟೆ ಇಂಡಿಯಕ್ಕೆ ಬಂದೊಡನೆ ಅದರ ವಿನಿಮಯ ಬೆಲೆ ಕೈಮಗ್ಗದಲ್ಲಿ ನೇಯುವ ಒಂದು ಗಜ ಬಟ್ಟೆಯ ವಿನಿಮಯ ಬೆಲೆಯಷ್ಟೇ ಆಗುತ್ತದೆ. ಬ್ರಿಟನಿನಲ್ಲಿ ಆ ಒಂದು ಗಜ ಬಟ್ಟೆಯ ಬೆಲೆ ಕಡಿಮೆ ಇದ್ದರೂ, ಇಂಡಿಯದಲ್ಲಿ ಅದು ಬಹಳ ಹೆಚ್ಚಾಗುತ್ತದೆ. ಬ್ರಿಟನಿನಲ್ಲಿ ಆ ಬಟ್ಟೆಯ ಬೆಲೆ ಅತ್ಯಲ್ಪ. ಆದರೆ ಅದನ್ನು ಇಂಡಿಯಕ್ಕೆ ತಂದು ಹೆಚ್ಚಿನ ಬೆಲೆಗೆ ಮಾರಿ ಬಂದ ಹಣಕ್ಕೆ ಸರಿಯಾದ ಕಚ್ಚಾಮಾಲುಗಳನ್ನಾಗಲೀ ಇಂಡಿಯದ ಇತರ ಸಾಮಗ್ರಿಗಳನ್ನಾಗಲೀ ಕೊಂಡು ಬ್ರಿಟನಿಗೆ ತಂದರೆ—ತಂದು ಮಾರಿದರೆ ಸಿಗುವ ಲಾಭ ಬಹಳ. ಬ್ರಿಟನಿನಲ್ಲೇ ಆಬಟ್ಟೆಯನ್ನು ಮಾರಿ ಗಳಿಸಬಹುದಾದ ಲಾಭಕ್ಕಿಂತ ಎಷ್ಟೋ ಹೆಚ್ಚು. ಯಂತ್ರಸಾಮಗ್ರಿಗಳು ಒಂದೇ ರೀತಿಯಾಗಿದ್ದರೂ ಸರಿಯೆ. ಉತ್ಪಾದನದ ಜಾಣ್ಮೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇದ್ದರೂ ಸಾಕು, ಅದರ ಪರಿಣಾಮ ಆಗಿಯೇ ಆಗುತ್ತದೆ; ಸ್ವಲ್ಪ ಹೆಚ್ಚು ಲಾಭ ಬಂದೇ ಬರುತ್ತದೆ. ಬಟ್ಟೆಯ ವಿಷಯದಲ್ಲಿ ಮಾತ್ರವಲ್ಲ, ಎಲ್ಲಾ ರೀತಿಯ ಉತ್ಪಾದನೆಗಳಲ್ಲೂ ಈ ಹೆಚ್ಚಿನ ಲಾಭ ಇದ್ದೇ ಇರುತ್ತದೆ. ನಿಧಿ-ಭಂಡವಳ ಕೂಟಗಳು ಈ ಮೂಲಕ ರಾಶಿಗಟ್ಟಲೆ ಹಣ ಸಂಪಾದಿಸುತ್ತವೆ. ಎಲ್ಲರ್‌ಮಾನ್ ಸಂಸ್ಥೆಯ ನಾಲ್ಕು ಕೋಟಿ ಪವನು ಮತ್ತು ಯೂಲ್ ಸಂಸ್ಥೆಯ ಎರಡು ಕೋಟಿ ಪವನು, ಮೇಲೆ ಹೇಳಿದ ರೀತಿಯ ಹೆಚ್ಚಿನ ಲಾಭದಿಂದಲೇ ಬಂದಿವೆ.

ವಸಾಹತುಗಳ ಜನರನ್ನು ಶೋಷಿಸುವುದರ ಫಲವಾಗಿ ಈ ಹೆಚ್ಚಿನ ಲಾಭ ಹುಟ್ಟುತ್ತದೆ. ಈ ಲಾಭಕ್ಕೂ ಕೂಲಿಕಾರರ ಆಂದೋಲನಕ್ಕೂ ಒಂದು ವಿಶಿಷ್ಟ ಸಂಬಂಧವಿದೆ. ಯಂತ್ರೋತ್ಪಾದಕ ಸಾಮಗ್ರಿಗಳನ್ನು

ಲೋಕದಲ್ಲೆಲ್ಲಾ ಮೊದಲು ಮಾರಿದವರು ಬ್ರಿಟಿಷ್ ಭಂಡವಳಗಾರರು, ಹೆಚ್ಚು ಹೆಚ್ಚು ಲಾಭ ಪಡೆದವರು ಅವರೇ. ತಮ್ಮ ದೇಶದ ಕಾರ್ಮಿಕರ ಕೇಳಿಕೆಗಳಿಗೂ ಒತ್ತಾಯಕ್ಕೂ ಅವರು ಸ್ವಲ್ಪ ತಲೆಬಾಗಿ, ನುರಿತ ಕೆಲಸ ಗಾರರ ಮಟ್ಟಿಗೆ ಹೆಚ್ಚು ಕೂಲಿ ಕೊಟ್ಟರು. ಬ್ರಿಟನಿನ ನುರಿತ ಇಂಜಿನಿಯ ರುಗಳಲ್ಲೂ ಬಟ್ಟೆ ಕೆಲಸಗಾರರಲ್ಲೂ ಕೆಲವಿಭಾಗಗಳ ಜನರು, ಲೋಕದ ಇನ್ನಿತರ ಕೂಲಿಗಾರರಿಗಿಂತ ಬಹಳ ಹೆಚ್ಚಿನ ಮೇಲ್ಮಟ್ಟದ ಜೀವನ ಕ್ರಮ ವನ್ನು ಗಳಿಸಿದರು; ಇವರ ಜತೆಯಲ್ಲೇ ವಸಾಹತುಗಳನ್ನು ಶೋಷಿಸುವ ಭಂಡವಳಗಾರರ ಧೋರಣೆಗೆ ಬೆಂಬಲಕೊಟ್ಟರು. ಈ ವಿಚಾರವನ್ನು ಮಾರ್ಕ್ಸ್ ಆಗಲೇ ಸೂಚಿಸಿದ್ದ. ಸಾಮ್ರಾಜ್ಯ ಶಾಹಿ ಮಟ್ಟವನ್ನು ತಲಪಿ ದಂತೆ ಪ್ರತಿಯೊಂದು ಮುಂದುವರಿದ ಔದ್ಯೋಗಿಕ ರಾಷ್ಟ್ರದಲ್ಲೂ ಇದೇ ಪರಿಸ್ಥಿತಿಯುಂಟಾಯಿತು. ತಕ್ಕಮಟ್ಟಿಗೆ ಸುಧಾರಿತ ಸ್ಥಾನವನ್ನು ಗಳಿಸಿದ್ದ ಕೂಲಿಕಾರ ವಿಭಾಗಗಳು, ಅದರಲ್ಲೂ ಆ ಕೂಲಿಕಾರರ ಮುಖಂಡರು, ಸಂದರ್ಭಸಾಧಕರಾಗತೊಡಗಿದರು. ದೇಶದ ಕೂಲಿಕಾರರ ಮಹಾ ಸ್ತೋಮದ ಸ್ಥಿತಿಗತಿಗಳನ್ನು ಲೆಕ್ಕಿಸದೆ, ತಮ್ಮ ವಿಭಾಗಗಳ ವಿಚಾರವನ್ನಷ್ಟೇ ಗಮನಿಸಿ, ಭಂಡವಳಗಾರರೊಡನೆ ಒಪ್ಪಂದಕ್ಕೆ ಬರತೊಡಗಿದರು. ಈ ವಿಷಯವನ್ನು ಲೆನಿನ್ ತೋರಿಸಿಕೊಟ್ಟ. ಸಾಮ್ರಾಜ್ಯವಾದಿ ಘಟ್ಟ ಬೆಳೆ ದಂತೆ ಈ ಸಂದರ್ಭಸಾಧಕ ಮನೋವೃತ್ತಿಯೂ ಹೆಚ್ಚಿತು. ಇದರ ಫಲ ವಾಗಿ, ಕೂಲಿಕಾರ ಮತ್ತು ಸಮತಾವಾದಿ ಚಳುವಳಿಯ ಪ್ರಮುಖ ವಿಭಾಗ ಗಳು ತಮ್ಮ ದೇಶದ ನಿಧಿ ಭಂಡವಳ ಕೂಟಗಳ ಸಾಮ್ರಾಜ್ಯಶಾಹಿ ಧೋರ ಣೆಯನ್ನು ಸಮರ್ಥಿಸತೊಡಗಿದುವು. ಯುದ್ಧಕಾಲದಲ್ಲಿ (ಮೊದಲ ಘೋರ ಯುದ್ಧ) ಇದು ಮತ್ತಷ್ಟು ಸ್ಪಷ್ಟವಾಯಿತು. ರಷ್ಯದಲ್ಲಿ ಮಾತ್ರ ಬಾಲ್ಶೆವಿ ಕರು ಮಾರ್ಕ್ಸ್‌ವಾದಿಗಳಾಗಿ ಉಳಿದರು. ಇತರ ದೇಶಗಳಲ್ಲೆಲ್ಲಾ ಅಧಿ ಕೃತ ಕಾರ್ಮಿಕ ಆಂದೋಲನಗಳವರು ತಮ್ಮ ತಮ್ಮ ದೇಶದ ಸಾಮ್ರಾಜ್ಯ ಶಾಹಿ ವರ್ತನೆಗೆ ಬೆಂಬಲವಾಗಿ ನಿಂತರು.

ಈ ಸಂದರ್ಭಸಾಧಕ ಮನೋವೃತ್ತಿಯಿಂದಾಗಿ, ಆಳುವವರ್ಗಕ್ಕೂ ತಮಗೂ ಭೇದವಿಲ್ಲವೆಂಬ ಭಾವನೆಯಿಂದಾಗಿ, ಎಷ್ಟೋ ದೇಶಗಳ ಸಮತಾ ವಾದಿ ಚಳುವಳಿಗಳು ಮಾರ್ಕ್ಸ್‌ವಾದವನ್ನು ಬಿಟ್ಟುಕೊಟ್ಟುವು. ಮಾರ್ಕ್ಸ್

ವಾದದ ದೃಷ್ಟಿಕೋನವನ್ನೇ ಇಟ್ಟುಕೊಂಡಿರುವ ಕಮ್ಯೂನಿಸ್ಟ್ ಪಾರ್ಟಿಯು ಚಳುವಳಿಯ ಬಗ್ಗೆ ಸಮತಾವಾದಿ ಆಂದೋಲನಗಳ ಅಧಿಕಾರಿಗಳು ತೋರುತ್ತಿರುವ ದ್ವೇಷಭಾವನೆಗೂ ಅದೇ ಕಾರಣ.

ಸಾಮ್ರಾಜ್ಯಶಾಹಿ ಘಟ್ಟದಲ್ಲಿ, ಬಂಧ ವಿಮೋಚನೆಗಾಗಿ ವಸಾಹತುಗಳು ನಡೆಸುವ ಚಳವಳವೂ ಬಲಗೊಳ್ಳುತ್ತದೆ; ವ್ಯಾಪ್ತಿಗೊಳ್ಳುತ್ತದೆ. ವಸಾಹತುಗಳನ್ನು ಗೆದ್ದು ಒಳಹೊಕ್ಕ ಭಂಡವಳಗಾರರು ಆ ದೇಶದ ಹಳೆಯ ಉತ್ಪಾದನ ಪದ್ಧತಿಯನ್ನು ಮುರಿಯುತ್ತಾರೆ; ಎಷ್ಟೋ ಜನರ ಜೀವನದ ಮೂಲವಾಗಿದ್ದ ಪದ್ಧತಿಯನ್ನು ನಾಶಮಾಡುತ್ತಾರೆ. ಲಂಕಾಶಯರಿನ ಮಿಲ್ಲುಗಳಿಂದ ನೇಕಾರರ ಜೀವನ ಮಣ್ಣುಗೂಡಿತು. ಅವರು ವ್ಯವಸಾಯಗಳಿಗೆ ಮತ್ತೆ ಕೈ ಹಾಕಬೇಕಾಯಿತು. ಹೊಲನೆಲಗಳ ಮೇಲಿನ ಅಡೆತಡೆ ಹೆಚ್ಚಿತು. ಸಾಮ್ರಾಜ್ಯವಾದಿಗಳ ನಾಗರಿಕ ಹಾಗೂ ಮಿಲಿಟರಿ ಆಡಳಿತಕ್ಕಾಗಿ ಬಹಳ ಹಣಬೇಕು. ದೊಡ್ಡ ದೊಡ್ಡ ಸಾಲಗಳ ಬಡ್ಡಿಯನ್ನು ಭರ್ತಿಮಾಡುವುದಕ್ಕೂ ಹಣಬೇಕು. ಇದಕ್ಕಾಗಿ ಜನರೆಲ್ಲ ಹೆಚ್ಚು ಹೆಚ್ಚು ಕರ ತೆರಿಗೆಗಳನ್ನು ತೆರಬೇಕಾಯಿತು. ಹೊಲನೆಲಗಳ ಮೇಲಿನ ಎರಡು ರೀತಿಯ ಈ ಒತ್ತಡದ ಫಲವಾಗಿಯೂ ಭಂಡವಳಶಾಹಿಯ ಸಾರ್ವತ್ರಿಕ ಬಿಕ್ಕಟ್ಟಿನ ಕಾಲದಲ್ಲಿ ವಸಾಹತಿನ ಉತ್ಪತ್ತಿಗಳ ಬೆಲೆಯನ್ನು ಇಳಿಸಿದುದರ ಕಾರಣವಾಗಿಯೂ ಕೃಷಿಕರು ಕಂಗಾಲಾದರು. ಅವರ ಪಾಲಿಗೆ ದೊರಕಿದ್ದು ದಾರಿದ್ರ್ಯ, ಅರೆಹೊಟ್ಟೆ-ಬರಿಹೊಟ್ಟೆಯ ಉಪವಾಸ. ಇದರ ಫಲವಾಗಿ ಕೃಷಿಕರ (ಕಿಸಾನರ) ಹೋರಾಟ ಒಂದೇ ಸವನೆ ನಡೆಯುವಂತಾಯಿತು. ನಗರಗಳಲ್ಲಿ ಔದ್ಯೋಗಿಕ ಉತ್ಪಾದನೆಯಾದರೂ ಭೀತಿಕಾರಕ ಪರಿಸ್ಥಿತಿಯಲ್ಲೇ ಸಾಗುವುದು. ಕೂಲಿಕಾರರ ಸಂಘಟನೆಗೆ ಅಡೆ–ತಡೆ–ಮರ್ದನ ಕಟ್ಟಿಟ್ಟದ್ದೇ. ಮಧ್ಯಮವರ್ಗದವರು, ಅದರಲ್ಲೂ ಬುದ್ಧಿವಂತವರ್ಗದವರು, ಸಾಮ್ರಾಜ್ಯವಾದಿ ಸಂಕೋಲೆಯ ಭಾರವನ್ನು ಅನುಭವಿಸುತ್ತಾರೆ. ಹೊಸದಾಗಿ ಹುಟ್ಟಿಬೆಳೆಯುತ್ತಿರುವ ಹಿಂದೀಯ ಭಂಡವಳಗಾರರೂ ತಮ್ಮ ಅಭಿವೃದ್ಧಿಗಿರುವ ಕಂಟಕಗಳನ್ನು ಕಂಡುಕೊಳ್ಳುತ್ತಾರೆ. ಹೀಗೆ ಸ್ವಾತಂತ್ರ್ಯಕ್ಕಾಗಿ ವಿಸ್ತೃತವಾದ ಒಂದು ಆಂದೋಲನ ಬೆಳೆಯುತ್ತದೆ. ಭಿನ್ನ ಭಿನ್ನ ವಾತಾವರಣದಲ್ಲಾದರೂ ಇದೇ

ರೀತಿಯ ವಿರುದ್ಧ ಆಂದೋಲನ ಪ್ರತಿಯೊಂದು ವಸಾಹತಿನಲ್ಲೂ ನಡೆ ಯುತ್ತದೆ.

ಈ ಹೋರಾಟಗಳೂ ಭಂಡವಳಗಾರರ ಘೋಷಣೆಯ ಅನಿವಾರ್ಯ ಫಲಿತಾಂಶ ಎಂದು ಮಾರ್ಕ್ಸವಾದಿಗಳು ತಿಳಿದುಕೊಳ್ಳುತ್ತಾರೆ. ಸಾಮ್ರಾಜ್ಯ ಶಾಹಿ ಗುಂಪುಗಳನ್ನು ಎತ್ತಿ ಎಸೆದಾಗ ಮಾತ್ರ ಈ ಹೋರಾಟಗಳು ಕೊನೆಗಾಣುತ್ತವೆ ಎಂಬುದೂ ಅವರಿಗೆ ಗೊತ್ತಿದೆ. ಸಾಮ್ರಾಜ್ಯಶಾಹಿ ರಾಷ್ಟ್ರದ ನಿಧಿ–ಭಂಡವಳ ಅವರಿಗೂ ಶತ್ರು; ವಸಾಹತಿನ ಜನರಿಗೂ ಶತ್ರು. ಆದುದರಿಂದಲೇ ಮಾರ್ಕ್ಸ್‌ವಾದಿಗಳು ವಸಾಹತಿನ ಜನರೊಡನೆ ಭುಜಕ್ಕೆ ಭುಜಕೊಟ್ಟು ಸಮಾನ ವೈರಿಗಿದಿರಾಗಿ ಹೋರಾಡುತ್ತಾರೆ.

ಭಂಡವಳಶಾಹಿಯ ಸಾಮ್ರಾಜ್ಯವಾದಿ ಘಟ್ಟದಲ್ಲಿ ಭಂಡವಳದ ಬಲಾಢ್ಯ ಸಂಘಟನೆಯಾಗುತ್ತದೆ. ಆಗಲೇ ಭಂಡವಳಶಾಹಿ ಸಮಾಜ ದಲ್ಲಿರುವ ಆಂತರಿಕ ಕಲಹ ಹೋರಾಟಗಳೆಲ್ಲ ಸ್ಫುಟಗೊಳ್ಳುತ್ತವೆ. ಈ ಘಟ್ಟ ದಲ್ಲೆ, ಆರ್ಥಿಕ ಬಿಕ್ಕಟ್ಟು–ಹೋರಾಟಗಳ ಜತೆಯಲ್ಲಿ ಆಳುವವರ್ಗಕ್ಕಿದಿ ರಾಗಿ ಭೀಕರ ಸಮರಗಳಾಗುತ್ತವೆ. ಈ ಸಮರಗಳ ಯಶಸ್ವೀ ಮುಕ್ತಾಯ ವಾದರೆ, ಆಳುವವರ್ಗ ನಾಶವಾಗುತ್ತದೆ. ಮತ್ತು ಭಂಡವಳಶಾಹಿ ಪದ್ಧತಿ ಕೊನೆಗಾಣುತ್ತದೆ.

೫

## ಈ ಕಾಲದ ವರ್ಗ ಸಮರಗಳು

ಎರಡನೆಯ ಅಧ್ಯಾಯದಲ್ಲಿ ಮಾರ್ಕ್ಸ್‌ನ ವರ್ಗ ಸಮರದ ಸಾಮಾನ್ಯ ಸಿದ್ಧಾಂತವನ್ನು ವಿವರಿಸಿದೆವು. ಉತ್ಪಾದನವನ್ನು ಮಾಡುವ ವರ್ಗ ಒಂದು [ಗುಲಾಮ, ತೊತ್ತು, ಕೂಲಿಕಾರ]; ಉತ್ಪಾದನಕ್ಕಾಗಿ ದುಡಿಯದೆ ಉತ್ಪತ್ತಿಯ ಒಂದು ಅಂಶವನ್ನು ಅನುಭವಿಸುವ ವರ್ಗ ಒಂದು [ಯಜ ಮಾನ, ಭೂಪತಿ, ಭಂಡವಳಗಾರ ಧನಿ]; ಹೀಗೆ ಉತ್ಪಾದನದ ಒಂದು ರೂಪ ಸಮಾಜವನ್ನು ಎರಡು ವರ್ಗಗಳಾಗಿ ವಿಂಗಡಿಸುತ್ತದೆ. ಇದರ ಫಲ ವಾಗಿ ವರ್ಗಸಮರಗಳಾಗುತ್ತವೆ. ಈ ಎರಡು ಪ್ರಧಾನ ವರ್ಗಗಳಷ್ಟೇ

ಅಲ್ಲದೆ ಬೇರೆಯೂ ಇವೆ: ಮುಖ್ಯವಾಗಿ ಹಿಂದಿನ ಉತ್ಪಾದನ ಪದ್ಧತಿಯ ಅವಶಿಷ್ಟಗಳಾಗಿ ಇರುವ ಹಿಂದೀಯ ಸಂಸ್ಥಾನಗಳ ಆಳರಸರು ಮತ್ತು ಕೃಷಿಕ ಉತ್ಪಾದಕರು; ಅಥವಾ, ಪಾಳೆಯಗಾರತನದ ಕಾಲದಲ್ಲಿ ಮೊದ ಮೊದಲಿನ ಶಿಲ್ಪಿಗಳಾಗಿದ್ದವರು, ಅನಂತರ ಪ್ರಮುಖ ಭಂಡವಳಶಾಹಿ ವರ್ಗದಲ್ಲಿ ಮೊದಲಿಗರಾದವರು.

ವರ್ಗಗಳೊಳಗಿನ ಸಮರ ಮನುಷ್ಯನನ್ನು ಉತ್ಪಾದನದ ಮುಂದಿನ ಮಟ್ಟಕ್ಕೆ ಒಯ್ಯುತ್ತದೆ. ಯಶಸ್ವೀ ಕ್ರಾಂತಿಯೊಂದು ನಡೆದಾಗ ಉತ್ಪಾದನದ ರೂಪ ಮೇಲಣ ಮಟ್ಟವನ್ನು ತಲಪುತ್ತದೆ. ಬ್ರಿಟನಿನಲ್ಲಾದ ಕ್ರಾಮ್‌ವೆಲ್ ಕ್ರಾಂತಿಯೂ ೧೬೮೮ ರ ವಿಜಯಪ್ರದ ಕ್ರಾಂತಿಯೂ ಭಂಡವಳದ ಹೆಚ್ಚಿನ ಬೆಳವಣಿಗೆಗೆ ಅವಕಾಶ ಕಲ್ಪಿಸಿದುವು. ಫ್ರಾನ್ಸಿನಲ್ಲಿ ೧೭೮೯ ರಲ್ಲಾದ ಮಹಾ ಕ್ರಾಂತಿಯೂ ಅನಂತರದ ಕ್ರಾಂತಿಗಳೂ ಆ ದೇಶದಲ್ಲಿ ಭಂಡವಳ ಅಭಿವೃದ್ಧಿ ಹೊಂದಲು ಹಾದಿ ಮಾಡಿಕೊಟ್ಟುವು.

ವಸ್ತುಸ್ಥಿತಿಯನ್ನು ಇದ್ದಕ್ಕಿದ್ದಂತೆ ವಿವರಿಸುವುದರಿಂದ ಮಾತ್ರ ಮಾರ್ಕ್ಸ್‌ಗೆ ತೃಪ್ತಿಯಾಗಲಿಲ್ಲ. ವರ್ಗಗಳೊಳಗಿನ ಸಮರದ ನಿಯಮ ವೇನೆಂಬುದನ್ನು ಕಂಡು ಹಿಡಿಯುವುದಕ್ಕೋಸ್ಕರ ಆ ಕಾಲದ ಹೋರಾಟಗಳನ್ನು ಆತ ಸೂಕ್ಷ್ಮವಾಗಿ ಪರೀಕ್ಷಿಸಿದ.

ಹೋರಾಟದ ತಂತ್ರ ಏನು ಎಂಬುದು ಮುಖ್ಯವಲ್ಲ. ಉತ್ಪಾದನದ ಹೊಸರೂಪಕ್ಕೆ ಕಾರಣವಾಗುವ ಕ್ರಾಂತಿಕಾರಕ ಆಂದೋಲನದಲ್ಲಿನ ವರ್ಗಶಕ್ತಿಗಳನ್ನು ವಿಭಜನೆ ಮಾಡಿ ತಿಳಿದುಕೊಳ್ಳಬೇಕೆಂದೂ ಸಾಮಾಜಿಕ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು ಆ ತಿಳಿವಳಿಕೆ ಅಗತ್ಯವೆಂದೂ ಮಾರ್ಕ್ಸ್ ಕಂಡುಕೊಂಡ. ಯೂರೋಪಿನ ಪ್ರತಿಯೊಂದು ರಾಷ್ಟ್ರದಲ್ಲೂ ೧೮೪೮ರಲ್ಲಾದ ಕ್ರಾಂತಿಕಾರಕ ಘಟನೆಗಳನ್ನು ಮುಖ್ಯವಾಗಿ ಪರಿಶೀಲಿಸಿ, ಎಲ್ಲದಕ್ಕೂ ಅನ್ವಯಿಸುವ ಕೆಲ ಸಾಮಾನ್ಯ ಗುಣಗಳನ್ನು ತೋರಿಸಿಕೊಡಲು ಆತ ಶಕ್ತನಾದ,

ಕ್ರಾಂತಿಗಳಲ್ಲಿ ಕಂಡು ಬರುವ ಸಾಮಾನ್ಯ ಗುಣಗಳು ಇಲ್ಲವೆ ನಿಯಮಗಳು ಯಾವುವು ?

ಮೊದಲಾಗಿ, ಉತ್ಪಾದನದ ಹೊಸ ಪದ್ಧತಿಯ ಸೂತ್ರಗಳನ್ನು ಹಿಡಿ

ದಿರುವ ವರ್ಗ ಕ್ರಾಂತಿಕಾರಕ ಹೋರಾಟವನ್ನು ನಡೆಸುವುದು; ಆದರೆ ಹೋರಾಟದಲ್ಲಿ ಭಾಗಿಯಾಗುವುದು ಆ ವರ್ಗವೊಂದೇ ಅಲ್ಲ. ಉದಾಹರಣೆಗಾಗಿ ೧೭೮೯ರ ಮಹಾ ಫ್ರೆಂಚ್ ಕ್ರಾಂತಿಯನ್ನು ಮುಖ್ಯವಾಗಿ ನಡೆಸಿದ್ದು ಆಗ ತಾನೇ ಉದಯವಾಗಿದ್ದ ಭಂಡವಳವರ್ಗ. ಆದರೆ, ಪಾಳೆಯಗಾರ ಪದ್ಧತಿಯಲ್ಲಿ ದುಡಿಯುವವರ್ಗವಾಗಿದ್ದ ಕೃಷಿಕರು, ಚಿಕ್ಕ ಪುಟ್ಟ ವ್ಯಾಪಾರಿಗಳು, ಸ್ವತಂತ್ರ ಶಿಲ್ಪಿಗಳು, ಮುಂದಿನ ಕೂಲಿಗಾರ ವರ್ಗದ ಮೊಳಕೆಗಳು—ಇವರೆಲ್ಲ ಹಳೆಯ ಪದ್ಧತಿಯ ಆಳುವವರ್ಗಕ್ಕಿದಿರಾಗಿ ಕ್ರಾಂತಿಯಲ್ಲಿ ಭಾಗವಹಿಸಿದರು. ಅವರವರ ಉದ್ದೇಶಗಳು ಬೇರೆ ಬೇರೆಯಾಗಿದ್ದರೂ, ಹಳೆಯ ಪದ್ಧತಿಯೇ ಉಳಿದರೆ ಸದಾ ಕಾಲ ಮರ್ದನವಿರುವುದು—ಸಂಕಷ್ಟಗಳು ಹೆಚ್ಚುತ್ತಲೇ ಹೋಗುವುವು—ಎಂಬುದನ್ನು ಅವರೆಲ್ಲ ತಿಳಿದಿದ್ದರು.

ಪಾಳೆಯಗಾರ ಭೂಪತಿಗಳ ನಿರಂಕುಶ ಪ್ರಭುತ್ವವನ್ನು ಕಿತ್ತೊಗೆದು ಭಂಡವಳಶಾಹಿಯ ಬೆಳವಣಿಗೆಗೆ ಹಾದಿ ಮಾಡಿಕೊಟ್ಟ ಕ್ರಾಂತಿಗಳು ಅನಂತರ ಯೂರೋಪಿನಲ್ಲಿ ಹಲವು ನಡೆದುವು. ಎಲ್ಲದರಲ್ಲೂ ಫ್ರೆಂಚ್ ಕ್ರಾಂತಿಯ ಸ್ಥಿತಿಯನ್ನೇ ಕಾಣಬಹುದು. ಹಳೆಯ ಆಳುವವರ್ಗಕ್ಕಿದಿರಾಗಿ ಹೆಚ್ಚು ಕಡಿಮೆ ಉಳಿದ ಜನ ವಿಭಾಗಗಳೆಲ್ಲ ಸಂಘಟಿತವಾಗಿದ್ದುವು. ಮೊದಲ ಘಟ್ಟಗಳಲ್ಲಿ ಯಾವಾಗಲೂ ಹೊಸ ಆಳುವವರ್ಗ—ಉದಯೋನ್ಮುಖವಾಗಿದ್ದ ಭಂಡವಳವರ್ಗ—ಕ್ರಾಂತಿಯನ್ನು ನಡೆಸಿತು. ಹೋರಾಟವಾಗುತ್ತಿದ್ದಾಗಲೆ, ಕೂಲಿಕಾರವರ್ಗ ತನ್ನ ಬೆಳವಣಿಗೆಯಲ್ಲಿ ಒಂದು ಮಟ್ಟಕ್ಕೆ ಬಂದಿದ್ದಾಗಲೆಲ್ಲ, ಹೊಸ ಸಂಧಿ-ಒಪ್ಪಂದಗಳಾದುವು. ಜನರಲ್ಲಿನ ದುಡಿಯುವ ಜನ ವಿಭಾಗ, ತನ್ನ ಉದ್ದೇಶ ಸಾಧನೆಗಾಗಿ ಹೋರಾಟವನ್ನು ಸೇರಿದ್ದು, ತನ್ನ ಕೇಳಿಕೆಯನ್ನು ಹೊಸ ಭಂಡವಳ ಆಳುವವರ್ಗದ ಎದುರು ಇಟ್ಟಿತು. ಅದನ್ನು ಮನ್ನಿಸಲು ಆ ವರ್ಗ ಸಿದ್ಧವಿರಲಿಲ್ಲ. ಅಂಥ ಸಂದರ್ಭಗಳಲ್ಲಿ ಕೂಲಿಕಾರವರ್ಗ ತನ್ನ ಕೇಳಿಕೆಯನ್ನು ಮನ್ನಿಸಿಯೇ ತೀರಬೇಕೆಂದು ಒತ್ತಾಯಿಸಿತು; ಆಗ ಭಂಡವಳಗಾರರು ಇನ್ನಷ್ಟು ಪ್ರತಿಗಾಮಿಗಳಾಗಿರುವ ವಿಭಾಗಗಳ ಕಡೆಗೆ ಮುಖ ತಿರುಗಿಸಿ ಕೂಲಿಕಾರರಿಗಿದಿರಾಗಿ ಅವರ ಸಹಾಯ ಪಡೆಯುವರು. ಕ್ರಾಮ್‌ವೆಲ್‌ನ ಕಾಲದಲ್ಲಿ ಹೆಚ್ಚು ಕಡಿಮೆ ಇಂಥದೇ

ಪರಿಸ್ಥಿತಿ ಒದಗಿತು. ಫ್ರಾನ್ಸಿನಲ್ಲಂತೂ ೧೮೪೮ ರ ವರೆಗೆ ಹೀಗೆಯೇ ಆಗುತ್ತಲಿತ್ತು.

೧೮೪೮ ಫೆಬ್ರವರಿಯಲ್ಲಿ ಪ್ಯಾರಿಸಿನ ಕೂಲಿಕಾರರು ತಾವು ಹೊಸದಾಗಿ ಸಂಪಾದಿಸಿದ್ದ ಹಕ್ಕುಗಳನ್ನು ರಕ್ಷಿಸಲು ನೋಡಿದರು; ಆದರೆ ಫೆಬ್ರವರಿಯ ಕ್ರಾಂತಿಯಲ್ಲಿ ಅಧಿಕಾರಕ್ಕೆ ಬಂದಿದ್ದ ಹೊಸ ಬಂಡವಾಳ ಸರಕಾರ ಅವರ ಯತ್ನವನ್ನು ಮುರಿಯಿತು. ಆದರೆ ಪ್ಯಾರಿಸಿನ ಕಾರ್ಮಿಕವರ್ಗ ಬೆಳೆದಿದ್ದು ದನ್ನು ಮಾರ್ಕ್ಸ್ ನೋಡಿದ; ಮುಂದಿನ ಕ್ರಾಂತಿಯಲ್ಲಿ ಕೂಲಿಕಾರರು ಭಂಡ ವಳವರ್ಗವನ್ನು ಹಿಂಬಾಲಿಸುವುದರ ಬದಲು ಕ್ರಾಂತಿಯ ನಾಯಕತ್ವ ವಹಿಸುವರೆಂದು ಅವನು ಹೇಳಿದ. ೧೮೭೧ರಲ್ಲಿ ಈ ಮಾತು ನಿಜವಾ ಯಿತು; ಹತ್ತು ವಾರಗಳ ತನಕ ಪ್ಯಾರಿಸ್ಸನ್ನು ಸ್ವಾಧೀನಪಡಿಸಿಕೊಂಡ ಸಂಘವನ್ನು [ಕಮ್ಯೂನ್] ಸ್ಥಾಪಿಸುವುದರಲ್ಲಿ ಪ್ಯಾರಿಸಿನ ಕೂಲಿಕಾರರೇ ಪ್ರಧಾನ ಪಾತ್ರವಹಿಸಿದರು. ಕ್ರಾಂತಿಕಾರಕ ಚಟುವಟಿಕೆಯ ನಾಯಕತ್ವ ವನ್ನು ಕಾರ್ಮಿಕವರ್ಗ ವಹಿಸಿತು ನಿಜ. ಆದರೆ ಕ್ರಾಂತಿಯಲ್ಲಿ ಹೋರಾ ಡಿದ್ದು ಅವರು ಮಾತ್ರವಲ್ಲ. ಹಿರಿಯ ಜಮೀನುದಾರರ ಮತ್ತು ಭಂಡ ವಳಗಾರರ ಸರಕಾರ ಫ್ರಾನ್ಸನ್ನು ಯುದ್ಧದಲ್ಲಿ ಮುಳುಗಿಸಿತ್ತು. ಪ್ಯಾರಿಸಿನ ಜನತೆಯ ಸೋಲು-ಸಂಕಟಗಳಿಂದ ಲಾಭಗಳಿಸಿ ಶ್ರೀಮಂತರಾಗಲು ಸರ ಕಾರವನ್ನು ನಡೆಸುತ್ತಿದ್ದವರು ಯತ್ನಿಸುತ್ತಿದ್ದರು. ಅವರಿಗಿದಿರಾಗಿ ಕೂಲಿ ಕಾರರು ದಂಗೆಯೆದ್ದರು. ಆದರೆ ಹಿರಿಯ ಜಮೀನುದಾರರ ಹಾಗೂ ಭಂಡವಳಗಾರರ ವಿರುದ್ಧವಾದ ಈ ಯುದ್ಧದಲ್ಲಿ, ಚಿಕ್ಕಪುಟ್ಟ ವ್ಯಾಪಾರಿ ಗಳೂ ಎಲ್ಲಾ ವರ್ಗಗಳ ದೇಶಭಕ್ತರೂ—ಅರಸೊತ್ತಿಗೆ ಮತ್ತೆ ಅಧಿಕಾರಕ್ಕೆ ಬಂದೀತೆಂದು ಹೆದರಿದ ಪ್ರಜಾಪ್ರಭುತ್ವವಾದಿ ಭಂಡವಳಗಾರರೂ ಕೂಡಾ —ಕಾರ್ಮಿಕವರ್ಗದೊಡನೆ ಸಹಕರಿಸಿದರು. ಕೃಷಿಕರನ್ನು ತಮ್ಮೊಡನೆ ಎಳೆಯದಿದ್ದುದೇ ಪ್ಯಾರಿಸಿನ ಕೂಲಿಕಾರರು ಮಾಡಿದ ಒಂದು ತಪ್ಪು.

ಆದರೆ ಈ ಮುಖ್ಯ ವಿಷಯ ಇದ್ದೇ ಇದೆ. ಕ್ರಾಂತಿಯನ್ನು ಯಾವಾ ಗಲೂ ಮುಂದೆ ಅಧಿಕಾರಕ್ಕೆ ಬರಲಿರುವ ವರ್ಗ ಮಾತ್ರ ನಡೆಸುವುದಿಲ್ಲ. ಆಗಿನ ಆಳುವವರ್ಗದಿಂದ ತುಳಿದು ಮರ್ದಿಸಲ್ಪಡುತ್ತಿರುವ ಎಲ್ಲರೂ ಆ ಕ್ರಾಂತಿಯಲ್ಲಿ ಭಾಗವಹಿಸುವರು. ಬೆಳವಣಿಗೆಯ ಒಂದು ಘಟ್ಟದಲ್ಲಿ

ಪಾಳೆಯಗಾರ ಅರಸೊತ್ತಿಗೆಯ ಹಾಗೂ ಜಮಿಾನುದಾರರ ವಿರುದ್ಧವಾಗಿ ಭಂಡವಳಗಾರರು ಕ್ರಾಂತಿಯನ್ನು ನಡೆಸುವರು; ಆದರೆ ಕೂಲಿಕಾರ ವರ್ಗ ತಾನು ಬೆಳೆದಾಗ ಎಲ್ಲಾ ಜನ ವಿಭಾಗಗಳ ನಾಯಕತ್ವವನ್ನೂ ವಹಿಸುವುದು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಪ್ರತಿಯೊಂದು ಕ್ರಾಂತಿಯಲ್ಲೂ ಪ್ರಧಾನ ವೈರಿಗಿದಿರಾಗಿ ಬೇರೆ ಬೇರೆ ಜನ ವಿಭಾಗಗಳು ಒಂದುಗೂಡುವುವು. ಇತಿಹಾಸ ಹಾಗೆ ಹೇಳುತ್ತದೆ. ಹೊಸ ವಿಚಾರವೆಂದರೆ ಹಿರಿಯ ಜಮಿಾನುದಾರರ ಹಾಗೂ ಭಂಡವಳಗಾರರ ವಿರುದ್ಧವಾದ ಯುದ್ಧದಲ್ಲಿ. ಅಂಥ ವಿವಿಧ ವಿಭಾಗಗಳ ಸಂಘಟನೆಯ ನಾಯಕತ್ವವನ್ನು ಕೂಲಿಕಾರವರ್ಗ ವಹಿಸುವುದು.

ಉತ್ಪಾದನದ ಬಗ್ಗೆ ಒಂದು ವರ್ಗದ ಆಸೆ ಬೇರೆ. ಇನ್ನೊಂದರದು ಬೇರೆ. ಹಾಗಾಗಿ ವರ್ಗಗಳೊಳಗೆ ನಿರಂತರ ಸಮರ ಸಾಗಿಯೇ ಇರುತ್ತದೆ. ಹೊಸ ಉತ್ಪಾದನ ಪದ್ಧತಿಯನ್ನು ಸಾಧ್ಯಗೊಳಿಸುವುದಕ್ಕಾಗಿ ಒಂದು ಹೊಸ ವರ್ಗವನ್ನು ಅಧಿಕಾರಕ್ಕೇರಿಸುವ ಕ್ರಾಂತಿಯು ಅಂಥ ನಿರಂತರ ಸಮರದಲ್ಲಿ ಒಂದು ಮೈಲುಗಲ್ಲು, ಅಷ್ಟೆ. ಔದ್ಯೋಗಿಕ ಭಂಡವಳದ ಮೊದಲ ಘಟ್ಟಗಳಲ್ಲಿ ಎಲ್ಲೋ ಅಲ್ಲೊಂದು ಇಲ್ಲೊಂದು ಸಣ್ಣ ಹೋರಾಟಗಳಾಗುತ್ತವೆ. ಕೂಲಿಯ ಪ್ರಶ್ನೆ ಇಲ್ಲವೆ, ಆಯಾ ಕಾರ್ಖಾನೆಯಲ್ಲಿನ ಅಸೌಕರ್ಯಗಳು—ಈ ವಿಚಾರವಾಗಿಯೇ ಅಂಥ ಹೋರಾಟಗಳಾಗುತ್ತವೆ. "ಆದರೆ ಕೈಗಾರಿಕೋದ್ಯಮ ಬೆಳೆದಂತೆ ಕಾರ್ಮಿಕ ಸಂಖ್ಯೆ ಹೆಚ್ಚುವುದಷ್ಟೇ ಅಲ್ಲ. ದೊಡ್ಡ ಸಮೂಹವಾಗಿ ಅದು ಶೇಖರವಾಗುತ್ತದೆ; ತನ ಶಕ್ತಿ ಬೆಳೆಯುತ್ತಿರುವುದನ್ನು ಅದು ಮನಗಾಣುತ್ತದೆ." ['ಕಮ್ಯೂನಿಸ್ಟ್ ಘೋಷಣೆ'ಯಲ್ಲಿ ಮಾರ್ಕ್ಸ್—೧೮೪೮]. ಕೂಲಿಕಾರರು ತಮ್ಮ ಸಂಘಗಳನ್ನು ರಚಿಸಿಕೊಳ್ಳುವರು. ಹೋರಾಟವನ್ನು ರಾಷ್ಟ್ರದಾದ್ಯಂತ ನಡೆಸಬಲ್ಲ ಹಿರಿಯ ಸಂಘಟನೆಗಳಾಗಿ ಅವು ಬೆಳೆಯುವುವು. ಕೊಂಡುಕೊಳ್ಳುವಾಗ ತಮ್ಮ ರಕ್ಷಣೆ ಸಿಗುವಂತೆ ಮಾಡಲು ಸಹಕಾರಿ ಸಂಘಗಳನ್ನು [ಕೋ-ಆಪರೇಟಿವ್ ಸೊಸೈಟಿಗಳು] ಕೂಲಿಕಾರರು ರಚಿಸುವರು. ಮೇಲಿನ ಬೆಳವಣಿಗೆಯ ಮಟ್ಟದಲ್ಲಿ, ತನ್ನ ವರ್ಗದ ಪ್ರತಿನಿಧಿಯಾಗಿ ಹಿತ ರಕ್ಷಣೆಮಾಡಿ ಹೋರಾಟವನ್ನು ನಡೆಸಬಲ್ಲ ರಾಜಕೀಯ ಪಕ್ಷವನ್ನು ರಚಿಸಿಕೊಳ್ಳುವರು.

ಈ ಹೋರಾಟ ಹೇಗೆ ನಡೆಸಲ್ಪಡುತ್ತದೆ?

ಕ್ರಾಂತಿಗಾಗಿ ಸಿದ್ಧತೆ ಮಾಡುವುದು ಮತ್ತು ನಡೆಸುವುದು—ಭಂಡವಳಗಾರರ ಆಳುವವರ್ಗವನ್ನು ಉರುಳಿಸುವುದು—ಉತ್ಪಾದನದ ಹೊಸ ಪದ್ಧತಿಯನ್ನು, ಸಮತಾವಾದವನ್ನು, ಏರ್ಪಡಿಸುವುದು ಕಾರ್ಮಿಕವರ್ಗದ ಪಾರ್ಟಿಯ ಧ್ಯೇಯವೆಂದು ಮಾರ್ಕ್ಸ್ ಕಂಡುಕೊಂಡ.

ಈ ಸಿದ್ಧತೆಯ ಕಾರ್ಯವಿಧಾನ ಬಲು ದೊಡ್ಡದು. ಚಿಕ್ಕ ಪುಟ್ಟ ಹೋರಾಟಗಳ ಕೊನೆಯಲ್ಲಿ ಉತ್ತಮ ಸೌಕರ್ಯಗಳು ಕೂಲಿಕಾರರಿಗೆ ಲಭಿಸಬಹುದು. ಆದರೆ ಆ ಸೌಕರ್ಯಗಳೆಲ್ಲ ಸುರಕ್ಷಿತವಲ್ಲ ಎಂಬ ಭಾವನೆ ಇದ್ದೇ ಇದೆ. ಈ ಹೋರಾಟಗಳ ಕಾಲದಲ್ಲಿ ಕೂಲಿಗಾರರಲ್ಲಿ ವರ್ಗಜಾಗೃತಿಯುಂಟಾಗುತ್ತದೆ. ಭಂಡವಳಶಾಹಿ ಉತ್ಪಾದನವಿರುವವರೆಗೆ ವರ್ಗಗಳೊಳಗಿನ ಸಮರ ಇದ್ದೇ ಇರುವುದು; ಆರ್ಥಿಕ ದುರಂತಗಳೂ ಯುದ್ಧಗಳೂ ಒದಗಿ ಕಾರ್ಮಿಕರು ನರಳಲೇಬೇಕಾಗುವುದು; ಉತ್ಪಾದನದ ಪದ್ಧತಿಯನ್ನು ಬದಲಾಯಿಸುವುದರಿಂದ ಮಾತ್ರ ಈ ಸಂಕಷ್ಟಗಳನ್ನು ನಿವಾರಿಸುವುದು ಸಾಧ್ಯ, ಅಂದರೆ ಭಂಡವಳವರ್ಗವನ್ನು ಒತ್ತಾಯಪೂರ್ವಕ ಉರುಳಿಸಬೇಕಾಗುತ್ತದೆ—ಎಂದೆಲ್ಲ ವಿವರಿಸಿ, ಕೂಲಿಕಾರವರ್ಗದ ರಾಜಕೀಯ ಪಕ್ಷವರ್ಗಜಾಗೃತಿಯನ್ನು ಬೆಳೆಸುವುದು.

"ಒತ್ತಾಯ ಪೂರ್ವಕ ಉರುಳಿಸ"ಬೇಕೆಂದು ಮಾರ್ಕ್ಸ್ ಯಾಕೆ ಹೇಳಿದ? ಹೊಸ ವರ್ಗವು ಬಲಾತ್ಕಾರದಿಂದ ಹಳೆಯ ಆಳುವವರ್ಗದಿಂದ ಅಧಿಕಾರವನ್ನು ಕಿತ್ತುಕೊಂಡಾಗ ಮಾತ್ರ ಹೊಸ ಉತ್ಪಾದನ ಪದ್ಧತಿ ಸಾಧ್ಯವಾಗುವುದೆಂದು ಎರಡನೆಯ ಅಧ್ಯಾಯದಲ್ಲಿ ಹೇಳಿದೆ. ಆಳುವವರ್ಗವನ್ನು ಬಲಾತ್ಕಾರದಿಂದ ಉರುಳಿಸದೆ ಉತ್ಪಾದನವನ್ನು ಸಮತಾವಾದಿ ರೂಪಕ್ಕೆ ಕೂಲಿಕಾರವರ್ಗವು ಬದಲಾಯಿಸುವುದು ಸಾಧ್ಯವಿಲ್ಲವೆಂದು ಚರಿತ್ರೆ ಹೇಳುತ್ತದೆ. 'ರಾಜ್ಯ'ದ ಬಗ್ಗೆ ಅಭ್ಯಾಸ ನಡೆಸಿ, ಮಾರ್ಕ್ಸ್, ಈ ಸಾಮಾನ್ಯ ಚಾರಿತ್ರಿಕ ಸಿದ್ಧಾಂತವನ್ನು ಮತ್ತಷ್ಟು ಸ್ಪಷ್ಟಪಡಿಸಿದ.

ರಾಜ್ಯವೆಂದರೆ ಪಾರ್ಲಿಮೆಂಟು—ನ್ಯಾಯವಿಧಾಯಕ ಸಭೆ-ಎಂದು ಭಾವಿಸುವುದಿದೆ. ಆದರೆ ಮಾರ್ಕ್ಸ್, ರಾಜ್ಯದ ಚಾರಿತ್ರಿಕ ಬೆಳವಣಿಗೆಗೂ

ಪ್ರಾತಿನಿಧಿಕ ಸಂಸ್ಥೆಗಳಿಗೂ ಏನೇನೂ ಸಂಬಂಧವಿಲ್ಲವೆಂದು ತೋರಿಸಿ ಕೊಟ್ಟಿ, ಅದಕ್ಕೆ ಬದಲು, ರಾಜ್ಯವೆಂದರೆ ಆಳುವವರ್ಗ ತನ್ನ ಇಚ್ಛೆಯನ್ನು ಉಳಿದ ಜನವಿಭಾಗದ ಮೇಲೆ ಹೊರಿಸಲು ಮಾಡಿದ ಉಪಾಯ. ಪುರಾತನ ಸಮಾಜದಲ್ಲಿ ರಾಜ್ಯವಿರಲಿಲ್ಲ. ಮಾನವ ಸಮಾಜವು ವರ್ಗಗಳಾಗಿ ವಿಂಗಡಿಸಲ್ಪಟ್ಟಾಗ, ವರ್ಗಸಮರಗಳು ಆರಂಭವಾದಾಗ, ರಾಜ್ಯ ಅವಶ್ಯವಾಯಿತು. ಪರಿಸ್ಥಿತಿಯಲ್ಲಿ ಏನೂ ಬದಲಾವಣೆಯಾಗದಂತೆ ನೋಡಿಕೊಳ್ಳುವುದು ಅಂದರೆ ಇರುವ ವರ್ಗ ವಿಭಾಗವನ್ನೂ ವರ್ಗಸ್ವಾರ್ಥವನ್ನೂ ಉಳಿಸಿಕೊಳ್ಳುವುದು ಆ ಗೋಚರ ಶಕ್ತಿಯ ಕೆಲಸ. ಯಾವಾಗಲೂ ಈ ಶಕ್ತಿಯನ್ನು ಸಮಾಜಕ್ಕಿಂತ ಮೇಲ್ಪಟ್ಟುದು ಎಂದು ತೋರಿಸುತ್ತಾರೆ. ಅದು 'ನಿಷ್ಪಕ್ಷಪಾತಿ' ಯಾದುದು; 'ಶಾಂತಿ-ವ್ಯವಸ್ಥೆಯನ್ನು ರಕ್ಷಿಸುವುದೊಂ'ದೇ ಅದರ ಕೆಲಸ. ಆದರೆ ಶಾಂತಿ-ವ್ಯವಸ್ಥೆಯ ಹೆಸರಲ್ಲಿ ಇರುವ ಪದ್ಧತಿಯನ್ನು ಬದಲಾಯಿಸಲು ಯಾವ ಯತ್ನವಾದರೂ ಸರಿ, ಆ ಯತ್ನಕ್ಕೆ ವಿರುದ್ಧವಾಗಿ ಆ ಶಕ್ತಿಯ ಉಪಯೋಗವಾಗುವುದು. 'ರಾಜದ್ರೋಹಿ'ಗಳನ್ನು ಬಂಧಿಸುವುದು; 'ರಾಜದ್ರೋಹ'ಕರವಾದ ಸಾಹಿತ್ಯದ ಪ್ರಚಾರವಾಗದಂತೆ ಮಾಡುವುದು—ಇದೆಲ್ಲ ಆ ರಾಜ್ಯಯಂತ್ರ ಅನುದಿನ ಮಾಡುವ ಕೆಲಸ. ಇದೆಲ್ಲ ತೋರಿಕೆಗೆ ಶಾಂತ ರೀತಿಯಲ್ಲೇ ಸಾಗುವುದು. ಆದರೆ ಚಳುವಳಿ ಹಿರಿದಾದಾಗ ಅದಕ್ಕಿದಿರಾಗಿ ಪೋಲೀಸರ ಶಕ್ತಿಯು, ಬೇಕಿದ್ದರೆ ಸಶಸ್ತ್ರಪಡೆಗಳ ಶಕ್ತಿಯು, ಉಪಯೋಗವಾಗುವುದು. ಆಳುವವರ್ಗದ ಒಳ್ಳಿತಿಗಾಗಿ ದುಡಿಯುವ ಈ ಶಕ್ತಿಯ ಯಂತ್ರವೇ ರಾಜ್ಯ.

ಪಾರ್ಲಿಮೆಂಟಾಗಲೀ ದೇಶದ ಪ್ರಾತಿನಿಧಿಕ ಸಂಸ್ಥೆಯಾಗಲೀ ಈ ರಾಜ್ಯಯಂತ್ರವನ್ನು ನಿಯಂತ್ರಿಸುತ್ತದೆಯೆ? ದೇಶದ ಈ ಪ್ರಾತಿನಿಧಿಕ ಸಂಸ್ಥೆ ಆಳುವವರ್ಗವನ್ನು ಪ್ರತಿನಿಧೀಕರಿಸುವಷ್ಟು ಕಾಲ ರಾಜ್ಯಯಂತ್ರವನ್ನು ನಿಯಂತ್ರಿಸಬಹುದು. ಅದರ ಬದಲು ಆಳುವವರ್ಗಕ್ಕೆ ಧಕ್ಕೆ ತಗಲುವಂಥ ಯಾವ ಕಾರ್ಯವನ್ನಾದರೂ ಪಾರ್ಲಿಮೆಂಟು ಮಾಡಲು ಯತ್ನಿಸಿದರೆ ರಾಜ್ಯಯಂತ್ರದ ಮೇಲೆ ಅದಕ್ಕೆ ನಿಯಂತ್ರಣವಿಲ್ಲವೆಂಬುದು ಸ್ಪಷ್ಟವಾಗುವುದು. ಆಳುವವರ್ಗದ್ದಷ್ಟೇ ಅಲ್ಲದೆ ಬೇರೆ ವರ್ಗದ ಹಿತವನ್ನೂ ಸಾಧಿಸಲು ಹೊರಟ ಪ್ರಾತಿನಿಧಿಕ ಸಂಸ್ಥೆಗಳನ್ನು ಚರಿತ್ರೆಯಲ್ಲಿ ಕಾಣ

ಬಹುದು. ಒಂದೋ ಅವು ಮುಚ್ಚಲ್ಪಟ್ಟುವು ; ಅವಶ್ಯಬಿದ್ದಾಗ ಸಶಸ್ತ್ರ ಸೇನೆಗಳಿಂದ ಚೆದರಿಸಲ್ಪಟ್ಟುವು. ಕ್ರಾಮ್‌ವೆಲ್‌ನ ಕಾಲದಲ್ಲಿ ಬ್ರಿಟನ್ನಿನ ಲ್ಲಾದಂತೆ, ಏಳುತ್ತಿದ್ದ ವರ್ಗ ಹಳೆಯ ಪದ್ಧತಿಯನ್ನು ಮುರಿದುಹಾಕಿದ್ದು ಬರೇ ಓಟುಗಳ ಮೂಲಕವಲ್ಲ. 'ರಾಜ್ಯ'ಕ್ಕೆದಿರಾಗಿ, ಹಳೆಯ ಆಳುವ ವರ್ಗದ ಸೇನೆ–ಸರಂಜಾಮುಗಳಿಗಿದಿರಾಗಿ ಹೊಸ ಸೇನೆಯನ್ನು ಸಂಘಟಿಸಿದ್ದ ರಿಂದ ಆ ವಿಜಯ ಸಾಧ್ಯವಾಯಿತು.

ಮತದಾನದ ಹಕ್ಕನ್ನು ಕೊಟ್ಟಮಾತ್ರದಿಂದ ಪರಿಸ್ಥಿತಿಯಲ್ಲಿ ಬದಲಾ ವಣೆಯಾಗಲಿಲ್ಲವೆಂದು ಮಾರ್ಕ್ಸ್‌ಗೆ ಸ್ಪಷ್ಟವಾಗಿತ್ತು. ಉತ್ಪಾದನ ಪದ್ಧತಿ ಯಾರ ಕೈಲಿದೆಯೋ ಅವರಲ್ಲೇ ನಿಜವಾದ ಅಧಿಕಾರವಿರುವುದು. ಪ್ರಾತಿ ನಿಧಿಕ ಸಂಸ್ಥೆ ಏನೇ ಹೇಳಲಿ, ಏನೇ ಮಾಡಲಿ, ರಾಜ್ಯಯಂತ್ರದ ಮೇಲಿನ ಹಿಡಿತವನ್ನು ಆ ವರ್ಗ ಬಿಟ್ಟುಕೊಡುವುದಿಲ್ಲ. ಅಧಿಕಾರದಲ್ಲಿ ಬದಲಾವಣೆ ಯಾಗಬೇಕಾದರೆ ಹಳೆಯ ರಾಜ್ಯಯಂತ್ರಕ್ಕೆದಿರಾಗಿ ಶಕ್ತಿಯನ್ನು ಉಪ ಯೋಗಿಸಬೇಕಾಗುತ್ತದೆ.

ಮಾರ್ಕ್ಸ್ ಕಂಡುಹಿಡಿದ ಈ ಸಿದ್ಧಾಂತವು ಸರಿಯೆಂದು ಇತ್ತೀಚಿಗಿನ ಚಾರಿತ್ರಿಕ ಘಟನೆಗಳು ತೋರಿಸಿಕೊಟ್ಟವೆ. ಶಕ್ತಿಯನ್ನುಪಯೋಗಿಸಿ ಎಲ್ಲಾ ತರದ ಪ್ರಾತಿನಿಧಿಕ ಸಂಸ್ಥೆಗಳನ್ನು ಪುಡಿಮಾಡಿ ಫಾಸಿಸಂ ಬೆಳೆಯಿತು. ಜನಪ್ರತಿನಿಧಿಸಭೆಗಿದಿರಾಗಿ ಫ್ರಾಂಕೋ ಹೂಡಿದ ಬಂಡಾಯವಂತೂ ರಾಜ್ಯಯಂತ್ರದ ಮೇಲೆ ಪ್ರಾತಿನಿಧಿಕ ಸಂಸ್ಥೆಗೆ ಒಂದಿಷ್ಟೂ ನಿಯಂತ್ರಣ ವಿಲ್ಲವೆಂಬುದನ್ನು ತೋರಿಸಿಕೊಟ್ಟದೆ.

ಪರಿಸ್ಥಿತಿಯಲ್ಲಿ ಒಂದಿಷ್ಟೂ ಬದಲಾವಣೆಯಾಗದಂತೆ ನೋಡುವುದೇ ರಾಜ್ಯಯಂತ್ರದ ಕೆಲಸವೆಂದಾದರೆ, ಎಂಥ ಪ್ರಾತಿನಿಧಿಕ ಸಂಸ್ಥೆಯಿದ್ದರೂ ಕೂಡಾ, ರಾಜ್ಯಯಂತ್ರವನ್ನು ಮೂಲೆಗೆ ತಳ್ಳದ ವಿನಾ ಉತ್ಪಾದನೆಯ ರೂಪವನ್ನು ಮೇಲ್ಮಟ್ಟಕ್ಕೊಯ್ಯುವುದು ಸಾಧ್ಯವಿಲ್ಲ. ಹೀಗಿದ್ದರೂ ಪ್ರಜಾ ಸತ್ತಾತ್ಮಕ ಸಂಸ್ಥೆಗಳು ಅವಶ್ಯವೆಂದು ಮಾರ್ಕ್ಸ್ ಹೇಳಿದ. ವರ್ಗಸಮರದ ಕ್ಷೇತ್ರಗಳಲ್ಲಿ ಅದೂ ಒಂದೆಂದು ಮಾರ್ಕ್ಸ್ ಚಾರಿತ್ರಿಕವಾಗಿ ನೋಡಿದ. ಮೊದಲನೆಯ ಚಾರ್ಲ್ಸ್‌ನ ಕಾಲದಲ್ಲಿ ಪಾರ್ಲಿಮೆಂಟು ಉದಯವಾಗು ತ್ತಿದ್ದ ಭಂಡವಳವರ್ಗಕ್ಕೊಂದು ಕೂಗೆಬ್ಬಿಸುವ ಸ್ಥಳವಾಯಿತು. ರಿಯಾ

ಯಿತಿಗಳನ್ನು ಪಡೆಯುವುದಕ್ಕಷ್ಟೇ ಅಲ್ಲದೆ, ಪಾಳೆಯಗಾರ ಅರಸೊತ್ತಿಗೆಗೆ ವಿರುದ್ಧ ಅದು ಬೆಂಬಲ ಗಳಿಸಿತು. ಹಾಗೆಯೇ ಈಗಲೂ ಪಾರ್ಲಿಮೆಂಟರಿ ರಿಯಾಯಿತಿಗಳನ್ನು ಪಡೆಯುವ ಸಾಧನವಾಗಬಹುದು; ಜತೆಯಲ್ಲಿ ನಿರ್ಣಾಯಕ ಹೋರಾಟಕ್ಕಾಗಿ ಕೂಲಿಕಾರರನ್ನು ಎಚ್ಚರಿಸಿ ಸಂಘಟಿಸುವ ಕೆಲಸ ಸಾಗುವುದು. ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಈ ಹೋರಾಟ ಪೂರ್ಣ ಸಮರದ ಒಂದಂಶ ಮಾತ್ರ. ಅದರಿಂದಲಷ್ಟೇ ಹೊಸ ಸಮಾಜದ ಸೃಷ್ಟಿಯಾಗಲಾರದು. ಅದರೂ ಪಾರ್ಲಿಮೆಂಟರಿ ಯತ್ನಗಳಿಂದ ಪ್ರಯೋಜನವಿದ್ದೇ ಇದೆ. [ಜನರ ವಿರೋಧಕ್ಕೆ ಪಾರ್ಲಿಮೆಂಟರಿ ಸಂಸ್ಥೆಗಳು ಆಸ್ಪದ ಕೊಡುವುದರಿಂದಲೇ ಫಾಸಿಸ್ಟರು ಅಂಥ ಸಂಸ್ಥೆಗಳನ್ನೇ ನಾಶಮಾಡುತ್ತಾರೆ.]

ಆದುದರಿಂದಲೇ, ಕಳೆದ ಶತಮಾನದಲ್ಲಿ ಯುರೋಪಿನಲ್ಲಿದ್ದ ನಿರಂಕುಶ ಪ್ರಭುತ್ವಗಳಿಗಿದಿರಾಗಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಸಮರ ನಡೆಯಬೇಕೆಂದೂ ನಿರಂಕುಶ ಪ್ರಭುತ್ವಗಳು ತೊಲಗಿಹೋಗಿದ್ದ ಕಡೆ ಪ್ರಜಾಪ್ರಭುತ್ವ ಹಕ್ಕುಗಳ ವಿಸ್ತರಣವಾಗಬೇಕೆಂದೂ ಮಾರ್ಕ್ಸ್ ಒತ್ತಿ ಒತ್ತಿ ಹೇಳಿದ. ನಿರಂಕುಶ ಅರಸೊತ್ತಿಗೆಯಾಗಲೀ ಭಂಡವಳವರ್ಗವಾಗಲೀ ರಾಜ್ಯಯಂತ್ರವನ್ನು ನಿಯಂತ್ರಿಸುತ್ತಿದ್ದಷ್ಟು ಕಾಲ ಪ್ರಜಾಪ್ರಭುತ್ವವು ಸುರಕ್ಷಿತವಾಗಲಾರದು—ಎಂದು ಮಾರ್ಕ್ಸ್ ಸ್ಪಷ್ಟಪಡಿಸಿದ. ಭಂಡವಳಶಾಹಿ ರಾಜ್ಯಯಂತ್ರವನ್ನು ಕಾರ್ಮಿಕವರ್ಗವು ಮುರಿಯಲು ಶಕ್ತವಾದಾಗ ಮಾತ್ರ ಅದು ಆಳುವವರ್ಗವಾಗುವುದು; ಹೀಗೆ ‘ಪ್ರಜಾಪ್ರಭುತ್ವದ ಸಮರ ಗೆಲ್ಲುವುದು’. ಬೇರೆ ಮಾತುಗಳಲ್ಲಿ ಹೇಳುವುದಾದರೆ, ತನ್ನ ಎದುರು ಇರುವ ಸಶಸ್ತ್ರ ಪಡೆಗಳ ತಡೆ–ಭಂಡವಳಶಾಹಿ ರಾಜ್ಯಯಂತ್ರ—ನಿರ್ನಾಮವಾದಾಗ ಮಾತ್ರ, ಜನತೆಯ ಅಧಿಕಾರಯುಕ್ತ ವಾಣಿ ಕೇಳಿಸುವುದು.

ಹಿಂದಿನ ಆಳುವವರ್ಗದ ರಾಜ್ಯಯಂತ್ರವನ್ನು ಸೋಲಿಸಿ ಮುರಿದಷ್ಟೇ ಸಾಲದು. ಕಾರ್ಮಿಕವರ್ಗ, ತನ್ನದೇ ಆದ ರಾಜ್ಯಯಂತ್ರವನ್ನು—ಕೇಂದ್ರೀಕೃತ ಶಕ್ತಿಯ ಯಂತ್ರವನ್ನು—ಸಿದ್ಧಗೊಳಿಸಬೇಕು. ಭಂಡವಳಶಕ್ತಿಯ ಸೋಲನ್ನು ಪೂರ್ಣಗೊಳಿಸುವುದಕ್ಕೂ ಹೊಸ ಪದ್ಧತಿಗಿದಿರಾಗಿ ಒಳಗಿನಿಂದಲೂ ಹೊರಗಿನಿಂದಲೂ ಬರಬಹುದಾದ ಧಾಳಿಗಳನ್ನು ಇದಿರಿಸುವುದಕ್ಕೂ ಇದು ಅಗತ್ಯ.

ಕೂಲಿಕಾರವರ್ಗ ತನ್ನದೇ ಆದ ಸರಕಾರವನ್ನೂ ಸ್ಥಾಪಿಸಬೇಕಾಗುತ್ತದೆ. ಉದ್ದೇಶಗಳು ಬೇರೆಯಾಗಿರುವುದರಿಂದ ಭಂಡವಳಶಾಹಿ ಸಮಾಜದಲ್ಲಿದ್ದ ಸರಕಾರಕ್ಕೂ ಇದಕ್ಕೂ ಬಹಳ ವ್ಯತ್ಯಾಸವಿರುವುದು. ೧೮೭೧ರ 'ಪ್ಯಾರಿಸ್ ಕಮ್ಯೂನ್'ದ ಅನುಭವದ ಅನಂತರ ಮಾರ್ಕ್ಸ್‌ಗೆ ಇದು ಸ್ಪಷ್ಟವಾಯಿತು. ಅದು ಬರೇ ನ್ಯಾಯವಿಧಾಯಕ ಸಭೆ ಮಾತ್ರವಾಗಿರಲಿಲ್ಲ. ಕಾರ್ಯಾಚರಣೆಯನ್ನೂ ಅದೇ ಮಾಡುತ್ತಿತ್ತು. ಚುನಾಯಿಸಿದವರು ಬೇಕಿದ್ದರೆ ಒಬ್ಬ ಸದಸ್ಯನ ಬದಲು ಇನ್ನೊಬ್ಬನನ್ನು ಆರಿಸಬಹುದಿತ್ತು. "ಕಮ್ಯೂನ್ ಸದಸ್ಯನಿಂದ ಹಿಡಿದು ಕೆಳಗಿನವರೆಗಿನ ಎಲ್ಲರೂ ಕೂಲಿಕಾರರ ವೇತನದ ಮೇಲೆಯೇ ಇರಬೇಕು." ನ್ಯಾಯಾಧೀಶರೂ ಆರಿಸಲ್ಪಟ್ಟವರೇ. ಅವರ ಬದಲು ಬೇರೆಯವರನ್ನು ಆರಿಸುವುದಕ್ಕೂ ಜನರಿಗೆ ಅಧಿಕಾರವಿತ್ತು. ಹಳೆಯ ಸ್ಥಾಯಿ ಸೇನೆಯ ಬದಲು, "ಕೂಲಿಕಾರರೇ ಹೆಚ್ಚು ಸಂಖ್ಯೆಯಲ್ಲಿದ್ದ ರಾಷ್ಟ್ರೀಯದಳ ಬಂತು." ಆಡಳಿತ ಪದ್ಧತಿಯನ್ನೂ ಮರ್ದನ ಮತ್ತು ಶಕ್ತಿಯ ಯಂತ್ರವನ್ನೂ ಕೂಲಿಕಾರವರ್ಗದ ಸಮೀಪಕ್ಕೆ ತಂದು ಆ ವರ್ಗವೇ ಅದನ್ನು ನಿಯಂತ್ರಿಸುವಂತೆ ಮಾಡುವುದು—ಕಮ್ಯೂನಿನ ಮೇಲೆ ನಿರೂಪಿಸಿದ ಮತ್ತಿತರ ಗುಣಗಳ ಸಾರಾಂಶ.

ಆದರೂ ಎಂಗೆಲ್ಸ್, ಪ್ಯಾರಿಸ್ ಕಮ್ಯೂನಿನ ಬಗ್ಗೆ ಬರೆಯುತ್ತಾ, "ಅದು ಕಾರ್ಮಿಕವರ್ಗದ ಸರ್ವಾಧಿಕಾರತ್ವ" ಎಂದು ಹೇಳಿದ. ಈ ಎರಡು ಅಭಿಪ್ರಾಯಗಳಲ್ಲಿ ವ್ಯತ್ಯಾಸವಿದೆಯೆ? ಇಲ್ಲ. ಒಂದೇ ವಿಷಯದ ಎರಡು ಅಂಶಗಳನ್ನು ಅವು ಹೇಳುತ್ತವೆ. ಅತ್ಯಂತ ಬಹುಸಂಖ್ಯಾಕ ಜನರ ಇಚ್ಛೆಯನ್ನು ಸಾಧಿಸುವುದಕ್ಕಾಗಿ "ಹೊಸ, ನಿಜಕ್ಕೂ ಪ್ರಜಾಸತ್ತಾತ್ಮಕವಾದ ರಾಜ್ಯ"ವು ಸ್ಥಾಪಿಸಲ್ಪಟ್ಟಿತು; ಆ ಇಚ್ಛೆಯನ್ನು ಪೂರೈಸುವುದಕ್ಕಾಗಿ, ಅಷ್ಟು ಕಾಲ ಜನರ ಆಶಯಕ್ಕೆ ವಿರುದ್ಧವಾಗಿ ಸರ್ವಾಧಿಕಾರ ನಡೆಸುತ್ತ ಬಂದಿದ್ದ ಅಲ್ಪ ಸಂಖ್ಯಾಕರ ಮೇಲೆ ಬಲಾತ್ಕಾರ ಪ್ರಯೋಗಿಸಬೇಕಾಗುತ್ತದೆ; ಸರ್ವಾಧಿಕಾರವನ್ನು ಸ್ಥಾಪಿಸಬೇಕಾಗುತ್ತದೆ.

ಕಾರ್ಮಿಕವರ್ಗದ ಕ್ರಾಂತಿಯ ಅನಂತರದ ಅನುಭವಗಳು, ೧೮೭೧ರ ಕಮ್ಯೂನಿನ ಅನುಭವದಿಂದ ಮಾರ್ಕ್ಸ್ ಮತ್ತು ಎಂಗೆಲ್ಸ್ ತಯಾರಿಸಿದ್ದ ತೀರ್ಮಾನಗಳು ಸರಿಯೆಂದು ತೋರಿಸಿಕೊಟ್ಟುವು. ರಷ್ಯದಲ್ಲಿ ೧೯೧೭

ಕಲ್ಲಾದ ಕ್ರಾಂತಿಯಲ್ಲಿ, ಕೂಲಿಕಾರವರ್ಗದ ಸಂಘಟನೆಗಳ ಪ್ರತಿನಿಧಿಗಳಿಂದ ಕೂಡಿದ ಸಮಿತಿಗಳು ರಚಿಸಲ್ಪಟ್ಟುವು. ಈ ಸಮಿತಿಗಳು ಜಾರ್ ಅರಸನ ವಿರುದ್ಧ ಯುದ್ಧ ನಡೆಸಿದುವು. ೧೯೧೭ರ ಮಾರ್ಚ್ ಕ್ರಾಂತಿಯಲ್ಲೂ ಕ್ರಾಂತಿಕಾರಿ ಪರಿಸ್ಥಿತಿ ಸಿದ್ಧವಾದೊಡನೆ "ಸೋವಿಯೆಟ್" [ಪ್ರಾತಿನಿಧಿಕ ಸಮಿತಿ] ಗಳು ಸ್ಥಾಪಿಸಲ್ಪಟ್ಟುವು.

ಕಾರ್ಮಿಕವರ್ಗದ ಸರ್ವಾಧಿಕಾರತ್ವದ ನಿಜವಾದ ಪ್ರಜಾಪ್ರಭುತ್ವ ರೂಪವನ್ನು ೧೮೪೮ರ "ಕಮ್ಯೂನಿಸ್ಟ ಘೋಷಣೆ" ಯಲ್ಲಿ ಮಾರ್ಕ್ಸ್ ಹೀಗೆ ವಿವರಿಸಿದ: "ಹಿಂದಿನ ಎಲ್ಲಾ ಚಾರಿತ್ರಿಕ ಆಂದೋಲನಗಳೂ ಅಲ್ಪ ಸಂಖ್ಯಾಕರಿಂದ ಇಲ್ಲವೆ ಅಲ್ಪಸಂಖ್ಯಾಕರ ಹಿತಕ್ಕಾಗಿ ನಡೆಸಲ್ಪಟ್ಟುವು. ಕೂಲಿಕಾರರ ಆಂದೋಲನವು ಅತ್ಯಂತ ಬಹು ಸಂಖ್ಯಾಕರ ಹಿತಕ್ಕಾಗಿ ಇರುವ, ಸ್ವಯಂ ತಿಳಿವಳಿಕೆಯ ಸ್ವತಂತ್ರ ಆಂದೋಲನ."

ಕೂಲಿಕಾರವರ್ಗದ ಕ್ರಾಂತಿ ಯಶಸ್ವಿಯಾದೊಡನೆ ಎಲ್ಲಾ ವರ್ಗ ಸಮರಗಳೂ ಮುಕ್ತಾಯವಾಗಲಿಲ್ಲ—ಎಂಬುದು ಮಾರ್ಕ್ಸ್‌ನ ಅಭಿಪ್ರಾಯವಾಗಿತ್ತೆಂಬುದು ಮೇಲೆ ಹೇಳಿದುದರಿಂದ ವ್ಯಕ್ತವಾಗುತ್ತದೆ. ಆ ಕ್ರಾಂತಿ ಒಂದು ಮುಖ್ಯ ಮೈಲುಗಲ್ಲು. ಕೂಲಿಕಾರವರ್ಗಕ್ಕಿದಿರಾಗಿ ರಾಜ್ಯ ಯಂತ್ರದ ಉಪಯೋಗವಾಗುವುದು ನಿಲ್ಲುತ್ತದೆ. ಅದರ ಬದಲು ಆ ವರ್ಗವೇ ರಾಜ್ಯಯಂತ್ರವನ್ನು ವಶಪಡಿಸಿಕೊಳ್ಳುತ್ತದೆ. ೧೯೧೮ರ ಜನವರಿಯಲ್ಲಿ ಜರಗಿದ 'ಸೋವಿಯೆಟು' ಗಳ ಮಹಾಧಿವೇಶನದಲ್ಲಿ [ಕಾಂಗ್ರೆಸ್ ಆಫ್ ಸೋವಿಯೆಟ್ಸ್] ಲೆನಿನ್ ಒಂದು ಕತೆ ಹೇಳಿದ. ಆತ ರೈಲು ಬಂಡಿಯಲ್ಲಿ ಪ್ರಯಾಣ ಮಾಡುತ್ತಿದ್ದನಂತೆ. ಸಹಪ್ರಯಾಣಿಕರಲ್ಲಿ ಸಂಭಾಷಣೆಯಾಗುತ್ತಿತ್ತು. ಲೆನಿನ್‌ಗೆ ಅದು ಅರ್ಥವಾಗುತ್ತಿರಲಿಲ್ಲ. ಒಬ್ಬ ಲೆನಿನ್‌ನೊಡನೆ ಹೇಳಿದನಂತೆ. "ಕೇಳಿದೆಯಾ ಈ ಮುದುಕಿ ಹೇಳಿದ ಕುತೂಹಲದ ವಿಷಯವನ್ನು? 'ತುಬಾಕಿ [ಕೋವಿ, ಗನ್] ಹಿಡಿದಿರುವ ಮನುಷ್ಯನಿಗೆ ಇನ್ನು ಹೆದರಬೇಕಾದ್ದಿಲ್ಲ. ಒಂದು ದಿನ ನಾನು ಕಾಡಿನಲ್ಲಿ ಸೌದೆ ಕೂಡಿಸುತ್ತಿದ್ದೆ. ತುಬಾಕಿಯ ಮನುಷ್ಯನೊಬ್ಬ ಸಿಕ್ಕಿದ. ನಾನು ಜಮೆ ಮಾಡಿದ್ದ ಕಟ್ಟಿಗೆಯನ್ನು ಕಸಿದುಕೊಳ್ಳುವುದರ ಬದಲು, ಮತ್ತೂ ಸ್ವಲ್ಪ ಕಟ್ಟಿಗೆ ಹೆಚ್ಚು ಸಂಗ್ರಹಿಸಲು ಆತ ನನಗೆ ಸಹಾಯ ಮಾಡಿದ' ಎನ್ನುತ್ತಾಳೆ."

ಕೂಲಿಕಾರರಿಗೆ ಇದಿರಾಗಿ ಶಕ್ತಿಯ ಯಂತ್ರದ ಉಪಯೋಗವಾಗಲಿಲ್ಲ. ಬದಲು ಅದು ಅವರಿಗೆ ನೆರವಾಯಿತು; ಕೂಲಿಕಾರರನ್ನು ಹಿಂದಕ್ಕೆ ಎಳೆಯಲು ಯತ್ನಿಸಿದವರ ವಿರುದ್ಧ ಮಾತ್ರ ಆ ಯಂತ್ರ ಉಪಯೋಗಿಸಲ್ಪಡುವುದು.

ಕಾರ್ಮಿಕವರ್ಗ ಅಧಿಕಾರ ವಹಿಸಿದ ಮೇಲೂ ಅಂಥ ಜನ ಇದ್ದೇ ಇರುತ್ತಾರೆ. ಹಳೆಯ ಆಳುವವರ್ಗ, ವಿದೇಶೀಯ ಆಳುವವರ್ಗಗಳ ಸಹಾಯ ಪಡೆದು ಆದಷ್ಟು ಸೈನ್ಯ ಸಂಗ್ರಹಿಸಿ ಹೊಸ ಕೂಲಿಗಾರರರಾಜ್ಯದ ವಿರುದ್ಧ ಹೋರಾಡುತ್ತಲೇ ಇರುತ್ತದೆ. ೧೮೭೧ರ ಪ್ಯಾರಿಸ್ ಕಮ್ಯೂನ್ ಹೀಗೆ ಸೋಲಿಸಲ್ಪಟ್ಟಿತು. ಸಾವಿರಾರು ಫ್ರೆಂಚ್ ಕೈದಿಗಳನ್ನು ಜರ್ಮನರು ಬಿಡುಗಡೆಮಾಡಿ ಪ್ಯಾರಿಸಿನ ಹೊರಗೆ ವರ್ಸೇಲ್‌ನಲ್ಲಿದ್ದ ಪ್ರತಿಗಾಮಿಗಳಿಗೆ ನೆರವಾಗಲು ಕಳುಹಿಕೊಟ್ಟರು. ಈ ಪ್ರತಿಗಾಮಿ ಸೇನೆ ಪ್ಯಾರಿಸನ್ನು ವಶಪಡಿಸಿಕೊಂಡು, ಕಮ್ಯೂನ್ ನಡೆಸಿದ್ದವರನ್ನೆಲ್ಲ ಕೊಂದು ಕೊಚ್ಚಿ ಹಾಕಿತು. ೧೯೧೮–೧೯೨೦ ಈ ಕಾಲದಲ್ಲಿ ರಷ್ಯದ ಸೋವಿಯೆಟ್ ಸರಕಾರ ಜಾರ್ ಚಕ್ರವರ್ತಿಯ ಬೆಂಬಲಿಗರ ಸೇನೆಗಳನ್ನಷ್ಟೇ ಅಲ್ಲ, ಬ್ರಿಟನ್, ಫ್ರಾನ್ಸ್ ಮತ್ತು ಅಮೆರಿಕದ ಸಂಯುಕ್ತ ರಾಷ್ಟ್ರಗಳಂತಹ ವಿದೇಶೀಯ ಶಕ್ತಿಗಳ ಧಾಳಿಗಳನ್ನೂ ಇದಿರಿಸಬೇಕಾಯಿತು. ಕಾರ್ಮಿಕವರ್ಗ ಅಧಿಕಾರ ವಹಿಸಿಕೊಂಡ ಅನಂತರವೂ ಬಹಳ ಕಾಲ ರಾಜ್ಯಯಂತ್ರವನ್ನು ಇರಿಸಿಕೊಳ್ಳಬೇಕಾಗುತ್ತದೆಂಬ ಮಾರ್ಕ್ಸ್‌ನ ಸಿದ್ಧಾಂತವನ್ನು ಇತಿಹಾಸ ಸಮರ್ಥಿಸುತ್ತದೆ.

ಮಾನವ ಸಮಾಜವು ವರ್ಗಗಳಾಗಿ ವಿಂಗಡಿಸಲ್ಪಟ್ಟುದರಿಂದ, ಅವುಗಳ ಉತ್ಪಾದನದ ಹಿತಗಳು ಪರಸ್ಪರ ವಿರುದ್ಧವಾಗಿರುವುದರಿಂದ, ವರ್ಗ ಸಮರ ಹುಟ್ಟಿತು; ಆಳುವವರ್ಗದ ಹಿತರಕ್ಷಣೆಗೋಸ್ಕರ ರಾಜ್ಯಯಂತ್ರ ಹುಟ್ಟಿತು. ಮಾನವ ಸಮಾಜದಲ್ಲಿ ವರ್ಗಭೇದ ಇರುವವರೆಗೂ ವರ್ಗ ಸಮರವೂ ರಾಜ್ಯವೂ ಇದ್ದೇ ಇರುವುವು. ಆದರೆ ಕೂಲಿಕಾರವರ್ಗ ಅಧಿಕಾರವನ್ನು ವಹಿಸಿಕೊಳ್ಳುವುದು, ವರ್ಗ ವಿಭಾಗಗಳನ್ನು ಅಳಿಸುವುದಕ್ಕಾಗಿ; ಒಂದು ವರ್ಗ ಇನ್ನೊಂದು ವರ್ಗದ ದುಡಿತದ ಮೇಲೆ ಜೀವಿಸುವಂಥ ಪರಿಸ್ಥಿತಿಯೇ ಇಲ್ಲದ ಹೊಸ ರೂಪದ ಉತ್ಪಾದನವನ್ನು ಆರಂಭಿಸುವುದಕ್ಕಾಗಿ; ಅಂದರೆ, ಎಲ್ಲರೂ ಸಾಮೂಹಿಕವಾಗಿ ಸಮಾಜದ ಸೇವೆ ಮಾಡುವಂಥ ವರ್ಗ ರಹಿತ ಸಮಾಜವನ್ನು ರಚಿಸುವುದಕ್ಕಾಗಿ. ಈ

ಕಾರ್ಯವಿಧಾನವು ಜಗತ್ತಿನಲ್ಲೇ ಪೂರ್ಣವಾದಾಗ ಮುಂದೆ ವರ್ಗ ಘರ್ಷಣೆಗಳಿರುವುದಿಲ್ಲ—ಯಾಕೆಂದರೆ ಪ್ರತ್ಯೇಕ ಹಿತದ ವರ್ಗಗಳೇ ಅಲ್ಲಿಲ್ಲ; ಆದುದರಿಂದ ಒಂದರ ಹಿತವನ್ನು ಇನ್ನೊಂದರಿಂದ ರಕ್ಷಿಸುವುದಕ್ಕಾಗಿ ರಾಜ್ಯದ—ಶಕ್ತಿ ಯಂತ್ರದ—ಅವಶ್ಯತೆಯೂ ಇಲ್ಲ. ರಾಜ್ಯ "ಒಣಗಿ ಉದುರಿ ಹೋಗುವುದು"; ಒಂದು ಕ್ಷೇತ್ರದ ಅನಂತರ ಇನ್ನೊಂದು ಕ್ಷೇತ್ರದಲ್ಲಿ ಅದು ಅನವಶ್ಯಕವಾಗುವುದು. ಉತ್ಪಾದನದ ಮತ್ತು ವಿತರಣದ ಸಂಘಟನೆಗಾಗಿ ಮಾತ್ರ ಕೇಂದ್ರ ಯಂತ್ರ ಇರುವುದು. ಎಂಗೆಲ್ಸ್ ಹೇಳಿದಂತೆ: "ಜನಗಳ ಮೇಲಿನ ಸರಕಾರ ಹೋಗಿ, ಅದರ ಬದಲು ವಸ್ತುಗಳ ಆಡಳಿತ ಮತ್ತು ಉತ್ಪಾದನದ ಕಾರ್ಯವಿಧಾನಗಳ ದಿಗ್ದರ್ಶನ ಇವು ಬರುವುವು."

೬

## ಸಾಮ್ಯವಾದಿ ಸಮಾಜ

ಭಂಡವಳ ಪದ್ಧತಿಯ ಅನಂತರ ಬರುವ ಹೊಸ ಸಮಾಜ ಪದ್ಧತಿಯ ವಿಸ್ತೃತ ವಿವರಣೆ ಮಾರ್ಕ್ಸ್‌ನ ಯಾವ ಬರೆಹಗಳಲ್ಲೂ ಇಲ್ಲ. ಮಾರ್ಕ್ಸ್ ಬೇರೆ ಕೆಲವರಂತೆ ಯಾವ "ಕನಸಿನ ರಾಜ್ಯ" ವನ್ನೂ ಚಿತ್ರಿಸಲಿಲ್ಲ. ಆದರೆ ಸಾಮಾಜಿಕ ಬೆಳವಣಿಗೆಯ ಸಾಮಾನ್ಯ-ನಿಯಮಗಳಿಂದ, ಹೊಸ ಸಮಾಜದ ರೂಪರೇಖೆಗಳು ಹೇಗಿರಬಹುದು? ಅದು ಯಾವ ರೀತಿ ಬೆಳೆಯಬಹುದು? ಎಂಬುದನ್ನು ತೋರಿಸಿಕೊಡಲು ಮಾರ್ಕ್ಸ್ ಶಕ್ತನಾದ.

ಹೊಸ ಸಮಾಜದ ಸಂಘಟನೆ ಸ್ವಚ್ಛಕ್ಷೇತ್ರದ ಮೇಲೆ ಆರಂಭವಾಗಲಾರದೆಂದು ಮಾರ್ಕ್ಸ್ ಹೇಳಿದ. "ತನ್ನ ಸ್ವಂತ ತಳಹದಿಯ ಮೇಲೆಯೇ ಬೆಳೆದಿರುವ" ಸಮಾಜದ ಬಗ್ಗೆ ಯೋಚಿಸುವುದರಲ್ಲಿ ಅರ್ಥವಿಲ್ಲ. ಲೋಕದ ಎಲ್ಲಾ ಒಳ್ಳೆಯ ಗುಣಗಳನ್ನೂ ಒಟ್ಟುಗೂಡಿಸಿ, ಇದೀಗ ಸಾಮ್ಯವಾದಿ ಸಮಾಜ ಎಂದು ಹೇಳುವ ಮಾತಲ್ಲ. ಹಾಗೆ ಭಾವಿಸುವುದು ಶಾಸ್ತ್ರೀಯ ರೀತಿಯಲ್ಲ. ಅಂಥ ಕಲ್ಪನೆಯ ಚಿತ್ರ ವಸ್ತು-ಸ್ಥಿತಿಗಿಂತ ತೀರ ವಿರುದ್ಧವಾದೀತು.

ಇದಕ್ಕೆ ವ್ಯತಿರಿಕ್ತವಾಗಿ, ನಿಜವಾದ ಸಾಮ್ಯವಾದಿ ಸಮಾಜ, ಸಮಾಜದ ಹಿಂದಿನ ಎಲ್ಲಾ ರೂಪಗಳಂತೆ, ಹಿಂದೆ ಏನಿತ್ತೋ ಅದರ ತಳಹದಿಯ ಮೇಲೆ ಹುಟ್ಟುವುದು; ಅಂದರೆ ಅದು, "ಭಂಡವಳಶಾಹಿ ಸಮಾಜದ" ಗರ್ಭದಿಂದ ಆಗತಾನೆ ಹುಟ್ಟಿ ಹೊರಬರುತ್ತಿರುವ ಸಮಾಜವಾಗುವುದು. ಆದುದರಿಂದ ಆರ್ಥಿಕ, ನೈತಿಕ, ಬೌದ್ಧಿಕ–ಹೀಗೆ ಎಲ್ಲಾ ವಿಧದಲ್ಲೂ ಹಳೆಯ ಸಮಾಜದ ಹುಟ್ಟುಗುರುತು ಅದರ ಮೇಲೆ ಇದ್ದೇ ಇರುವುದು.

ನಿಜವಾಗಿ ನೋಡಿದರೆ, ಭಂಡವಳಶಾಹಿ ಸಮಾಜದೊಳಗಿನ ಸರಿಯಾದ ಬೆಳವಣಿಗೆಯೇ ಸಾಮ್ಯವಾದದ ಜನನಕ್ಕೆ ಸಿದ್ಧತೆ ನಡೆಸುವುದು; ಬದಲಾವಣೆಯ ರೂಪವನ್ನು ತೋರಿಸಿಕೊಡುವುದು. ಉತ್ಪಾದನ ಹೆಚ್ಚು ಹೆಚ್ಚಾಗಿ 'ಸಾಮಾಜಿಕ' ವಾಗುವುದು. ಎಂದರೆ ಒಂದು ವಸ್ತುವನ್ನು ನಿರ್ಮಿಸುವುದರಲ್ಲಿ ಹೆಚ್ಚು ಹೆಚ್ಚು ಜನ ನಿರತರಾಗುವರು. ಕಾರ್ಖಾನೆಗಳು ಬೆಳೆಯುತ್ತ ಹೋಗುವುವು. ಕಚ್ಚಾ ಮಾಲು ನಿರ್ಮಿತ ವಸ್ತುವಾಗುವ ಉತ್ಪಾದನದ ಕಾರ್ಯವಿಧಾನದಲ್ಲಿ ಬಹಳ ಜನರೊಳಗೆ ಸಂಬಂಧ ಬೆಳೆಯುವುದು. ಜನ ಹೆಚ್ಚು ಹೆಚ್ಚಾಗಿ ಒಬ್ಬರಮೇಲೊಬ್ಬರು ಅವಲಂಬಿಸಬೇಕಾಗುವುದು. ಹಳೆಯ ಪಾಳೆಯಗಾರ ಬಂಧನಗಳನ್ನು ಭಂಡವಳಶಾಹಿ ಕಡಿದಿರುತ್ತದೆ. ಆದರೆ ಭಂಡವಳಶಾಹಿಯು ಹೊಸ ಜಾಲವನ್ನು ಹೆಣೆಯುವುದು. ಈ ವಿಸ್ತೃತ ಜಾಲದಿಂದಾಗಿ ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದ ಆಗುಹೋಗುಗಳ ಮೇಲೆ ಅವಲಂಬಿಸಿರಬೇಕಾಗುವುದು.

ಭಂಡವಳಶಾಹಿ ಉತ್ಪಾದನದ ರೂಪ ಇದು. ಆದರೆ ಸಮಾಜದೊಳಗಿನ ಪರಸ್ಪರ ಸಹಕಾರದಿಂದ ತಯಾರಿಸಲ್ಪಟ್ಟ ವಸ್ತುವಿನ ಮೇಲೆ ಮಾತ್ರ ಸಮಾಜಕ್ಕೆ ಅಧಿಕಾರವಿಲ್ಲ. ಅದು ಒಬ್ಬ ವ್ಯಕ್ತಿಯ ಇಲ್ಲವೆ ಒಂದು ಗುತ್ತಿಗೆಯ ಸೊತ್ತು. ಸಾಮ್ಯವಾದಿ ಸಮಾಜವನ್ನು ಕಟ್ಟುವಾಗ ಮಾಡಬೇಕಾದ ಮೊದಲ ಕೆಲಸವೆಂದರೆ, ಸಮಾಜವು ನಿರ್ಮಿಸಿದ್ದು ಸಮಾಜಕ್ಕೇ ಸಿಗುವಂತೆ ಮಾಡುವುದು. ಎಂದರೆ, ಭಂಡವಳಶಾಹಿ ಪದ್ಧತಿಯಲ್ಲಿ ವ್ಯಕ್ತಿಗಳ ಅಧೀನದಲ್ಲಿರುವ ಕಾರ್ಖಾನೆ, ಗನಿ, ಯಂತ್ರ, ಹಡಗು ಇವುಗಳೆಲ್ಲದರ ಯಜಮಾನಿಕೆಯನ್ನು ಸಮಾಜವೇ ವಹಿಸಬೇಕಾಗುವುದು. ಹಳೆಯ ಸಮಾಜದಿಂದ ಪಾರಂಪರ್ಯವಾಗಿ ಪಡೆದುದರ ತಳಹದಿಯ ಮೇಲೆಯೇ,

ಉತ್ಪಾದನದ ಸಾಧನಗಳನ್ನು ಸಮಾಜದ ಸೊತ್ತಾಗಿ ಮಾಡುವ ಕೆಲಸ ನಡೆಯುತ್ತದೆ. ಸಮಾಜವು ಸ್ವಾಧೀನಪಡಿಸಿಕೊಳ್ಳಲು ಸಿದ್ಧವಾಗಿರುವುದು ಸಾಧಾರಣಾ ಬಲು ದೊಡ್ಡ ಸಂಸ್ಥೆಗಳು ಮಾತ್ರ. ಭಂಡವಳಶಾಹಿ ಬೆಳವಣಿಗೆ ಈ ಸ್ಥಿತಿಯನ್ನು ಸಿದ್ಧಗೊಳಿಸಿದೆ. ಅಂಥ ಸಂಸ್ಥೆಗಳಲ್ಲಿ ಉತ್ಪಾದನ ವಿಧಾನದ ಯಜಮಾನರೊಳಗೇ ವಿಭಾಗವಿರುತ್ತದೆ. ಆಗ, ಒಬ್ಬ ಪಾಲುಗಾರನನ್ನು ಇನ್ನೊಬ್ಬನಿಗೆ ಬಂಧಿಸಿರುವುದು ಆ ಸಂಸ್ಥೆಯು ಕೊಡುವ ಲಾಭದ ಪಾಲು, ಅಷ್ಟೆ. ಕೂಲಿಕಾರರೂ ಇತರ ನೌಕರರೂ ಉತ್ಪಾದನವನ್ನು ನಡೆಸುವರು. ಯಜಮಾನಿಕೆಯನ್ನು ಸಮಾಜವೇ ವಹಿಸಿರುವುದರಿಂದ ಅವರಿಗೇನೂ ತೊಂದರೆಯಾಗುವುದಿಲ್ಲ. ಆದುದರಿಂದ ಈ ದೊಡ್ಡ ಸಂಸ್ಥೆಗಳನ್ನು ಸಮಾಜವು ಸುಲಭವಾಗಿ ಸ್ವಾಧೀನಪಡಿಸಿಕೊಳ್ಳಬಹುದು.

ಚಿಕ್ಕ ಉದ್ಯಮಗಳ ಪರಿಸ್ಥಿತಿಯಾದರೆ ಬೇರೆಯೇ. ಕಾರ್ಮಿಕವರ್ಗದ ಸರಕಾರದ ಆರಂಭದ ದಿನಗಳಲ್ಲಿ ಹಲವಾರು ಚಿಕ್ಕ ಪುಟ್ಟ ಕಾರ್ಖಾನೆಗಳನ್ನು ನೋಡಿಕೊಳ್ಳುವುದು ಕಷ್ಟವೇ; ಅಸಾಧ್ಯವೆಂದೇ ಹೇಳಬೇಕು. ನಗರದ ಕೈಗಾರಿಕೆಗಳ ಹಾಗೂ ಹಳ್ಳಿಯ ಹೊಲಗಳ–ಎಲ್ಲಾ ಚಿಕ್ಕ ಪುಟ್ಟ ಉದ್ಯಮಗಳ–ಕೇಂದ್ರೀಕೃತ ಆಡಳಿತಕ್ಕೆ ಸಿದ್ಧತೆಗೊಳಿಸುವುದೇ ಮುಖ್ಯವಾದದ್ದು.

ಈ ಕೆಲಸಕ್ಕಾಗಿ ಯಾವ ಪ್ರಾಯೋಗಿಕ ಕಾರ್ಯಕ್ರಮವನ್ನು ಕೈಕೊಳ್ಳಬಹುದು? ಪರಸ್ಪರ ಸಹಕಾರವನ್ನು ಪ್ರೋತ್ಸಾಹಿಸುವುದೇ ಸಾಮಾನ್ಯ ವಿಧಾನ. ಅದರಿಂದಾಗಿ ಹತ್ತಿಪ್ಪತ್ತು ಉತ್ಪಾದಕರ ಬದಲು ಜತೆಯಾಗಿ ಉತ್ಪಾದನ ಮಾಡುವ ಒಂದು ಉತ್ಪಾದಕ ಘಟಕ ಹುಟ್ಟಬಹುದು.

"ಒತ್ತಾಯಪೂರ್ವಕವಲ್ಲ, ಮಾದರಿಯನ್ನು ಹಾಕಿಕೊಟ್ಟು ಮತ್ತು ಸಾಮಾಜಿಕ ಸಹಾಯವನ್ನಿತ್ತು," ಆ ಬದಲಾವಣೆಯನ್ನು ಸಾಧಿಸುವುದೇ ಸಾಮ್ಯವಾದಿ ಸಮಾಜವನ್ನು ಕಟ್ಟಲು ಮಾರ್ಕ್ಸ್ ತೋರಿಸಿದ ಹಾದಿಯ ಮೂಲ ತಳಹದಿ. ಆದರೆ, ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ, ಹಳೆಯ ಆಳುವವರ್ಗ ಬದಲಾವಣೆ ಹೊಂದಿದ ಸ್ಥಿತಿಯಲ್ಲಿ ಕೈಕಟ್ಟಿ ಕುಳಿತುಕೊಳ್ಳದೆಂದೂ ಹೋರಾಟ ನಡೆಸುತ್ತಲೇ ಇರುವುದೆಂದೂ ಮಾರ್ಕ್ಸ್ ನೋಡಿದ. ಅದರ ಪ್ರತಿಭಟನೆಯನ್ನು ಇದಿರಿಸಿ ಸೋಲಿಸಲು ಕೂಲಿಕಾರವರ್ಗಕ್ಕೆ ರಾಜ್ಯ

ಯಂತ್ರ ಅವಶ್ಯವಾಯಿತು. ಆದರೆ ಹೊಸ ಸಮಾಜವನ್ನು ಕಟ್ಟುವುದು ಒಂದು ಆರ್ಥಿಕ ಕಾರ್ಯವಿಧಾನ; ಶಕ್ತಿಯ ಉಪಯೋಗದ ಮೇಲೆ ಅದು ಅವಲಂಬಿಸಿಲ್ಲ.

ಒಮ್ಮೆ ಕೂಲಿಕಾರವರ್ಗ ಹಳೆಯ ಆಳುವವರ್ಗದ ಪ್ರತಿಭಟನೆಯನ್ನು ಮುರಿದು ತನ್ನ ನಿಯಂತ್ರಣವನ್ನು ಸ್ಥಾಪಿಸಿತೆಂದರೆ, ಹಿರಿಯ ಸಂಸ್ಥೆಗಳನ್ನು, ಬ್ಯಾಂಕುಗಳನ್ನು, ರೈಲ್ವೆಗಳನ್ನು, ವ್ಯಾಪಾರವನ್ನು ಮತ್ತಿತರ ಪ್ರಮುಖ ಉದ್ಯಮಗಳನ್ನು ವಶಪಡಿಸಿಕೊಳ್ಳುವುದು. ಆದರೆ ಎಲ್ಲಾ ಉತ್ಪಾದನವನ್ನೂ ವ್ಯಾಪಾರವನ್ನೂ ಸ್ವಾಧೀನಕ್ಕೆ ತರುವುದಿಲ್ಲ. ಆದುದರಿಂದ, 'ನಾಳೆಯೇ ಸಾಮ್ಯವಾದವನ್ನು ಒಪ್ಪಿಕೊಂಡೇ ತೀರಬೇಕು' ಎಂದು ಯಾರನ್ನೂ ಒತ್ತಾಯಿಸುವುದಿಲ್ಲ. ಕ್ರಾಂತಿಯೊಡನೆ ಬರುವುದು ಸಾಮ್ಯವಾದವಲ್ಲ. ಸಾಮ್ಯವಾದಿ ಸಮಾಜವನ್ನು ಕಟ್ಟಲು ಕೂಲಿಕಾರವರ್ಗಕ್ಕೆ ಅಧಿಕಾರ ಮಾತ್ರ. ಸಾಮ್ಯವಾದಿ ತಳಹದಿಯ ಮೇಲೆಯೇ ಉತ್ಪಾದನ ಮತ್ತು ವಿತರಣವನ್ನು ಮಾಡಲು, ಆ ಸಮಾಜದ ರಚನೆಯನ್ನು ಪೂರ್ತಿಗೊಳಿಸಲು, ಹಲವು ವರ್ಷಗಳು ಬೇಕು.

ಉತ್ಪಾದನದ ವಿಧಾನಗಳನ್ನು ಖಾಸಗಿ ಸೊತ್ತಾಗಿ ಇಡದೆ, ಸಮಾಜಕ್ಕಾಗಿ ಉಪಯೋಗಿಸುವುದು ಸಾಮ್ಯವಾದದ ಗುಣಗಳಲ್ಲಿ ಮೊತ್ತಮೊದಲಿನದು. ಯಾವುದಾದರೂ ಧಾರ್ಮಿಕ 'ತತ್ವ' ದ ಮೇಲೆ ಇದು ಅವಲಂಬಿಸಿಲ್ಲ. ಉತ್ಪಾದನ ವಿಧಾನಗಳು ಖಾಸಗಿ ಸೊತ್ತಾಗಿದ್ದರೆ ಉತ್ಪಾದನಕ್ಕೆ ತಡೆ ಇರುವುದು, ಮನುಷ್ಯನು ನಿರ್ಮಿಸಿದ ಉತ್ಪಾದಕ ಶಕ್ತಿಯ ಪೂರ್ಣ ಉಪಯೋಗಕ್ಕೆ ಆಸ್ಪದವಿರುವುದಿಲ್ಲ. ಒಡೆತನವನ್ನು ಸಮಾಜಕ್ಕೆ ಒಪ್ಪಿಸಿಕೊಡುವುದರಿಂದ ಪೂರ್ವಸಿದ್ಧತೆ ಮಾಡಿದಹಾಗಾಗುತ್ತದೆ. ಉತ್ಪಾದಕ ಶಕ್ತಿಗಳ ಜಾಗೃತ-ವ್ಯವಸ್ಥಿತ ಬೆಳವಣಿಗೆಯೇ ಮುಂದಿನ ಹೆಜ್ಜೆ.

೧೯೧೭ರ ರಷ್ಯದಂಥ ಹಿಂದುಳಿದ ಔದ್ಯೋಗಿಕ ರಾಷ್ಟ್ರದಲ್ಲಿ ಮಾತ್ರ ಇಂಥ ಬೆಳವಣಿಗೆ ಅವಶ್ಯಕವಾಯಿತೆಂದು ಯೋಚಿಸುವುದು ತಪ್ಪು. ಅಧಿಕಾರ ವಹಿಸಿಕೊಂಡ ಅನಂತರ ಎಷ್ಟು ಶೀಘ್ರವೋ ಅಷ್ಟು ಶೀಘ್ರ ಉತ್ಪಾದಕ ಶಕ್ತಿಗಳ ಮೊತ್ತವನ್ನು ಹೆಚ್ಚಿಸಲು ಕಾರ್ಮಿಕವರ್ಗವು ತನ್ನ ರಾಜಕೀಯ ಮೇಲ್ತನವನ್ನು ಉಪಯೋಗಿಸುವುದು...." ಎಂದು ಮಾರ್ಕ್ಸ್ ಬರೆ

ದಾಗ ಬಹಳ ಮುಂದುವರಿದ ಔದ್ಯೋಗಿಕ ರಾಷ್ಟ್ರಗಳ ಬಗ್ಗೆಯೇ ಮಾರ್ಕ್ಸ್ ವಿಚಾರ ಮಾಡುತ್ತಿದ್ದ. ಮಾರ್ಕ್ಸ್‌ನ ಕಾಲದ ಅನಂತರ ಈ ಉತ್ಪಾದಕ ಶಕ್ತಿಗಳು ಬಹಳ ಹೆಚ್ಚಿವೆ. ಆದರೆ ವೈಜ್ಞಾನಿಕ ಬುದ್ಧಿಯಿಂದ ಎಷ್ಟು ಸಾಧ್ಯವೋ ಅಷ್ಟರವರೆಗೂ ಅದು ಹೆಚ್ಚಿಲ್ಲ. ಭಂಡವಳಶಾಹಿ ಪದ್ಧತಿ ದೆಸೆಯಿಂದ; ಆರ್ಥಿಕ ದುರಂತರಗಳ ಫಲವಾಗಿ ಉತ್ಪಾದನಕ್ಕೆ ಆಗಾಗ್ಗೆ ತಡೆ ಬೀಳುವುದರಿಂದ; ಬರೇ ಮಾರ್ಕೆಟಿನಲ್ಲಿ ಮಾರುವುದಕ್ಕಾಗಿ ಮಾತ್ರ ಉತ್ಪಾದನೆಯಾಗುವುದರಿಂದ; ವ್ಯಾಪಾರದ ಸರ್ವಾಧಿಪತ್ಯವು ವೈಜ್ಞಾನಿಕ ಶೋಧನೆಗಳನ್ನೆಲ್ಲ ಕೊಂಡುಕೊಂಡು ಬಚ್ಚಿಡುವುದರಿಂದ; ಭಂಡವಳಶಾಹಿಯು ಕೃಷಿ ವ್ಯವಸಾಯವನ್ನು ಪ್ರತ್ಯೇಕಿಸಿ ಹಿಂದಕ್ಕೆ ಇಟ್ಟುದರಿಂದ; ಸ್ಪರ್ಧಿಸುವ ಪಂಗಡಗಳೊಳಗಿನ ಹಾಗೂ ವಸಾಹತುಗಳ ಜನರ ವಿರುದ್ಧವಾದ ಯುದ್ಧಗಳಿಗಾಗಿ ಭಂಡವಳಶಾಹಿಯು ಬಹಳ ವ್ಯಯಮಾಡಬೇಕಾಗಿರುವುದರಿಂದ; ದೈಹಿಕ ಶ್ರಮವನ್ನು ಮಾನಸಿಕ ಶ್ರಮದಿಂದ ಪ್ರತ್ಯೇಕಿಸಿ ಶೋಧನೆಗಳಿಗೆ ಅವಕಾಶ ಕೊಡದಿರುವುಧರಿಂದ; ವರ್ಗಸಮರಕ್ಕಾಗಿ ಮಾನವಶಕ್ತಿಯು ವ್ಯಯವಾಗುವುದರಿಂದ; ಭಂಡವಳಶಾಹಿಯ ಕೆಳಗೆ ಲಕ್ಷಗಟ್ಟಲೆ ಜನ ನಿರುದ್ಯೋಗಿಗಳಾಗಿರುವುದರಿಂದ—ಈಗಿನ ಉತ್ಪಾದಕ ಶಕ್ತಿಗಳು ಬಹಳ ಹಿಂದುಳಿದಿವೆ.

ಆದುದರಿಂದ ಕಾರ್ಖಾನೆಗಳನ್ನೂ, ಗಣಿಗಳನ್ನೂ, ವಿದ್ಯುಚ್ಛಕ್ತಿಯ ಸಂಗ್ರಹವನ್ನೂ ರೈಲ್ವೆಯನ್ನೂ, ವ್ಯವಸಾಯವನ್ನೂ ಮೀನು ಹಿಡಿಯುವುದನ್ನೂ, ಇನ್ನೂ ಹೆಚ್ಚಿನ ಉತ್ಪಾದನವನ್ನೂ ಸಾಧ್ಯಗೊಳಿಸುವುದಕ್ಕಾಗಿ, ಪುನರ್ಘಟಿಸಿ ಅತ್ಯಾಧುನಿಕವಾಗುವಂತೆ ಮಾಡಲೇಬೇಕು.

ಬ್ರಿಟನಿನಲ್ಲಿ ಉತ್ಪತ್ತಿಯಾಗುವುದನ್ನೆಲ್ಲ ಸಮಾನವಾಗಿ ಹಂಚಿದರೂ ಕೂಲಿಕಾರರ ಜೀವನಮಟ್ಟದಲ್ಲಿ ಪ್ರಗತಿಯಾಗದು—ಇದು ಸಾಮ್ಯವಾದದ ವಿರೋಧಿಗಳು ಮುಂದಿರಿಸುವ ಮೊದಲ ವಾದ. ಇದು ಸರಿಯಲ್ಲ. ಸರಿಯಾಗಿದ್ದರೂ ಕೂಡ, ಮಾರ್ಕ್ಸ್‌ನ ಸಾಮ್ಯವಾದದ ಕಲ್ಪನೆಗೂ ಇದಕ್ಕೂ ಏನೇನೂ ಸಂಬಂಧವಿಲ್ಲ. ಸಾಮ್ಯವಾಧವು ಉತ್ಪಾದನೆಯ ಮಟ್ಟವನ್ನು ಎಷ್ಟೆಷ್ಟೋ ಮೇಲಣ ಮಟ್ಟಕ್ಕೆ ಒಯ್ಯುವುದೆಂದು ಮಾರ್ಕ್ಸ್ ಎಣಿಕೆ ಹಾಕಿದ್ದ. ಜಾರ್ ಚಕ್ರವರ್ತಿಯ ರಷ್ಯ ಹಿಂದುಳಿದ ಔದ್ಯೋಗಿಕ ರಾಷ್ಟ್ರವಾಗಿದ್ದುದರಿಂದ

ಮಾತ್ರ, ೧೯೩೮ರಲ್ಲಿ ಸೋವಿಯೆಟ್ ಯೂನಿಯನಿನ ಉತ್ಪಾದನೆ ಯುದ್ಧ ಪೂರ್ವದ ಮಟ್ಟಕ್ಕಿಂತ ಎಂಟು ಪಾಲಷ್ಟು ಹೆಚ್ಚಿದ್ದಲ್ಲ. ಔದ್ಯೋಗೀಕರಣ ವಾಗಿರುವ ಬ್ರಿಟನಿನಲ್ಲೂ ಇನ್ನೆಷ್ಟೋ ಹೆಚ್ಚು ಉತ್ಪತ್ತಿಯನ್ನು ಮಾಡ ಬಹುದು.

ಉತ್ಪಾದನದ ಮಟ್ಟದ ಏರುವಿಕೆ ಮತ್ತು ಜನರ ಜೀವನ ಮಟ್ಟದ ಏರುವಿಕೆಯ ದೃಢ ಆಧಾರದಮೇಲೆಯೇ ಜನರ ಬೌದ್ಧಿಕ ಹಾಗೂ ಸಾಂಸ್ಕೃತಿಕ ಮಟ್ಟದಲ್ಲಿ ಪ್ರಗತಿಯಾಗುವುದು.

ಆದರೆ ಈಯೆಲ್ಲ ಬೆಳವಣಿಗೆ ವ್ಯವಸ್ಥಿತ ಉತ್ಪಾದನದಿಂದ ಮಾತ್ರ ಸಾಧ್ಯ. ಭಂಡವಳಶಾಹಿ ಸಮಾಜದಲ್ಲಿ, ಹೆಚ್ಚಿನ ಲಾಭ ಸಾಧ್ಯವಿದ್ದಾಗ ಮಾತ್ರ , ಹೊಸ ಕಾರ್ಖಾನೆಗಳು ಕಟ್ಟಲ್ಪಡುವುವು ; ಯಾವುದಾದರೊಂದು ವಸ್ತು ಹೆಚ್ಚು ಪ್ರಮಾಣದಲ್ಲಿ ತಯಾರಿಸಲ್ಪಡುವುದು. ಹೆಚ್ಚಿನ ಲಾಭ ವೆಂದರೆ ಆ ನಿರ್ದಿಷ್ಟ ವಸ್ತು ಬಹಳ ಜನರಿಗೆ ಬೇಕಾಗಿದೆ ಎಂದು ಅರ್ಥವಲ್ಲ. ಆ ವಸ್ತುವಿಗಾಗಿ ಬೇಡಿಕೆ ಶ್ರೀಮಂತವರ್ಗದ ಬಲು ಚಿಕ್ಕ ವಿಭಾಗದಿಂದ ಬಂದಿರಬಹುದು. ಅಥವಾ ಯಾವುದೂ ಒಂದು ವಿಶಿಷ್ಟ ಪರಿಸ್ಥಿತಿಯಿಂದಾಗಿ ಆ ವಸ್ತುವಿನ ಬೆಲೆ ಹೆಚ್ಚಾಗಿರಬಹುದು. ಲಾಭವೊಂದೇ ಉದ್ದೇಶವಾಗಿ ರುವಾಗ ಉತ್ಪಾದನ ಹುಚ್ಚಾಬಟ್ಟೆ ಆಗುವುದು. ಫಲಿತಾಂಶವೆಂದರೆ ಒಂದೆಡೆ ಅತಿ ಉತ್ಪಾದನೆ, ಇನ್ನೊಂದೆಡೆ ಕಡಿಮೆ ಉತ್ಪಾದನೆ.

ಉತ್ಪಾದನವು ಲಾಭಕ್ಕಲ್ಲ, ಉಪಯೋಗಕ್ಕೆ—ಎಂದಿರುವ ಸಾಮ್ಯವಾದಿ ಸಮಾಜದಲ್ಲಿ ಉತ್ಪಾದನೆಗಾಗಿ ಒಂದು ಯೋಜನೆ ತಯಾರಿಸುವುದು ಸಾಧ್ಯ. ಮುಖ್ಯ ಉದ್ಯಮಗಳೆಲ್ಲ ಸಮಾಜದ ಸೊತ್ತಾದಾಗ, ಉಳಿದುವೆಲ್ಲ ಹೆಚ್ಚು ಕಡಿಮೆ ನಿಯಂತ್ರಿಸಲ್ಪಟ್ಟಾಗ, ಉತ್ಪಾದನೆಗಾಗಿ ಒಂದು ಯೋಜನೆ ತಯಾರಿಸಬಹುದು ; ಪ್ರತಿ ವರ್ಷ ಕಳೆದಂತೆ ಆ ಯೋಜನೆ ಹೆಚ್ಚು ಹೆಚ್ಚು ಸರಿಯಾಗುತ್ತಾ ಹೋಗುವುದು.

ಸಾಮ್ಯವಾದವೆಂದರೆ—ಉತ್ಪಾದನದ ಸಾಧನಗಳನ್ನು ಸಮಾಜದ ಸ್ವಾಧೀನಕ್ಕೆ ತರುವುದು, ಉತ್ಪಾದಕ ಶಕ್ತಿಗಳ ಸಂಖ್ಯೆ ಹೆಚ್ಚುವುದು, ವ್ಯವಸ್ಥಿತ ಉತ್ಪಾದನೆ, ಎಂದು ಮಾರ್ಕ್ಸ್ ಚಿತ್ರಿಸಿದ. ಉತ್ಪಾದನದ ಸಾಧನಗಳು ಹೆಚ್ಚುತ್ತಹೋದರೂ ಕೂಡಾ ಸಾಮ್ಯವಾದದ ಕೆಳಗೆ ಅತಿ ಉತ್ಪಾದನೆ

ಯಾಕೆ ಆಗುವುದಿಲ್ಲವೆಂಬ ರಹಸ್ಯ, ಉತ್ಪಾದನದ ಯೋಜನೆಯ ಗುಣದಲ್ಲಿ ಅಡಕವಾಗಿದೆ.

ಉತ್ಪಾದನದ ರಾಷ್ಟ್ರೀಯ ಯೋಜನೆಯಲ್ಲಿ ಎರಡು ಭಾಗಗಳಿವೆ: ಕಟ್ಟಡ, ಯಂತ್ರ, ಕಚ್ಚಾ ಮಾಲುಗಳಂತಹ ಉತ್ಪಾದನ ಸಾಧನಗಳನ್ನು ತಯಾರಿಸುವುದಕ್ಕಾಗಿ ಒಂದು ಯೋಜನೆ; ಅಹಾರ–ಬಟ್ಟೆ, ವಿದ್ಯಾಭ್ಯಾಸ ಆರೋಗ್ಯ ವಿನೋದ ಪಂದ್ಯಾಟ ಹಾಗೂ ಆಡಳಿತಕ್ಕೆ ಅವಶ್ಯವಿರುವ ಸಾಮಗ್ರಿಗಳು ಇವುಗಳ ಉತ್ಪಾದನೆಗಾಗಿ ಒಂದು ಯೋಜನೆ. ರಕ್ಷಣಾ ಸೇನೆಗಳು ಅವಶ್ಯವಿರುವಷ್ಟುಕಾಲ ಅವುಗಳ ಪೂರೈಕೆಯನ್ನೂ ನೋಡಿಕೊಳ್ಳ ಬೇಕು.

ಅತಿ ಉತ್ಪಾದನೆ ಇರುವುದಿಲ್ಲ—ಯಾಕೆಂದರೆ, ಉತ್ಪತ್ತಿಯಾದ ಉಪಯೋಗದ ವಸ್ತುಗಳೆಲ್ಲ ಜನರೊಳಗೆ ಹಂಚಲ್ಪಡುವುವು. ಅಂದರೆ ಕೂಲಿ–ಭತ್ಯಗಳ ಮೊತ್ತ ಆ ವಸ್ತುಗಳ ಒಟ್ಟು ಬೆಲೆಯಷ್ಟೇ ಇರುವುದು. ಯೋಜನೆಯಲ್ಲೇನೋ ಸ್ವಲ್ಪ ಹೆಚ್ಚು ಕಡಿಮೆಯಾಗಬಹುದು—ಒಂದು ವರ್ಷದಲ್ಲಿ ಜನರಿಗೆ ಅವಶ್ಯವಿರುವುದಕ್ಕಿಂತಲೂ ಹೆಚ್ಚು ಸೈಕಲುಗಳು ತಯಾರಾಗಬಹುದು; ಚಪ್ಪಲಿ–ಎಕ್ಕಡಗಳು ಕಡಿಮೆ ಬೀಳಬಹುದು. ಆದರೆ ಅಂಥ ತಪ್ಪುಗಳನ್ನೆಲ್ಲ ಮುಂದಿನ ಯೋಜನೆಯಲ್ಲಿ ಸರಿಮಾಡಿಕೊಳ್ಳುವುದು ಸಾಧ್ಯವಾಗುತ್ತದೆ. ಉಪಯೋಗದ ವಸ್ತುಗಳ ವ್ಯವಸ್ಥಿತ ಉತ್ಪಾದನೆ ಹೆಚ್ಚಿದಂತೆ ವ್ಯವಸ್ಥಿತ ವಿತರಣವೂ ಹೆಚ್ಚುವುದು.

ಆದರೆ ವಸ್ತುಗಳನ್ನೇ ಜನರೊಳಗೆ ಹಂಚುವುದಿಲ್ಲ. ಕೂಲಿ—ಭತ್ತೆಗಳ ರೂಪದಲ್ಲಿ ಹಣ ಹಂಚಲ್ಪಡುತ್ತದೆ. ಉಪಯೋಗದ ವಸ್ತುಗಳಿಗೆ ಖಂಡಿತ ಕ್ರಯವೆಂದಾದಮೇಲೆ, ಅವುಗಳ ಒಟ್ಟು ಕ್ರಯದಷ್ಟೇ ಕೂಲಿಭತ್ಯಗಳನ್ನು ಕೊಡಬಹುದು. 'ಉತ್ಪಾದನ' ಮತ್ತು 'ಉಪಯೋಗ'ದಲ್ಲಿ ಹೆಚ್ಚು ಕಡಿಮೆ ಇಲ್ಲ. ಬೇಕಾದ್ದೆಲ್ಲವೂ ಜನರಿಗೆ ಸಿಗುತ್ತವೆ. ಹೆಚ್ಚಿದ ಉತ್ಪಾದನವೆಂದರೆ ಸಿಗುವ ವಸ್ತುಗಳ ಸಂಖ್ಯೆ ಹೆಚ್ಚುವುದು; ಜನ ಕೊಂಡುಕೊಳ್ಳುವ ಪ್ರಮಾಣವೂ ಹೆಚ್ಚುವುದು.

ಸಾಮ್ಯವಾದಿ ಸಮಾಜದಲ್ಲಿ 'ಕ್ರಯ' ಎಂಬುದು ಇರುವುದನ್ನು ಕಂಡು ಎಷ್ಟೋ ಬಾರಿ ತಪ್ಪು ತಿಳಿಯುವವರಿದ್ದಾರೆ. ಭಂಡವಳಶಾಹಿ

ಪದ್ಧತಿಯಲ್ಲಿ ಕ್ರಯದ ಏರಿಳಿತ, ಪೂರೈಕೆ ಮತ್ತು ಬೇಡಿಕೆಯೊಳಗಿನ ಸಂಬಂಧವನ್ನು ತೋರಿಸುವುದು. ಕ್ರಯ ಹೆಚ್ಚಿದರೆ ಪೂರೈಕೆ ಬಲು ಕಡಿಮೆ ಎಂದರ್ಥ; ಕ್ರಯ ಇಳಿದರೆ ಪೂರೈಕೆ ಜಾಸ್ತಿಯಾಗಿದೆ, ಅದನ್ನು ಕಡಿಮೆ ಮಾಡಬೇಕು, ಎಂದರ್ಥ. ಉತ್ಪಾದನವನ್ನು ಸಮತೂಕದಲ್ಲಿಡುವುದೂ 'ಕ್ರಯ' ದ ಕೆಲಸ. ಆದರೆ ಸಾಮ್ಯವಾದಿ ಸಮಾಜದಲ್ಲಿ ಕ್ರಯ, ಉಪಯೋಗವನ್ನು ಮಾತ್ರ ಸಮತೂಕದಲ್ಲಿಡುವುದು. ಉತ್ಪಾದನ, ಕ್ರಮದಂತೆ ನಡೆಯುವುದು; ಉತ್ಪಾದನವಾಗಿರುವುದು ಉಪಯೋಗಿಸಲ್ಪಡಬೇಕೆಂದೇ ಕ್ರಯವನ್ನು ಗೊತ್ತುಮಾಡಲಾಗುವುದು

ಉತ್ಪತ್ತಿಯಾದ ಉಪಯೋಗದ ವಸ್ತುಗಳೆಲ್ಲ ಜನರೊಳಗೆ ಹೇಗೆ ಹಂಚಲ್ಪಡುತ್ತವೆ? ಉತ್ಪಾದನೆಯಾದ ವಸ್ತುಗಳನ್ನೇ ಸಮವಾಗಿ ಹಂಚಿಕೊಳ್ಳಬೇಕೆಂದು ಮಾರ್ಕ್ಸ್ ಯೋಚಿಸಿದ್ದನೆಂದು ಭಾವಿಸುವುದು ತಪ್ಪು. ಆದರೆ ಹಾಗೆ ಯಾಕೆ ಭಾವಿಸಿದ್ದಿರಕೂಡದು? ಯಾಕೆಂದರೆ ಸಾಮ್ಯವಾದಿ ಸಮಾಜ ಪೂರ್ಣ ಹೊಸತಾಗಿ ಕಟ್ಟಲ್ಪಟ್ಟಿಲ್ಲ; ಭಂಡವಳಶಾಹಿಯಿಂದ ಪಾರಂಪರ್ಯವಾಗಿ ಬಂದಿರುವ ತಳಹದಿಯ ಮೇಲೆಯೇ ಅದು ರಚಿಸಲ್ಪಟ್ಟದೆ. ಸರಿಯಾಗಿ ಹಂಚಿಕೊಳ್ಳಿ, ಎನ್ನುವುದರಿಂದ ಸರಾಸರಿಗಿಂತ ಮೇಲಿನ ಜೀವನ ಮಟ್ಟವಿರುವವರನ್ನೆಲ್ಲ ದಂಡಿಸಿದ ಹಾಗಾಗುತ್ತದೆ. ಹೆಚ್ಚಿನ ಉತ್ಪಾದನೆಯ ಕೆಲಸದಲ್ಲಿ ಸಾಮಾನ್ಯ ಕೂಲಿಗಾರನಿಗಿಂತ ನುರಿತ ಕೂಲಿಗಾರನ ದುಡಿತವೇ ಮುಖ್ಯ. ಭಂಡವಳವು ಉಳಿಸಿಹೋಗಿರುವ ಅಸಮ ಪರಿಸ್ಥಿತಿಯಲ್ಲಿ ಸಮಾನತೆ ಬೇಕೆನ್ನುವುದು ನ್ಯಾಯವಲ್ಲ; ಅನ್ಯಾಯ. ಮಾರ್ಕ್ಸ್ ಈ ಬಗ್ಗೆ ಬಲು ಸ್ಪಷ್ಟವಾಗಿ ಬರೆದ: "ಹಕ್ಕುಗಳು ಸಮಾನವಾಗಿರುವುದರ ಬದಲು ಅಸಮಾನವಾಗಿರಬೇಕು....ಸಮಾಜದ ಆರ್ಥಿಕ ಪರಿಸ್ಥಿತಿಗಿಂತ, ಅದನ್ನು ಹೊಂದಿಕೊಂಡಿರುವ ಸಾಂಸ್ಕೃತಿಕ ಬೆಳವಣಿಗೆಗಿಂತ ಮೇಲಾಗಿ ನ್ಯಾಯ ಎದ್ದು ನಿಲ್ಲುವುದು."

ಭಂಡವಳಶಾಹಿ ಸಮಾಜದಿಂದ ಇದೀಗ ಹೊರಬಂದಿರುವ ಜನರು ನಿಜಕ್ಕೂ ಸಮಾನರಾಗಿರುವುದಿಲ್ಲ; ಸಮಾಜವು ಅನ್ಯಾಯ ಮಾಡಬಾರದು ಎಂದಿದ್ದರೆ ಆ ಮನುಷ್ಯರನ್ನು ವಿಭಿನ್ನವಾಗಿಯೇ ನೋಡಿಕೊಳ್ಳಬೇಕು. ಅವರು ಸಮಾಜದ ಸೇವೆ ಮಾಡಿದರೆ ಮಾತ್ರ ಇದು ಅವಶ್ಯ. ಆದುದರಿಂದ

"ದುಡಿಯದವನು ತಿನ್ನುವುದೂ ಸಾಧ್ಯವಿಲ್ಲ." ಸಮಾಜಕ್ಕಾಗಿ ಹೆಚ್ಚು ಉಪಯೋಗದ ಕೆಲಸ ಮಾಡುವ ಮನುಷ್ಯ ಉತ್ತಮ ಜೀವನ ಮಟ್ಟ ವನ್ನೂ ಗಳಿಸುತ್ತಾನೆ. ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಪ್ರತಿಯೊಬ್ಬನಿಂದ, ತನ್ನ ದುಡಿತಕ್ಕೆ ತಕ್ಕಂತೆ ಪ್ರತಿಯೊಬ್ಬನಿಗೆ—ಈ ತತ್ವದ ಮೇಲೆ ಉಪಯೋಗಕ್ಕೆ ಸಿಗಬಲ್ಲ ಎಲ್ಲ ವಸ್ತುಗಳ ವಿತರಣೆಯಾಗುತ್ತದೆ.

ಆದರೆ ಸಾಮ್ಯವಾದಿ ಸಮಾಜ ಅದೇ ಮಟ್ಟದಲ್ಲಿ ಉಳಿಯುವುದಿಲ್ಲ. ಪ್ರತಿ ವರ್ಷ ಉತ್ಪಾದನ ಹೆಚ್ಚುತ್ತದೆ. ಅದೇ ಹೊತ್ತಿಗೆ ತಾಂತ್ರಿಕ ಜಾಣ್ಮೆಯೂ ಜನರ ಸಾಂಸ್ಕೃತಿಕ ಬೆಳವಣಿಗೆಯೂ ಪ್ರಗತಿಹೊಂದುತ್ತವೆ. ಮಜೂರಿಯಲ್ಲಿರುವ ಅಸಮತೆ ಪ್ರತಿಯೊಬ್ಬನನ್ನೂ ತನ್ನ ವಿದ್ಯೆ–ಬುದ್ಧಿಶಕ್ತಿಯನ್ನು ಹೆಚ್ಚಿಸಲು ಪ್ರೇರೇಪಿಸುತ್ತದೆ. ಹೆಚ್ಚಿದ ಜಾಣ್ಮೆಯೆಂದರೆ ಹೆಚ್ಚು ಉತ್ಪಾದನೆ-ಹೆಚ್ಚು ಸಾಮಗ್ರಿಗಳು-ಹೆಚ್ಚು ಕೂಲಿ–ಹೀಗೆ ಪ್ರತಿಯೊಬ್ಬನ ಜೀವನ ಮಟ್ಟವೂ ಏರುವುದು ಸಾಧ್ಯವಾಗುತ್ತದೆ. ಭಂಡವಳಶಾಹಿಯಲ್ಲಾದರೆ ಅಸಮತೆ ಎಂಬುದು ಕೆಲವೇ ಮಂದಿಯ ಸಂಪತ್ತನ್ನೂ ಬಹುಮಂದಿಯ ಐಶ್ವರ್ಯವನ್ನೂ ಹೆಚ್ಚಿಸುವ ಉಪಾಯ ಸಾಧನ. ಸಾಮ್ಯವಾದಿ ಸಮಾಜದಲ್ಲಿ ಅಸಮತೆಯು ಈ ಉಪಾಯ ಸಾಧನದಿಂದ ಸಾಮಾಜಿಕ ಮಟ್ಟವನ್ನು ಮೇಲಕ್ಕೆತ್ತುವುದು ಸಾಧ್ಯವಾಗುತ್ತದೆ.

ಭಾವೀ ಸಮಾಜದಲ್ಲಿ ಈ ಅಸಮತೆ ಸದಾಕಾಲ ಇರುವುದೆಂದು ಮಾರ್ಕ್ಸ್ ಭಾವಿಸಿದನೆ? ಇಲ್ಲ; ಸಮಾಜಕ್ಕಾಗಿ ಅವರು ಮಾಡಿದ ಸೇವೆಗೆ ತಕ್ಕಷ್ಟು ಪ್ರತಿಫಲ ಜನರಿಗೆ ಕೊಡುವ ಅಗತ್ಯವಿಲ್ಲದೇ ಇರುವ ಒಂದು ಘಟ್ಟ ಬರುವುದೆಂದು ಅವನು ತಿಳಿದಿದ್ದ.

ಉತ್ಪನ್ನವಾದುದನ್ನು ಪ್ರತಿಯೊಬ್ಬನ ದುಡಿಮೆಗೆ ತಕ್ಕಷ್ಟು, ಇಲ್ಲವೆ ಇನ್ನಾವುದಾದರೂ ತತ್ವದ ಮೇಲೆ, ಹಂಚುವುದು—ಎನ್ನುವುದರ ಅರ್ಥವೇನು? ಪ್ರತಿಯೊಬ್ಬನನ್ನೂ ತೃಪ್ತಿಪಡಿಸುವಷ್ಟು ಉತ್ಪನ್ನ ಅಲ್ಲಿ ಇಲ್ಲವೆಂದು ಅರ್ಥವಲ್ಲವೆ? ಭಂಡವಳಶಾಹಿ ಸಮಾಜದಲ್ಲೇ ಸಮೃದ್ಧಸ್ಥಿತಿಯಲ್ಲಿರುವ ಒಂದು ಕುಟುಂಬವನ್ನು ನೋಡೋಣ: ಅಲ್ಲಿ ಆಹಾರವನ್ನು ಹಂಚುವುದಿಲ್ಲ. ಕುಟುಂಬದ ಪ್ರತಿಯೊಬ್ಬನೂ ತನಗೆ ಬೇಕಾದಷ್ಟು ತೆಗೆದುಕೊಳ್ಳುತ್ತಾನೆ. ಸಾಮ್ಯವಾದಿ ಸಮಾಜವೂ ಎಲ್ಲರಿಗೂ ಬೇಕಾಗುವಷ್ಟು ಉತ್ಪತ್ತಿ

ಇರುವ ಉತ್ಪಾದನದ ಮಟ್ಟಕ್ಕೆ ಬಂದಾಗ, ಯಾರಾದರೂ ತೆಗೆದುಕೊಳ್ಳು ವುದನ್ನು ಅಳತೆಮಾಡುವ ಇಲ್ಲವೆ ನಿಯಂತ್ರಿಸುವ ಅವಶ್ಯತೆಯೇ ಇಲ್ಲ. ಆ ಘಟ್ಟವನ್ನು ತಲುಪಿದಾಗ, 'ಪ್ರತಿಯೊಬ್ಬನಿಂದ ಅವನ ಸಾಮರ್ಥ್ಯದಷ್ಟು ಪ್ರತಿಯೊಬ್ಬನಿಗೆ ಅವನ ಆವಶ್ಯತೆಯಷ್ಟು' ಎಂಬ ತತ್ವದಮೇಲೆ ಉತ್ಪಾದನ-ವಿತರಣಗಳನ್ನು ಮಾಡಬಹುದು.

ಇಂಥ ಪರಿಸ್ಥಿತಿ ಒದಗುವ ಮೈಲುಗಲ್ಲಿನಲ್ಲೇ ಸಮತಾವಾದ [Communism] ಮತ್ತು ಸಾಮ್ಯವಾದ [Socialism] ಗಳೊಳಗಿನ ವ್ಯತ್ಯಾಸ ಕಾಣುವುದು. ಮಾರ್ಕ್ಸ್ ಹೇಳಿರುವಂತೆ ಸಾಮ್ಯವಾದವೆಂಬುದು ಮೊದಲ ಘಟ್ಟ. ಉತ್ಪಾದನದ ಸಾಧನಗಳೆಲ್ಲ ಜನರ ಅಧೀನದಲ್ಲಿರುವುವು. ಒಬ್ಬ ಮನುಷ್ಯ ಇನ್ನೊಬ್ಬನನ್ನು ಶೋಷಿಸುವುದಿಲ್ಲ. ಆದರೆ ಪ್ರತಿಯೊಬ್ಬನೂ ತನಗೆ ಅವಶ್ಯವಿರುವಷ್ಟನ್ನು ತೆಗೆದುಕೊಳ್ಳುವುದರ ಮಟ್ಟಿಗೆ ವ್ಯವಸ್ಥಿತ ಸಾಮ್ಯವಾದಿ ಉತ್ಪಾದನದ ಮಟ್ಟ ಏರಿರುವುದಿಲ್ಲ.

ಸಮತಾವಾದದ ಘಟ್ಟವೆಂದರೆ ಪ್ರಾಪಂಚಿಕ ಅವಶ್ಯತೆಯ ಪೂರೈಕೆಯೊಂದೇ ಅಲ್ಲ. ಕೂಲಿಕಾರವರ್ಗ ಅಧಿಕಾರ ವಹಿಸಿ ಸಾಮ್ಯ ವಾದದ ಕಡೆಗೆ ಬದಲಾವಣೆ ಮಾಡಲು ಆರಂಭಿಸಿದಂದಿನಿಂದ, ಜನರ ದೃಷ್ಟಿಕೋನದಲ್ಲೂ ಒಂದು ಬದಲಾವಣೆ ಆರಂಭವಾಗುವುದು. ಬಂಡವಳ ಶಾಹಿಯ ಕೆಳಗೆ ಬಲು ದುರ್ಗಮವೆಂದು ಕಂಡಿದ್ದ ಅಡೆತಡೆಗಳೆಲ್ಲ ಬಲ ಹೀನವಾಗಿ ಮುರಿದು ಹೋಗುವುವು. ತಾಯ್ತಂದೆಯರ ಸ್ಥಾನ ಇಲ್ಲವೆ ಸಂಪಾದನೆಯ ಮಟ್ಟ ಏನೇ ಇರಲಿ, ಎಲ್ಲಾ ಮಕ್ಕಳಿಗೂ ಸಮಾನ ವಿದ್ಯೆ ಮತ್ತು ಬೆಳವಣಿಗೆಗೆ ಸಮಾನ ಆಸ್ಪದ ದೊರಕುವುವು. "ಜಾತಿ-ಮತ" ವ್ಯತ್ಯಾಸಗಳ ಪ್ರಾಮುಖ್ಯತೆ ಇಲ್ಲದಾಗುವುದು. ಮಕ್ಕಳು, ಕೈಗಳನ್ನು ಮಾತ್ರವಲ್ಲ ಮೆದುಳನ್ನೂ ಉಪಯೋಗಿಸಲು ಆರಂಭಿಸುವುವು. ಈ ದೈಹಿಕ ಹಾಗೂ ಮಾನಸಿಕ ಕೆಲಸದ ಸಮಾನತೆ ಎಲ್ಲಾ ಜನರಲ್ಲೂ ಹಬ್ಬುವುದು. ಪ್ರತಿಯೊಬ್ಬನೂ "ಬುದ್ಧಿವಂತ" ನಾಗುವನು. ಬುದ್ಧಿವಂತವರ್ಗದವರು ದೈಹಿಕ ಶ್ರಮದಿಂದ ಪ್ರತ್ಯೇಕವಾಗಿದ್ದು ತಾವು ಬೇರೆಯೇ ಎನ್ನುವುದಿಲ್ಲ.

ಹೆಂಗಸರು ಕೀಳೆಂದೂ, ಸಮಾಜ ಜೀವನದ ಪ್ರತಿಯೊಂದು ಕ್ಷೇತ್ರ ದಲ್ಲೂ ದುಡಿಯಲು ಅಸಮರ್ಥರೆಂದೂ ಯಾರೂ ಭಾವಿಸುವುದಿಲ್ಲ. ಅವರ

ದುಡಿಮೆಯನ್ನು ಸುಲಭಗೊಳಿಸಲು ವಿಶಿಷ್ಟ ಸೌಕರ್ಯಗಳ ಏರ್ಪಾಡಾಗು ವುದು. ಕಾರ್ಖಾನೆಗಳಲ್ಲೇ ತೊಟ್ಟಿಲುಗಳೂ ಇರುವುವು. ಮತ್ತಿತರ ಇಂಥ ಸೌಕರ್ಯಗಳಿಂದಾಗಿ ತಾಯಂದಿರಿಗೆ ಹೆಚ್ಚು ಸ್ವಾತಂತ್ರ್ಯ ಸಿಗುವುದು. ಸಾಂಘಿಕ ಅಡುಗೆ ಮನೆ, ಒಗೆಯುವ ಏರ್ಪಾಡು ಹಾಗೂ ಫಲಾಹಾರ ಮಂದಿರಗಳಿಂದಾಗಿ ಹೆಂಗಸಿನ ಮನೆಗೆಲಸ ಕಡಿಮೆಯಾಗುವುದು. ಹೆಂಗ ಸರು ದುಡಿಯಲೇಬೇಕೆಂಬ ಒತ್ತಾಯವಿಲ್ಲ. ಆದರೆ ಒದಗಿಸಲ್ಪಡುವ ಸೌಕರ್ಯಗಳಿಂದಾಗಿ ಅವರ ದುಡಿತ ಸುಲಭವಾಗುವುದು.

ರಾಷ್ಟ್ರದೊಳಗೇ ಇರುವ ಗುಂಪು ಗುಂಪುಗಳ ನಡುವಿನ ಅಡೆ-ತಡೆ ಮುರಿಯಲ್ಪಡುವುದು. ಸಾಮ್ಯವಾದಿ ಸಮಾಜದಲ್ಲಿ ಮರ್ದಿಸಲ್ಪಡುವ ಜನಾಂಗಗಳಿಲ್ಲ. ಮೈಬಣ್ಣ ಇಲ್ಲವೆ ಜನಾಂಗ ಭಿನ್ನತೆಯಿಂದಾಗಿ ಯಾರನ್ನೂ ಮೇಲು ಕೀಳೆಂದು ಭಾವಿಸುವುದಿಲ್ಲ. ಪ್ರತಿಯೊಂದು ರಾಷ್ಟ್ರೀಯ ಪಂಗ ಡಕ್ಕೂ ತನ್ನ ಆರ್ಥಿಕ ಸಂಪತ್ತನ್ನು ಹೆಚ್ಚಿಸಲು ಹಾಗೂ ಕಲೆ ಸಾಹಿತ್ಯಗಳ ಪರಂಪರೆಯನ್ನು ಬೆಳೆಸಲು ಪ್ರೋತ್ಸಾಹ ಸಿಗುವುದು.

ಪ್ರಜಾಪ್ರಭುತ್ವವೆಂದರೆ ಐದು ವರ್ಷಗಳಿಗೊಮ್ಮೆ ಪ್ರತಿನಿಧಿಯನ್ನು ಆರಿಸಿ ನ್ಯಾಯ ವಿಧಾಯಕ ಸಭೆಗೆ ಕಳುಹಿಸುವುದಷ್ಟೇ ಅಲ್ಲ. ಕಾರ್ಖಾ ನೆಯಲ್ಲಿ, ತಮ್ಮ ವಸತಿಯ ವಿಭಾಗದಲ್ಲಿ, ಜೀವನದ ಪ್ರತಿಯೊಂದು ಕ್ಷೇತ್ರ ದಲ್ಲಿ ಪುರುಷರೂ ಸ್ತ್ರೀಯರೂ ತಮ್ಮೆಲ್ಲರ ಜೀವನವನ್ನು ಹಾಗೂ ದೇಶದ ಭವಿಷ್ಯತ್ತನ್ನು ರೂಪಿಸುವರು. ಬೇರೆಲ್ಲಿ ಇರುವುದಕ್ಕಿಂತಲೂ ಇದು ಹೆಚ್ಚಿನ ನಿಜವಾದ ಪೂರ್ಣ ಪ್ರಜಾಪ್ರಭುತ್ವ.

ನಗರ ಹಳ್ಳಿಗಳೊಳಗಿನ ವ್ಯತ್ಯಾಸವೂ ನಿರ್ನಾಮವಾಗುವುದು. ಹಳ್ಳಿಗಳಲ್ಲಿರುವ ಕೂಲಿಕಾರರು ಯಂತ್ರಗಳನ್ನು ಉಪಯೋಗಿಸಲು ಕಲಿತು ನಗರದ ಕಾರ್ಮಿಕರ ಮಟ್ಟಕ್ಕೆ ಬರುವರು. ಹಿಂದೆ ನಗರಗಳಲ್ಲಿ ಮಾತ್ರ ಸಿಗು ತ್ತಿದ್ದ ವಿದ್ಯಾಭ್ಯಾಸದ ಹಾಗೂ ಸಾಂಸ್ಕೃತಿಕ ಸೌಕರ್ಯಗಳು ಈಗ ಹಳ್ಳಿಗಳಲ್ಲೂ ಸಿಗುವುವು. ಸಾಮ್ಯವಾದ ಪ್ರಾಪಂಚಿಕ ಅವಶ್ಯತೆಗಳನ್ನು ಪೂರೈಸುತ್ತದೆ. ಈ ತಳಹದಿಯ ಮೇಲೆ ಸ್ತ್ರೀಪುರುಷರ ದೃಷ್ಟಿಕೋನದಲ್ಲೂ ದೊಡ್ಡ ಬದಲಾ ವಣೆಗಳಾಗುತ್ತವೆ. ಅವರು "ಪರಿಪೂರ್ಣ ಬೆಳವಣಿಗೆಯ, ಪರಿಪೂರ್ಣ ಶಿಕ್ಷಣವಿರುವ, ಎಲ್ಲವನ್ನೂ ಮಾಡಲು ಸಮರ್ಥರಾದ" ಮನುಷ್ಯರಾಗುವರು.

ಎಲ್ಲದಕ್ಕಿಂತಲೂ ಹೆಚ್ಚಾಗಿ, ಭಂಡವಳಶಾಹಿಯು ಬೆಳೆಸಿದ್ದ ಸ್ವಾರ್ಥದ, ವೈಯಕ್ತಿಕ ದೃಷ್ಟಿಕೋನವು ಹೋಗಿ, ಸಾಮಾಜಿಕ--ಸಮಾಜದ ಬಗ್ಗೆ ಜವಾಬ್ದಾರಿ ಇರುವ ದೃಷ್ಟಿಕೋನ ಬರುವುದು. ಮಾರ್ಕ್ಸ್ ಹೇಳಿರುವಂತೆ, " ದುಡಿತ ಜೀವನಕ್ಕೊಂದು ಸಾಧನವಷ್ಟೇ ಅಲ್ಲ, ಜೀವನದ ಮೊದಲ ಅವಶ್ಯತೆಯೇ " ಆಗುವುದು. ಸಮಾಜದ ಆ ಘಟ್ಟದಲ್ಲಿ ಸಮತಾವಾದಿ ಸಮಾಜದಲ್ಲಿ, ದುಡಿಯಲು ಪ್ರೋತ್ಸಾಹ ಇಲ್ಲವೆ ಪ್ರೇರಣೆ ಇರುವುದಿಲ್ಲ; ಆಗಿನ ಸ್ತ್ರೀ ಪುರುಷರಿಗೆ ಸಮಾಜದ ಹೆಚ್ಚಿನ ಏಳಿಗೆಗಾಗಿ ದುಡಿಯುವುದರ ಹೊರತು ಬೇರೆ ದೃಷ್ಟಿಕೋನವಿರುವುದಿಲ್ಲ

ಇದು ಬರೇ ಕನಸೆ? ಮಾರ್ಕ್ಸ್‌ವಾದದ ಭೌತಿಕವಾದಿ ತಳಹದಿಯನ್ನು ತಿಳಿಯದವರು ಇದು ಕನಸೆಂದು ಹೇಳಬಹುದು. ಸದಾ ಕಾಲ ಬದಲದೇ ಇರುವ ನಿರ್ದಿಷ್ಟ ಗುಣಪ್ರಕಾರಗಳಾಗಲೀ ದೃಷ್ಟಿಕೋನವಾಗಲೀ ಮಾನವ ಜೀವಿಗಳಿಗೆ ಇಲ್ಲ. ಪುರಾತನದ ಕಾಡು ಸಮಾಜದಲ್ಲೂ ತಮ್ಮ ಜಾತಿಯ ಬಗ್ಗೆ ಜವಾಬ್ದಾರಿಕೆ ಇತ್ತು. ಅನಂತರದ ಸಮಾಜದಲ್ಲಿ, ವರ್ಗ ವಿಭಾಗಗಳಾದ ಮೇಲೆ, ಸಾಮಾಜಿಕ ಜವಾಬ್ದಾರಿಕೆಯ ಭಾವನೆ ಮುರಿಯಿತು; ಆವರೆ ವರ್ಗ ಜವಾಬ್ದಾರಿಕೆಯ ಭಾವನೆ ಕಂಡು ಬಂತು. ಭಂಡವಳಶಾಹಿ ಸಮಾಜದಲ್ಲಿ ಸಾಮಾಜಿಕ ಜವಾಬ್ದಾರಿಕೆ ಲವಲೇಶವೂ ಇಲ್ಲದಾಗುತ್ತದೆ. ಆ ಪದ್ಧತಿಯಿಂದಾಗಿ " ತನ್ನಷ್ಟಕ್ಕೆ ತಾನು " ಎನ್ನುವುದು ಜೀವನದ ಪ್ರಧಾನ ತತ್ವವಾಗುತ್ತದೆ.

ಆದರೆ ಭಂಡವಳಶಾಹಿ ಸಮಾಜದಲ್ಲೂ ಕೂಲಿಕಾರರೊಳಗೆ " ಸೌಹಾರ್ದ " ಎಂಬುದಿದೆ. ಅವರ ಪ್ರಾಪಂಚಿಕ ಸ್ಥಿತಿಗತಿಗಳ ದುಡಿತದ ಏಕರೀತಿಯಿಂದಾಗಿ ಆ ಭಾವನೆ ತಾನಾಗಿಯೇ ಹುಟ್ಟಿತು. ಯಾವ ಸಾಮಾಜಿಕ ಇಲ್ಲವೆ ಸಾಮೂಹಿಕ ಜವಾಬ್ದಾರಿಕೆಯೂ ಇಲ್ಲದ 'ವ್ಯಕ್ತಿಪ್ರಾಧಾನ್ಯ'ದ ಮನುಷ್ಯನೆಂದರೆ ಭಂಡವಳಗಾರ. ಅವನ ಸುತ್ತೂ ಅದೇ ಜಾತಿಯ ಬೇರೆ ಕೆಲವರು ಇರುತ್ತಾರೆ. ಒಬ್ಬರನ್ನೊಬ್ಬರು ಕೊಂದು ತಾವು ಉಳಿಯಲು ಯತ್ನಿಸುವುದೇ ಅವರ ಕೆಲಸ. ಈ ಮರ್ದಕವರ್ಗದಲ್ಲಿ ಸೌಹಾರ್ದದ ಬದಲು ಸ್ಪರ್ಧೆಯನ್ನು ಕಾಣಬಹುದು. ಈ ಜಾಡ್ಯ ಕೂಲಿಗಾರವರ್ಗಕ್ಕೂ ಅಂಟುವುದು ಅಸಾಧ್ಯವಲ್ಲ. ಕೂಲಿಗಾರರಲ್ಲಿ ಒಂದು ವಿಭಾಗವನ್ನು ಭಂಡ

ವಳಗಾರರು ತಮ್ಮ ಪ್ರೀತಿಪಾತ್ರರನ್ನಾಗಿ ಮಾಡುವುದು ಸಾಧ್ಯವಾಗುತ್ತದೆ. ಆದರೆ ಯಾವುದೇ ವರ್ಗದ ಮೂಲ ತಳಹದಿ, ಇಲ್ಲವೆ ದೃಷ್ಟಿಕೋನ, ಆಯಾ ವರ್ಗದ ಜೀವನದ ಪ್ರಾಪಂಚಿಕ ಸ್ಥಿತಿಗತಿ ಹಾಗೂ ಜೀವನ ನಿರ್ವಹಣದ ಹಾದಿಯನ್ನು ಅವಲಂಬಿಸಿದೆ.

ಪ್ರಾಪಂಚಿಕ ಸ್ಥಿತಿಗತಿಗಳನ್ನೂ ಜೀವನ ನಿರ್ವಹಣದ ಕ್ರಮವನ್ನೂ ಬದಲಾಯಿಸುವುದರಿಂದ ಜನರ ದೃಷ್ಟಿಕೋನವನ್ನು ಬದಲಿಸಬಹುದೆಂಬುದು ಸ್ಪಷ್ಟವಾಯಿತು. ಸೋವಿಯೆಟ್ ಯೂನಿಯನಿನ ಕೃಷಿಕ ವರ್ಗದ ದೃಷ್ಟಿಕೋನದಲ್ಲಾಗಿರುವ ಬದಲಾವಣೆಗಿಂತ ಉತ್ತಮ ಉದಾಹರಣೆಯಿಲ್ಲ. ಜಾರ್ ಚಕ್ರವರ್ತಿಯ ಕಾಲದಲ್ಲಿದ್ದ ಕೃಷಿಕ, ವೈಯಕ್ತಿಕ ಸ್ವಾರ್ಥಿಯೆಂದು ಎಲ್ಲಗೂ ಒಪ್ಪಿದ್ದಾರೆ. ಕ್ರಾಂತಿಯನ್ನು ಟೀಕಿಸುತ್ತಿದ್ದವರು, ಕೃಷಿಕನನ್ನು ಸಾಮ್ಯವಾದಿಯಾಗಿ ಮಾಡುವುದು ಸಾಧ್ಯವೇ ಇಲ್ಲ, ಕೃಷಿಕವರ್ಗವೇ ಕ್ರಾಂತಿಯನ್ನು ಮುರಿಯುವುದು—ಎನ್ನುತ್ತಿದ್ದರು. ಆದರೆ ಕೃಷಿಕರು ಸಾಮ್ಯವಾದವನ್ನು ಒಪ್ಪಿಕೊಂಡದ್ದು ಮಾನಸಿಕ ಪರಿವರ್ತನೆಯಿಂದಲೂ ಅಲ್ಲ; ಒತ್ತಾಯದಿಂದಲೂ ಅಲ್ಲ. ಒಂದು ಮಾದರಿ ಹೊಲ, ಹತ್ತಿರದಲ್ಲೇ ಟ್ರಾಕ್ಟರ್ [ಹೊಲಯಂತ್ರ] ಸ್ಟೇಶನು, ಸಾಮೂಹಿಕ ವಿಧಾನಗಳಿಂದಾಗುವ ಉತ್ತಮ ಬೆಳೆ ಇಷ್ಟನ್ನೂ ಪ್ರಾಯೋಗಿಕವಾಗಿ ನೋಡಿದ ಮೇಲೆ ಸಾಮ್ಯವಾದದ ಬಗ್ಗೆ ಅವರು ಏನು ಅಭಿಪ್ರಾಯ ಪಡುವರೆಂಬುದನ್ನು ಮಾರ್ಕ್ಸ್‌ವಾದಿಗಳಲ್ಲದ ಟೀಕಾಕಾರರು ತಿಳಿಯುವುದಿಲ್ಲ.

ಯಾವ ದೇಶದಲ್ಲೇ ಆಗಲಿ, ಸಾಮ್ಯವಾದಿ ಉತ್ಪಾದನೆಯೂ ವಿತರಣವೂ ದೃಢ ಆಧಾರವಾದಾಗ, ಸಮಾಜಕ್ಕಾಗಿ ಎಲ್ಲರೂ ಒಂದಾಗಿ ದುಡಿಯುವುದರಿಂದಲೇ ನಿರ್ವಹಣವು ಸಾಧ್ಯವಾದಾಗ, ಸಾಮಾಜಿಕ ಜವಾಬ್ದಾರಿಕೆ ತನ್ನಷ್ಟಕ್ಕೆ ತಾನೇ ಬೆಳೆಯುವುದು. ಸಾಮಾಜಿಕ ತತ್ವ ಸರಿಯೆಂದು ಆಗಲೂ ಜನರಿಗೆ ವಿವರಿಸಿ ಹೇಳಬೇಕಾದ ಅವಶ್ಯತೆ ಇಲ್ಲ. "ಮಾನವ ಸ್ವಭಾವ"ದ ಹುಟ್ಟು ಗುಣಗಳನ್ನು ಕಿತ್ತು, ಅಸ್ಪಷ್ಟ ನೈತಿಕ ಧರ್ಮಗಳನ್ನು ಮನಗಾಣಿಸಬೇಕಾದ್ದಿಲ್ಲ; ಪ್ರಯೋಗದಿಂದ, ಅಭ್ಯಾಸದಿಂದ, ಮಾನವ ಸ್ವಭಾವ ತಾನಾಗಿಯೇ ಬದಲಾಗುವುದು.

ಈ ವರೆಗೆ ಸಾಮ್ಯವಾದಿ ಇಲ್ಲವೆ ಸಮತಾವಾದಿ ಸಮಾಜವು ಲೋಕ

ದಲ್ಲೆಲ್ಲ ಸ್ಥಾಪಿತವಾಗುವ ವಿಚಾರ ನಾವು ಮಾತಾಡಿಲ್ಲ. ಆದರೆ ಸಾಮ್ಯ ವಾದಿ ಸಮಾಜದಿಂದಾಗಿ ಮುಂದೆ ಯುದ್ಧಗಳೇ ಇರಲಾರವೆಂದು ಮಾರ್ಕ್ಸ್ ಹೇಳಿದ್ದಾನೆ. ಪ್ರತಿ ದೇಶದಲ್ಲೂ ಸಾಮ್ಯವಾದಿ ತಳಹದಿಯ ಮೇಲೆ ಉತ್ಪಾದನ ಮತ್ತು ವಿತರಣವಾದರೆ, ಇತರ ದೇಶಗಳನ್ನು ಗೆಲ್ಲಬೇಕೆಂಬ ಇಚ್ಛೆ ಇರುವ ಜನ ವಿಭಾಗ ಯಾವ ದೇಶದಲ್ಲೂ ಇರಲಾರದು. ಮುಂದು ವರಿದ ಔದ್ಯೋಗಿಕ ಸಾಮ್ಯವಾದಿ ರಾಷ್ಟ್ರ ಶಕ್ತಿಪ್ರಯೋಗಿಸಿ, ಹಿಂದುಳಿದ ರಾಷ್ಟ್ರವನ್ನು ಗೆಲ್ಲಬಹುದೆಂಬುದರಲ್ಲಿ ಅರ್ಥವಿಲ್ಲ. ಸಾಮ್ಯವಾದಿ ಪದ್ಧತಿ ಯನ್ನು ಹಿಂದುಳಿದ ರಾಷ್ಟ್ರಕ್ಕೆ ವಿಸ್ತರಿಸಿದರೆ ಮುಂದುವರಿದ ಸಾಮ್ಯ ವಾದಿ ರಾಷ್ಟ್ರದ ಜೀವನ ಮಟ್ಟ ಇಳಿಯಬೇಕಾಗುವುದು. ಪುನಃ ಇದು— ನೀತಿಯ ಮಾತಲ್ಲ. ಸಾಮ್ಯವಾದಿ ಸಮಾಜಗಳು ಯುದ್ಧ ಹೂಡುವುದಿಲ್ಲ. ಏಕೆಂದರೆ ಅವುಗಳಾಗಲೀ ಅಥವಾ ಅಲ್ಲಿರುವ ಬೇರೆ ಯಾವ ಪಂಗಡಗಳಾ ಗಲೀ ಯುದ್ಧದಿಂದ ಲಾಭ ಪಡೆಯುವಂತಿಲ್ಲ.

ಅದೇ ಕಾರಣಕ್ಕಾಗಿ ಯಾವುದಾದರೂ ಹಿಂದುಳಿದಿರುವ ರಾಷ್ಟ್ರವನ್ನು ಹಾಗೆಯೇ ಇರಿಸಬೇಕೆಂದು ಯಾವ ಸಾಮ್ಯವಾದಿ ರಾಷ್ಟ್ರವೂ ಇಚ್ಛಿಸುವು ದಿಲ್ಲ. ಅದಕ್ಕೆ ವಿರುದ್ಧವಾಗಿ, ಉದ್ಯಮದಲ್ಲೂ ಸಾಂಸ್ಕೃತಿಕ ಮಟ್ಟದಲ್ಲೂ ಪ್ರತಿಯೊಂದು ರಾಷ್ಟ್ರ ಬೆಳೆದಷ್ಟೂ, ಉಳಿದೆಲ್ಲ ಸಾಮ್ಯವಾದಿ ರಾಷ್ಟ್ರಗಳಿಗೆ ಅದರಿಂದ ಒಳ್ಳೆಯದೇ; ಲೋಕದಲ್ಲೆಲ್ಲಾ ಜೀವನ ಮಟ್ಟ ಏರುವುದು — ಜೀವನ ಸಾರವತ್ತಾಗುವುದು. ಆದುದರಿಂದ ಮುಂದುವರಿದ ಔದ್ಯೋಗೀ ಕರಣವಿರುವ ಸಾಮ್ಯವಾದಿ ರಾಷ್ಟ್ರಗಳು, ಹಿಂದುಳಿದಿರುವ ರಾಷ್ಟ್ರಗಳು ಬೆಳೆ ಯಲು ನೆರವಾಗುವುವು: ಅವು ಹಿಂದುಳಿಯುವಂತೆಯೇ ಮಾಡಲು ಯತ್ನಿ ಸುವುದಿಲ್ಲ; ಶೋಷಿಸುವುದಂತೂ ಇಲ್ಲವೇ ಇಲ್ಲ.

ಅಂಥ ಜಾಗೃತಿಕ ಸಾಮ್ಯವಾದಿ ಸಮಾಜದಲ್ಲಿ ಮನುಷ್ಯ ಎಷ್ಟರ ಮಟ್ಟಿಗೆ ಪ್ರಗತಿ ಹೊಂದಬಲ್ಲನೆಂಬುದು ಊಹೆಗೂ ಸಿಲುಕದ ವಿಷಯ.

ಈ ಪ್ರಗತಿ ಯಾವ ಗುರಿಯತ್ತ? ಮಾರ್ಕ್ಸ್ ಆ ಬಗ್ಗೆ ಭವಿಷ್ಯ ಹೇಳಲಿಲ್ಲ. ಶಾಸ್ತ್ರೀಯವಾದ ಭವಿಷ್ಯತ್‌ಕಥನಕ್ಕೆ ಪರಿಸ್ಥಿತಿಗಳೂ ಏನೇನೂ ಸ್ಪಷ್ಟವಾಗಿರಲಿಲ್ಲ. ಆದರೆ ಇಷ್ಟನ್ನು ಹೇಳಬಹುದು: ಲೋಕದಲ್ಲೆಲ್ಲ ಸಮತಾವಾದದ ಸ್ಥಾಪನೆಯಾಗುವುದರೊಡನೆ ಮಾನವನ, ಮಾನವನ

ಇತಿಹಾಸದ ವರ್ಗವಿಭಾಗ ವರ್ಗಸಮರಗಳ ದೀರ್ಘ ಅಧ್ಯಾಯ ಮುಕ್ತಾಯವಾಗುವುದು. ಮತ್ತೆ ವರ್ಗವಿಭಾಗಗಳಾಗುವುದಿಲ್ಲ.

ಮನುಷ್ಯನ ಉತ್ಪಾದನೆ ಅತ್ಯಲ್ಪವಾಗಿದ್ದ ಕಾಲದಲ್ಲಿ ವರ್ಗವಿಭಾಗವಾದುದರಿಂದ, ಹೆಚ್ಚಿನ ಉತ್ಪಾದಕ ಶಕ್ತಿಗಳನ್ನು ಸಂಶೋಧಿಸುವವರೂ ಸಿದ್ಧತೆಗೊಳಿಸುವವರೂ ಹುಟ್ಟಿದರು. ವರ್ಗ ವಿಭಜನೆ ಈ ಕೆಲಸವನ್ನು ಮಾಡುತ್ತ ಹೋಯಿತು. ಭಂಡವಳಶಾಹಿಯ ಕೆಳಗೆ ಉತ್ಪಾದನ ಒಂದೇ ಕಡೆ ಸಂಗ್ರಹವಾಗುವುದಕ್ಕೂ ತಾಂತ್ರಿಕ ನೈಪುಣ್ಯದ ಹೆಚ್ಚಿನ ಸುಧಾರಣೆಯಾಗುವುದಕ್ಕೂ ವರ್ಗವಿಭಜನೆ ಸಹಾಯಕವಾಯಿತು.

ವಿಸ್ತೃತ ಉತ್ಪಾದಕ ಶಕ್ತಿಗಳಿದ್ದು ದಿನದಲ್ಲಿ ಬರೇ ಎರಡು ಗಂಟೆ ಮಾತ್ರ ದುಡಿಯುವುದು ಅವಶ್ಯವಾಗುವ ಮಟ್ಟಕ್ಕೆ ತಲಪಿದಾಗ ವರ್ಗ ವಿಭಜನೆ ಮುಕ್ತಾಯವಾಗುವುದು, ಮುಕ್ತಾಯವಾಗಲೇ ಬೇಕು. ಆ ಸಂಧಿಯ ಅನಂತರ ಪ್ರಕೃತಿಯೊಡನೆ ಇರುವ ತನ್ನ ಹೋರಾಟವನ್ನು ಮನುಷ್ಯ ಸಾಮರ್ಥ್ಯದಿಂದ ಮುಂದುವರಿಸುವನು. ಮಂತ್ರ ತಂತ್ರಗಳಿಂದ ಪ್ರಕೃತಿಯನ್ನು ಗೆಲ್ಲುವುದು, ಸ್ವಾಭಾವಿಕ ದುರಂತಗಳನ್ನು ಪ್ರಾರ್ಥನೆಯಿಂದ ತಪ್ಪಿಸುವುದು, ಕತ್ತಲೆಯ ಹಾದಿಯಲ್ಲಿ ಕುಂಟುತ್ತ ಸಾಗುವುದು-ಹೀಗೆ ಮಾಡದೆ, ಆತ್ಮ ವಿಶ್ವಾಸದಿಂದ, ಪ್ರಕೃತಿಯ ಶಕ್ತಿಗಳನ್ನು ನಿಯಂತ್ರಿಸಿ, ಮುಂದೆ ಸಾಗುವವನೇ ಮಾರ್ಕ್ಸ್ ಚಿತ್ರಿಸಿದ ಸಮತಾವಾದಿ ಸಮಾಜದ ಮಾನವ.

೭

## ಪ್ರಕೃತಿಯ ಬಗ್ಗೆ ಮಾರ್ಕ್ಸ್‌ವಾದಿ ದೃಷ್ಟಿಕೋನ

ಮಾನವ ಜೀವಿಗಳನ್ನೂ ಆದುದರಿಂದ ಮಾನವ ಸಮಾಜವನ್ನೂ ಪ್ರಕೃತಿಯ ಒಂದಂಶವಾಗಿ ಮಾರ್ಕ್ಸ್‌ವಾದ ಭಾವಿಸುತ್ತದೆಂದು ಮೊದಲೇ ಹೇಳಿದೆ. ಆದುದರಿಂದ ಮಾನವನ ಮೂಲವನ್ನು ಲೋಕದ ಬೆಳವಣಿಗೆಯಲ್ಲಿ ಕಾಣಬಹುದು. ಜೀವನದ ಹಿಂದಿನ ರೂಪಗಳಿಂದ ಬದಲಾಗುತ್ತಾ ಮನುಷ್ಯ ಬೆಳೆಯುತ್ತ ಬಂದ ಹಾಗೆ ವಿಕಾಸವಾಗುತ್ತಿರುವಾಗಲೇ ವಿಚಾರವೂ ಬೋಧಪೂರ್ಣ ಕಾರ್ಯಚರಣೆಯೂ ಹುಟ್ಟಿದುವು. ಅಂದರೆ,

ಬೋಧಪೂರ್ಣ ವಾಸ್ತವತೆಯಾದ ವಸ್ತು, ಬೋಧಪೂರ್ಣವಲ್ಲದ ವಾಸ್ತವತೆಯಾದ ಮನಸ್ಸಿಗಿಂತ ಮೊದಲೇ ಇತ್ತು. ಅಂದರೆ ಬಾಹ್ಯವಾಸ್ತವತೆಯಾದ ವಸ್ತು ಮನಸ್ಸಿಗಿಂತ ಪ್ರತ್ಯೇಕವಾಗಿ ಇರುತ್ತದೆಂಬುದೂ ಸ್ಪಷ್ಟವಾಯಿತು. ಪ್ರಕೃತಿಯನ್ನು ಈ ರೀತಿ ಕಾಣುವುದಕ್ಕೆ "ಭೌತಿಕವಾದ"ವೆಂದು ಹೆಸರು.

ಇದಕ್ಕೆ ವಿರುದ್ಧವಾದ ದೃಷ್ಟಿಕೋನವೆಂದರೆ, ಬಾಹ್ಯ ಜಗತ್ತು ನಿಜವಲ್ಲ–ಮಾಯೆ, ಅದು ಇರುವುದು ಮನಸ್ಸಿನಲ್ಲಿ ಅಥವಾ ಯಾವುದೋ ಅತಿ ಹಿರಿಯ ಜೀವನದಲ್ಲಿ ಮಾತ್ರ, ಎನ್ನುವುದು; ಇದು ಕಲ್ಪನಾವಾದ. ಕಲ್ಪನಾವಾದದಲ್ಲಿ ಹಲ ರೂಪಗಳಿವೆ. ಆದರೆ ಎಲ್ಲವೂ, ಮಾನವೀಯವಿರಲಿ ದೈವಿಕವಿರಲಿ, ಮನಸ್ಸೇ ಮುಖ್ಯ. ವಾಸ್ತವತೆ, ಮತ್ತು ವಸ್ತು–ಅದಕ್ಕೇನಾದರೂ ವಾಸ್ತವತೆ ಇದ್ದರೆ–ಪ್ರಾಧಾನ್ಯದಲ್ಲಿ ಎರಡನೆಯದು.

ಎಂಗೆಲ್ಸ್ ಹೇಳುವಂತೆ, ಮಾರ್ಕ್ಸ್‌ವಾದಿಗಳಿಗೆ, "ಭೌತಿಕವಾದಿ ಜಾಗತಿಕ ದೃಷ್ಟಿಕೋನವು ಇದಕ್ಕಿದ್ದಂತೆ ಇರುವ ಪ್ರಕೃತಿಯ ಒಂದು ಸರಳ ಸುಸ್ಪಷ್ಟ ನೋಟ." ಬಾಹ್ಯ ಜಗತ್ತು ವಾಸ್ತವವಾದುದು. ನಮಗೆ ತಿಳಿದಿರಲಿ, ತಿಳಿಯದೇಇರಲಿ, ಅದು ಸ್ವತಂತ್ರವಾಗಿ ಇದ್ದೇ ಇರುವುದು. ಮನಸ್ಸಿಗೆ ಅದರ ಮೇಲೆ ನಿಯಂತ್ರಣವಿಲ್ಲ. ಅದರ ಚಲನವೂ ಬೆಳವಣಿಗೆಯೂ ಕೆಲನಿಯಮಗಳಿಗೆ ಅನುಸಾರವಾಗಿ ನಡೆಯುತ್ತವೆ ಆ ನಿಯಮಗಳನ್ನು ಕಂಡುಹಿಡಿದು ಉಪಯೋಗಿಸುವುದು ಮನುಷ್ಯನಿಗೆ ಸಾಧ್ಯವಿದೆ.

ಬಾಹ್ಯವಾಸ್ತವತೆಯಾದ ವಸ್ತುವಿಗೆ–ಅದರಲ್ಲಿ ನಿಜಕ್ಕೂ ಏನಾದರೂ ವಾಸ್ತವತೆ ಇದ್ದರೂ–ಪ್ರಾಧಾನ್ಯ ಎರಡನೆಯದೆಂದು ಕಲ್ಪನಾವಾದ ಹೇಳುವುದರಿಂದ, ವಾಸ್ತವತೆ ಏನೆಂಬುದನ್ನು, ಲೋಕದ ಚಿತ್ರವಿಚಿತ್ರಗಳು ಹೇಗಿವೆಯೆಂಬುದನ್ನು ನಾವು ತಿಳಿಯಲಾರೆವೆಂದು ಕಲ್ಪನಾವಾದ ಹೇಳುತ್ತದೆ.

ಭೌತಿಕವಾದ ಮತ್ತು ಕಲ್ಪನಾವಾದದ ಈ ಚರ್ಚೆಗೆ ಪ್ರಾಧಾನ್ಯ ಯಾಕೆ? ಯಾಕೆಂದರೆ ಅದು ಬರೇ ಊಹೆಯ ಮತ್ತು ಅಸ್ಪಷ್ಟ ವಿಚಾರದ ಪ್ರಶ್ನೆಯಲ್ಲ. ಸರಿಯಾಗಿ ಪೃಥಕ್ಕರಣ ಮಾಡಿ ನೋಡಿದರೆ ಅದು ಪ್ರಾಯೋಗಿಕ ಕಾರ್ಯಾಚರಣೆಯ ಪ್ರಶ್ನೆ. ಬಾಹ್ಯಪ್ರಕೃತಿಯನ್ನು ಮನುಷ್ಯ ಬರೇ

ನೋಡುತ್ತ ಇರುವುದಿಲ್ಲ. ಅದನ್ನು ಬದಲಿಸುತ್ತಾನೆ, ಜತೆಯಲ್ಲಿ ತಾನೂ ಬದಲಾಗುತ್ತಾನೆ.

ಎರಡನೆಯದಾಗಿ, ಭೌತಿಕವಾದಿ ದೃಷ್ಟಿಕೋನವೆಂದರೆ, ಮನುಷ್ಯರ ಮನಸ್ಸಿನಲ್ಲಿರುವುದು, ಮನಸ್ಸು ತಿಳಿದಿರುವುದು, ಬಾಹ್ಯವಾಸ್ತವತೆ ಎಂದರ್ಥ. ಭಾವನೆಗಳೆಲ್ಲ ವಾಸ್ತವತೆಯ ಪ್ರತಿಬಿಂಬಗಳು, ಅವುಗಳ ಮೂಲವೆಲ್ಲ ಬಾಹ್ಯ ವಾಸ್ತವತೆಯಲ್ಲಿದೆ. ಹಾಗೆಂದೊಡನೆ ಎಲ್ಲಾ ವಿಚಾರಗಳು ಸತ್ಯವೆಂದೂ ವಾಸ್ತವತೆಯ ಪ್ರತಿಬಿಂಬಗಳೆಂದೂ ಹೇಳುವಂತಿಲ್ಲ. ವಾಸ್ತವತೆಯ ನಿಜವಾದ ಅನುಭವದಿಂದ ಅವುಗಳು ತಪ್ಪೋ ಸರಿಯೋ ಎಂಬುದು ಗೊತ್ತಾಗುವುದು.

ಇದಕ್ಕೆ ಬದಲಾಗಿ ಕಲ್ಪನಾವಾದಿ ಸದಾ ಕಾಲ ಸತ್ಯವಾಗಿರುವ ತತ್ವಗಳನ್ನು ನಂಬುತ್ತಾನೆ; ವಾಸ್ತವತೆಗೆ ಅವನ್ನು ಸರಿಹೊಂದಿಸಲು ಯತ್ನಿಸುವುದಿಲ್ಲ. ಇದಕ್ಕೊಂದು ಈಗಿನ ಉದಾಹರಣೆಯೆಂದರೆ ಯುದ್ಧಕ್ಕೆ ಪರಿಪೂರ್ಣ ವಿರೋಧ. ಪರಿಪೂರ್ಣ ಯುದ್ಧ ವಿರೋಧಿ ತನ್ನ ಸುತ್ತಲಿನ ಲೋಕವನ್ನು ಪರಿಗಣಿಸುವುದೇ ಇಲ್ಲ; ವಾಸ್ತವವಾಗಿ, ನಿಜವಾದ ಅನುಭವದಲ್ಲಿ, ಬರೀ ಆಸೆ-ಕಲ್ಪನೆಯಿಂದ ಶಕ್ತಿಯನ್ನು ಸೋಲಿಸುವುದು ಸಾಧ್ಯವಿಲ್ಲವೆಂದು ಗೊತ್ತಿದ್ದರೂ ಅದನ್ನು ಆತ ಒಪ್ಪುವುದಿಲ್ಲ. ವಾಸ್ತವವಾಗಿ, ದಿನನಿತ್ಯದ ಅನುಭವದಲ್ಲಿ, ಶಕ್ತಿಯನ್ನು ವಿರೋಧಿಸದೇ ಇರುವುದರಿಂದ ಮತ್ತಷ್ಟು ಶಕ್ತಿಯ ಉಪಯೋಗವಾಗಿ ಮರ್ದನ-ಕ್ರೌರ್ಯ ಹೆಚ್ಚುವುವೆಂದು ಆತ ತಿಳಿಯುವುದಿಲ್ಲ.

ಮಾರ್ಕ್ಸ್‌ವಾದ, ತನ್ನ ಸಿದ್ಧಾಂತಗಳನ್ನೆಲ್ಲ ಲೋಕದ ಬಗ್ಗೆ ಇರುವ ಭೌತಿಕವಾದಿ ಗ್ರಹಿಕೆಯ ಮೇಲೆ ರೂಪಿಸುತ್ತದೆ. ಆ ನೆಲೆಯಿಂದ ಮಾರ್ಕ್ಸ್‌ವಾದ ಲೋಕವನ್ನು ಪರೀಕ್ಷಿಸುತ್ತದೆ; ಲೋಕವನ್ನು ನಡೆಸುವ ನಿಯಮಗಳನ್ನು ಕಂಡುಹಿಡಿಯಲು ಯತ್ನಿಸುತ್ತದೆ; ಮನುಷ್ಯನೂ ವಾಸ್ತವತೆಯ ಒಂದಂಶವಾಗಿರುವುದರಿಂದ, ಮಾನವ ಸಮಾಜದ ಚಲನವಲನಗಳಿಗೆ ಕಾರಣವಾದ ನಿಯಮಗಳನ್ನು ಕಂಡುಹಿಡಿಯುವುದಕ್ಕೂ ಪ್ರಯತ್ನಿಸುತ್ತದೆ. ತನ್ನ ಶೋಧನೆ-ತೀರ್ಮಾನಗಳನ್ನೆಲ್ಲ, ನಿಜವಾದ ಅನುಭವದ ಒರೆಗಲ್ಲಿಗೆ ಹಚ್ಚಿ ನೋಡುತ್ತದೆ. ನಿಜಸ್ಥಿತಿಗೆ ಸರಿಹೋಗದಿರುವುದನ್ನು

ಸರಿಪಡಿಸುತ್ತದೆ ಇಲ್ಲವೆ ತಿರಸ್ಕರಿಸುತ್ತದೆ. ಮಾರ್ಕ್ಸ್‌ವಾದಿ ದೃಷ್ಟಿಕೋನ ಯಾವಾಗಲೂ ಶಾಸ್ತ್ರೀಯವಾದುದು. ಯಾವನಾದರೊಬ್ಬ ಬುದ್ಧಿವಂತ ವಿಚಾರಿಯು ಕಂಡುಹಿಡಿದ ಪದ್ಧತಿಯಲ್ಲ. ಇದರಿಂದಾಗಿ, ಲೋಕವನ್ನು ಭೌತಿಕವಾದಿಯಾಗಿ ಅದು ಕಾಣುವುದಷ್ಟೇ ಅಲ್ಲ; 'ದ್ವಂದ್ವಮಾನ' ವೆಂದು ಹೇಳಬಹುದಾದ ಕೆಲವು ಗುಣಗಳನ್ನು ಲೋಕದಲ್ಲಿ ಅದು ಕಾಣುತ್ತದೆ. "ದ್ವಂದ್ವಮಾನ ಭೌತಿಕವಾದ" ಎಂಬ ಪದಪ್ರಯೋಗ ಲೋಕದ ಬಗ್ಗೆ ಮಾರ್ಕ್ಸ್‌ವಾದಿ ಗ್ರಹಿಕೆಯನ್ನು ಹೇಳುತ್ತದೆ. ಇದೊಂದು ಅರ್ಥವಾಗದ ವಿಚಿತ್ರ ಎಂಬ ಭಾವನೆ ಸಾಮಾನ್ಯವಾಗಿ ಇದೆ. ಆದರೆ ಅದು ಸರಿಯಲ್ಲ. ಎಲ್ಲರೂ ಒಪ್ಪುವಂಥ ಸಾಮಾನ್ಯ ವಸ್ತುಗಳನ್ನು ತೋರಿಸಿ "ದ್ವಂದ್ವ ಮಾನ" ಎಂಬ ಪದವನ್ನು ವಿವರಿಸುವುದು ಸಾಧ್ಯವಿದೆ.

ಮೊದಲಾಗಿ, ಮಾನವ ಸಮಾಜವನ್ನೂ ಸೇರಿ, ಪ್ರಕೃತಿಯಾಗಲಿ ಲೋಕವಾಗಲಿ, ತೀರ ಪ್ರತ್ಯೇಕ ಸ್ವತಂತ್ರ ವಸ್ತುಗಳಿಂದ ಮಾಡಲ್ಪಟ್ಟಿಲ್ಲ. ನೀರು ನೀರೇ. ಆದರೆ ಉಷ್ಣವನ್ನು ಹೆಚ್ಚಿಸಿದರೆ ಅದು ಆವಿಯಾಗುತ್ತದೆ. ಉಷ್ಣವನ್ನು ಕಡಿಮೆ ಮಾಡಿದರೆ ಅದು ಮಂಜುಗಡ್ಡೆಯಾಗುತ್ತದೆ ಯಾವುದಕ್ಕೂ ಸ್ವತಂತ್ರವಾದ ಬದುಕು ಇಲ್ಲ.

ಆದರೆ ಜನರು ಸಾಮಾನ್ಯವಾಗಿ, ವಸ್ತುಗಳಲ್ಲಿ ಒಂದರ ಮೇಲೊಂದರ ಅವಲಂಬನವಿರುವುದನ್ನು ಒಪ್ಪಿಕೊಳ್ಳುವುದಿಲ್ಲ. ಒಂದು ಪರಿಸ್ಥಿತಿಯಲ್ಲಿ ಸತ್ಯವಾಗಿರುವುದು ಇನ್ನೊಂದು ಪರಿಸ್ಥಿತಿಯಲ್ಲಿ ಸತ್ಯವಾಗಿರಲಾರದೆಂಬುದನ್ನು ಅವರು ತಿಳಿಯುವುದಿಲ್ಲ. ಭಾಷಣ ಸ್ವಾತಂತ್ರ್ಯದ ಬಗ್ಗೆ ಅವರ ಅಭಿಪ್ರಾಯವನ್ನು ನೋಡೋಣ. ಸಾಮಾನ್ಯವಾಗಿ, ಭಾಷಣ ಸ್ವಾತಂತ್ರ್ಯದಿಂದ ಪ್ರಜಾಪ್ರಭುತ್ವಕ್ಕೆ ಸಹಾಯವಾಗುತ್ತದೆ. ಸಮಾಜದ ಬೆಳವಣಿಗೆಗೆ ಅದು ನೆರವಾಗುವುದು. ಆದರೆ ಫಾಸಿಸ್ಟ್ ಪ್ರಚಾರಕ್ಕೆ-ಪ್ರಜಾಪ್ರಭುತ್ವದ ವಿರೋಧದ ವಿಚಾರಕ್ಕೆ-ಭಾಷಣ ಸ್ವಾತಂತ್ರ್ಯ ಬೇಕು ಎಂದರೆ ಹೇಗೆ? ಅದರಿಂದ ಸಮಾಜದ ಬೆಳವಣಿಗೆಗೆ ಆತಂಕವಾಗುತ್ತದೆ.

ದ್ವಂದ್ವಮಾನ ರೀತಿಯಿಂದ ನೋಡಿದರೆ, ಲೋಕದಲ್ಲಿ ಯಾವುದೂ ಸ್ಥಿರವಲ್ಲ, ಪ್ರತಿಯೊಂದೂ ಚಲಿಸುತ್ತಾ ಬದಲಾಗುತ್ತಾ ಏಳುತ್ತಾ ಬೀಳುತ್ತಾ ಇದೆಯೆಂಬುದನ್ನು ಕಾಣಬಹುದು. ಎಲ್ಲ ಶಾಸ್ತ್ರೀಯ ಜ್ಞಾನವೂ ಈ

ಮಾತನ್ನು ಸಮರ್ಥಿಸುತ್ತದೆ. ಭೂಮಿಯೇ ಬದಲಾಗುತ್ತಿರುತ್ತದೆ. ಸಜೀವ ಜಂತುಗಳ ವಿಷಯದಲ್ಲಂತೂ ಅದು ಇನ್ನಷ್ಟು ಸ್ಪಷ್ಟವಿದೆ. ಆದುದರಿಂದ ವಾಸ್ತವತೆಯ ಬಗ್ಗೆ ಯಾವ ಶಾಸ್ತ್ರೀಯ ವಿಚಾರಣೆಯನ್ನು ನಡೆಸಬೇಕಾದರೂ ಈ ಬದಲಾವಣೆಯನ್ನು ನೋಡುವುದು ಅಗತ್ಯ

ವಾಸ್ತವತೆಯ ಈ ಗುಣವನ್ನು ಅಷ್ಟು ಒತ್ತಿ ಹೇಳುತ್ತಿರುವುದೇಕೆ? ಪ್ರಯೋಗದಲ್ಲಿ ವಾಸ್ತವತೆಯ ಬಗ್ಗೆ ಜನರು ಆ ಗುಣವನ್ನು ಗಮನಿಸುವುದಿಲ್ಲ. ಮಾನವ ಸಮಾಜದ ವಿಚಾರದಲ್ಲಿ, ಅದರಲ್ಲೂ ಸ್ತ್ರೀಪುರುಷರ ಬಗ್ಗೆ ವೈಯಕ್ತಿಕವಾಗಿ, ಜನರು ಈ ಗುಣವನ್ನು ಕುರಿತು ವಿಚಾರಿಸುವುದೇ ಇಲ್ಲ. ಮಾನವ ಸಮಾಜದ ಲಾಭಕ್ಕಾಗಿ ಉತ್ಪಾದನ ಮಾಡುವ ಗುಣ, ಸದಾ ಕಾಲ ಇರುವುದಿಲ್ಲ. ಅದು ಹುಟ್ಟಿತು, ಬೆಳೆಯಿತು, ಈಗ ಇಳಿಯುತ್ತಿದೆ—ಎಂಬುದನ್ನು ಕೆಲವರು ಒಪ್ಪುವುದಿಲ್ಲ. ಅಂಥವರು ಮೇಲೆ ಹೇಳಿದ ವಾಸ್ತವತೆಯ ಗುಣವನ್ನು ತಿಳಿದಿಲ್ಲ. "ಹಿಂದಿದ್ದಂತೆಯೇ ಮುಂದೆಯೂ ಇರುವುದು" ಎಂಬ ಮಾತನ್ನು ಎಲ್ಲೆಲ್ಲೂ ಕೇಳುತ್ತೇವೆ. ವ್ಯಕ್ತಿಗಳು ಇಲ್ಲವೆ ಸಮಾಜದ ಬೆಳವಣಿಗೆಗೆ ಇದರಿಂದ ತಡೆಯಿದೆ.

ಪ್ರತಿಯೊಂದೂ ಬದಲಾಗಿ ಬೆಳೆದು ಅಳಿಯುತ್ತಿರುವುದರಿಂದ, ನಮಗೆ ಸಂಬಂಧಿಸಿದ ಪ್ರತಿಯೊಂದು ವಸ್ತುವೂ ಯಾವ ಮಟ್ಟಕ್ಕೆ ತಲುಪಿದುವೆಂಬುದನ್ನು ತಿಳಿಯುವುದು ಅತ್ಯಂತ ಪ್ರಾಯೋಗಿಕ ಪ್ರಾಧಾನ್ಯದ ಕೆಲಸ. ಒಂದು ದನ ಕೊಂಡುಕೊಳ್ಳುವಾಗ ಕೃಷಿಕ ಈ ವಿಚಾರ ಮಾಡುತ್ತಾನೆ; ಒಂದ ಮನೆ ಕೊಂಡುಕೊಳ್ಳುವವನು ಈ ವಿಚಾರವನ್ನು ಮರೆಯುವುದಿಲ್ಲ ಜೀವನದ ಅತಿ ಸರಳ ಪ್ರಾಯೋಗಿಕ ವಿಷಯಗಳಲ್ಲಿ ಪ್ರತಿಯೊಬ್ಬನೂ ಈ ನಿಯಮವನ್ನು ಪಾಲಿಸುತ್ತಾನೆ. ಆದರೆ ಮಾನವ ಸಂಸ್ಥೆಗಳ ಬಗ್ಗೆ ಉತ್ಪಾದನ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳ ಬಗ್ಗೆ ಈ ನಿಯಮವನ್ನು ಯಾರೂ ಗಮನಿಸುವುದಿಲ್ಲ.

ವಸ್ತುಗಳ ಪರಸ್ಪರಾವಲಂಬನ ಮತ್ತು ವಸ್ತುಗಳಲ್ಲಿ ಅಗತ್ಯಲೇ ಇರುವ ಬದಲಾವಣೆ, ಇವು ವಾಸ್ತವತೆಯಲ್ಲಿ ಪ್ರತ್ಯಕ್ಷವಾಗಿ ಕಾಣುವ ಗುಣಗಳು. ಮೂರನೆಯ ಗುಣ ದ್ವಂದ್ವಮಾನ ರೀತಿಯಲ್ಲಿ ವಾಸ್ತವತೆಯನ್ನು

ನೋಡಿದಾಗ ಮಾತ್ರ ಕಾಣಸಿಗುವುದು. ಒಮ್ಮೆ ಹೇಳಿದಮೇಲೆ ಆ ಗುಣ ಸುಲಭವಾಗಿ ಗೊತ್ತಾಗುವುದು.

ವಸ್ತುವಿನಲ್ಲಿ ಬದಲಾವಣೆ ಸುಲಭವಾಗಿ, ಸರಳವಾಗಿ ನಡೆಯದೆ ಖಂಡ ತುಂಡವಾಗಿರುವುದು. ನೀರಿನ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಉಷ್ಣ ಏರುತ್ತ ಹೋದಾಗಲೂ ನೀರು ನೀರಾಗಿಯೇ ಉಳಿಯುವುದು; ಆದರೆ ಅದರಲ್ಲಿರುವ ಉಷ್ಣ ಹೆಚ್ಚುವುದು. ಉಷ್ಣವನ್ನು ಕಡಿಮೆ ಮಾಡಿದಾಗಲೂ ನೀರು ನೀರಾಗಿಯೇ ಉಳಿಯುವುದು; ಆದರೆ ಅದರಲ್ಲಿರುವ ಉಷ್ಣ ಕಡಿಮೆಯಾಗುವುದು. ನೀರಿನ ಗುಣಗಳೆಲ್ಲ ಹಾಗೆಯೇ ಇರುವುವು.

ಆದರೆ, ಬದಲಾವಣೆ ಒಂದು ಗುರುತನ್ನು ಸಮೀಪಿಸಿದಾಗ, ಉಷ್ಣ ಹೆಚ್ಚುವುದಿರಲಿ–ಕಡಿಮೆಯಾಗುವುದಿರಲಿ, ನೀರು ತನ್ನ ಗುಣಗಳನ್ನು ಬದಲಿಸುವುದು. ಆಮೇಲೆ ಅದು ನೀರಲ್ಲ; ಆವಿ ಇಲ್ಲವೆ ಮಂಜುಗಡ್ಡೆ.

ಮಾನವ ಸಮಾಜದಲ್ಲಿ, ದೀರ್ಘಕಾಲದ ವರೆಗೆ ಒಮ್ಮೊಮ್ಮೆ ಬಲು ನಿಧಾನವಾಗಿ ಕೆಲ ಬದಲಾವಣೆಗಳಾಗುತ್ತಲಿರುವುವು. ಆದರೆ ಮೂಲ ಬದಲಾವಣೆ ಯಾವುದೂ ಆಗುವುದಿಲ್ಲ. ಕ್ರಾಂತಿಯಾದಾಗ ಮಾತ್ರ ಸಮಾಜದ ಹಳೆಯ ಪದ್ಧತಿ ನಾಶವಾಗಿ, ಹೊಸತು ಹುಟ್ಟಿ, ಅದರ ಬೆಳವಣಿಗೆ ಆರಂಭವಾಗುವುದು.

ಬೆಳವಣಿಗೆ ಹೇಗಾಗುತ್ತದೆಂಬುದು ನಾಲ್ಕನೆಯ ಗುಣ. ಪ್ರತಿಯೊಂದು ವಸ್ತುವಿನಲ್ಲೂ ಪರವಾದ ಹಾಗೂ ವಿರುದ್ಧವಾದ ಎರಡು ಗುಣಗಳಿರುತ್ತವೆ. ಬೆಳೆದು ಬಲಿಷ್ಠವಾಗುವುದೊಂದು, ಅದನ್ನು ತಡೆದುಹಿಡಿಯುವುದೊಂದು.

ಮಾನವ ಸಮಾಜದಲ್ಲಿ ಇದನ್ನು ಸ್ಪಷ್ಟವಾಗಿ ಕಾಣಬಹುದು. ಪ್ರತಿಯೊಂದು ಚಾರಿತ್ರಿಕ ಘಟ್ಟದಲ್ಲೂ ಬೆಳೆಯುವ ಮತ್ತು ಇಳಿಯುವ ವರ್ಗಗಳಿವೆ. ಪಾಳೆಯಗಾರ ಸಮಾಜದಲ್ಲಿ ಭಂಡವಳಶಾಹಿ ಬೆಳೆಯುತ್ತಿತ್ತು, ಘರ್ಷಣೆಯಾಯಿತು. ಭಂಡವಳಶಾಹಿ ಸಮಾಜದಲ್ಲೂ ಅದೇ ಸ್ಥಿತಿ. ಬೆಳೆಯುತ್ತಿರುವುದು, "ಭವಿಷ್ಯತ್ತನ್ನು ತನ್ನ ಕೈಯಲ್ಲಿ ಇರಿಸಿಕೊಂಡಿರುವ" ಕೂಲಿಕಾರವರ್ಗ. ಭಂಡವಳಶಾಹಿ ಸಮಾಜವೆಲ್ಲ ಒಂದೇ ರೀತಿಯದಲ್ಲ. ಭಂಡವಳಗಾರರೂ ಬೆಳೆಯುತ್ತಾರೆ; ಕೂಲಿಕಾರರೂ ಬೆಳೆಯುತ್ತಾರೆ. ಈ

ವರ್ಗಗಳೊಳಗಿನ ಘರ್ಷಣೆಯೂ ಬಲವಾಗುತ್ತದೆ. ಕೊನೆಗೆ ಆಗುವುದು ಕ್ರಾಂತಿ

"ದ್ವಂದ್ವಮಾನ ಭೌತಿಕ ವಾದ" ವು ಆವರಿಸುವ ಎಲ್ಲಾ ವಿಚಾರಗಳನ್ನೂ ಈಗ ಒಟ್ಟಾಗಿ ಕೂಡಿಸುವುದು ಸಾಧ್ಯ. ವಾಸ್ತವತೆಯು ಮನಸ್ಸಿಗಿಂತ ಪ್ರತ್ಯೇಕವಾಗಿ ಇದೆ ಎನ್ನುವ ನೋಟ; ಈ ವಾಸ್ತವತೆಯು ಭಿನ್ನ ವಿಭಿನ್ನ ಭಾಗಗಳಲ್ಲ, ಅದು ಪರಸ್ಪರಾವಲಂಬಿ ; ಅದು ಸ್ಥಿರವಲ್ಲ ಚಲಿಸುತ್ತಲೇ ಇರುತ್ತದೆ, ಬೆಳೆದು ಅಳಿಯುತ್ತಲೇ ಇರುತ್ತದೆ; ಈ ಬೆಳವಣಿಗೆ ಒಂದು ಮಟ್ಟದ ವರೆಗೆ ಪ್ರಧಾನವಾಗಿದ್ದು, ಒಮ್ಮೆಲೆ ಕಡಿತವಾಗಿ, ಹೊಸತು ಹುಟ್ಟುತ್ತದೆ; ಆಂತರಿಕ ಘರ್ಷಣೆಯ ಫಲವಾಗಿ ಬೆಳವಣಿಗೆಯಾಗುತ್ತದೆ, ಒಮ್ಮೆಲೆ ಆಗುವ ತೀಕ್ಷ್ಣ ಕಡಿತವೇ ಉದಯೋನ್ಮುಖವಾಗಿರುವ ಶಕ್ತಿ, ಅಳಿಯುತ್ತಿದ್ದ ಶಕ್ತಿಯ ಮೇಲೆ ಪಡೆದ ವಿಜಯ.

ಲೋಕದ ಬಗ್ಗೆ [ಮಾನವ ಸಮಾಜವನ್ನೂ ಸೇರಿ] ಇರುವ ಈ ಕಲ್ಪನೆಯಿಂದಾಗಿಯೇ ಮಾರ್ಕ್ಸ್‌ವಾದ ವಿಶಿಷ್ಟವೆನಿಸಿದೆ. ದ್ವಂದ್ವಮಾನ ಭೌತಿಕವಾದ ವಾಸ್ತವತೆಯನ್ನು ಮೀರಿ ಇರುವುದಿಲ್ಲ; ಅದು ಲೋಕವು ಸರಿಹೋಗಲೇಬೇಕಾದ ಸಂಶೋಧಿತ ದೃಷ್ಟಿಕೋನವಲ್ಲ. ಅದರ ಬದಲು, ಲೋಕವನ್ನು ಅತ್ಯಂತ ಸರಿಯಾಗಿ ಅದು ಪ್ರತಿನಿಧೀಕರಿಸುತ್ತದೆ. ಮನುಷ್ಯನ ಸಂಗ್ರಹಿತ ಬುದ್ಧಿಶಕ್ತಿ ಮತ್ತು ಅನುಭವದ ಫಲವಾಗಿ ಅದು ಹುಟ್ಟಿದೆ. ಹೊರಗಿನ ಲೋಕದಲ್ಲಿರುವುದರಿಂದಲೇ ಅದು ಮಾರ್ಕ್ಸ್‌ವಾದಿಯ ಮನಸ್ಸಿನಲ್ಲಿದೆ. ಅದೀಗ ನಿಜವಾದ "ವಸ್ತುಗಳ ರೂಪ."

ವಿಜ್ಞಾನದ ಸಂಶೋಧನೆಗಳು ಅದನ್ನು ಸಮರ್ಥಿಸುತ್ತಲೇ ಬಂದಿವೆ. ದ್ವಂದ್ವಮಾನ ನೆಲೆಯಿಂದ ವಿಷಯವನ್ನು ಸಮೀಪಿಸಿದ ವಿಜ್ಞಾನಿಗಳಿಗೆ ಹೊಸ ಹೊಸ ವಿಷಯಗಳನ್ನು ಕಂಡು ಹಿಡಿಯುವುದು ಸಾಧ್ಯವಾಗಿದೆ. ಆದರೆ ಮಾನವನ ಬೆಳವಣಿಗೆಯ ಈ ಘಟ್ಟದಲ್ಲಿ, ಮಾನವ ಸಮಾಜವನ್ನು ದ್ವಂದ್ವಮಾನ ಭೌತಿಕವಾದಿ ದೃಷ್ಟಿಯಿಂದ ನೋಡುವುದು, ಅತಿ ಮುಖ್ಯ.

ಮಾರ್ಕ್ಸ್‌ವಾದದ ಪ್ರಕಾರ ಪಾಳೆಯಗಾರ ಭಾವನೆಗಳು ಭೂತಕಾಲಕ್ಕೆ ಸೇರಿಹೋದುವು ; ಭಂಡವಳಶಾಹಿ ಭಾವನೆಗಳು ಇಳಿಮುಖವಾಗಿವೆ; ಸಾಮ್ಯವಾದಿ ಭಾವನೆಗಳು ರೂಪುಗೊಳ್ಳತೊಡಗಿವೆ. 'ರೂಪುಗೊಳ್ಳತೊ

ಡಗಿವೆ' ಎಂದೇಕೆ? ೧೯೧೭ರ ನವೆಂಬರದ ಅನಂತರ ಪ್ರತ್ಯಕ್ಷ ಅನುಭವದ ಒರೆಗಲ್ಲಿಗೆ ಸಾಮ್ಯವಾದಿ ಭಾವನೆಗಳನ್ನು ಹಚ್ಚಿನೋಡಿ, ವಾಸ್ತವತೆಗೆ ಅವು ಸರಿಹೋಗುತ್ತವೆ ಎಂಬುದನ್ನು ತೋರಿಸಿ ಕೊಡಲಾಗಿದೆ.

ಮಾರ್ಕ್ಸ್‌ವಾದಿ ದೃಷ್ಟಿಕೋನವಿದ್ದ ರಷ್ಯನ್ ಕಮ್ಯೂನಿಸ್ಟ್ ಪಾರ್ಟಿಯು ಎಚ್ಚರಿತ್ತ ಕಾರ್ಯಾಚರಣೆ ಹಳೆಯ ಪದ್ಧತಿಯನ್ನು ಉರುಳಿಸಿ ಹೊಸತನ್ನು ಸ್ಥಾಪಿಸಿತು. ಅಂದಿನಿಂದ ತನ್ನ ಮುನ್ನೋಟದಲ್ಲಿ ಮಾರ್ಕ್ಸ್‌ವಾದಿಯಲ್ಲದೇ ಇದ್ದ ಹೆಚ್ಚಿನ ರಷ್ಯನ್ ಜನವಿಭಾಗ ಹೊಸ ಪದ್ಧತಿಯ ರುಚಿ ನೋಡಿತು. ಆ ಜನರು ಪ್ರಾಯೋಗಿಕವಾಗಿ ಸಾಮ್ಯವಾದಿಗಳಾದರು. ಆ ಬುನಾದಿಯ ಮೇಲೆ, ಸಾಮ್ಯವಾದಿಗಳು ನಡೆಸಿದ ಸಿದ್ಧಾಂತಗಳ ವಿದ್ಯಾಭ್ಯಾಸವನ್ನು--ಪಾಠವನ್ನು ಜನರು ಸುಲಭವಾಗಿ ತಿಳಿದುಕೊಂಡರು. ಪ್ರಯೋಗವೂ ವಿದ್ಯಾಭ್ಯಾಸವೂ ಜತೆಯಾಗಿಯೇ ನಡೆದು, ಜನತೆಯ ದೃಷ್ಟಿಕೋನವನ್ನೇ ಸುಲಭವಾಗಿ ಬದಲಿಸಿದುವು.

ವಿಜ್ಞಾನದ ಪ್ರತಿಯೊಂದು ಕ್ಷೇತ್ರದಲ್ಲೂ ವಿಷಯಗಳನ್ನು ತಿಳಿದುಕೊಳ್ಳಲು ಸಂಶೋಧಕರಿಗೆ ದ್ವಂದ್ವಮಾನ ಭೌತಿಕವಾದವು ನೆರವಾಗುತ್ತದೆ ಎಂದಷ್ಟೇ ಮಾರ್ಕ್ಸ್‌ವಾದ ಹೇಳುವುದು. ಹೆಚ್ಚಿನ ವಿವರಗಳನ್ನು ಅದು ಕೊಡುವುದಿಲ್ಲ. ಅದನ್ನು ಪ್ರತಿಯೊಂದು ಕ್ಷೇತ್ರದಲ್ಲೂ ಆಳವಾಗಿ ಅಭ್ಯಾಸಿಸಿ ತಿಳಿಯಬೇಕು. ಪ್ರತ್ಯೇಕವಾಗಿ ವಸ್ತು ಸ್ಥಿತಿಗಳನ್ನು ಅಭ್ಯಾಸಿಸುವುದರ ತಳಹದಿಯ ಮೇಲೆ ಆದಷ್ಟು ಮಟ್ಟಿನ ಶಾಸ್ತ್ರೀಯ ಸತ್ಯವನ್ನು ರೂಪಿಸುವುದು ಅಸಾಧ್ಯವೆಂದು ಮಾರ್ಕ್ಸ್‌ವಾದ ಹೇಳುವುದಿಲ್ಲ. ಆದರೆ ವಸ್ತು ಸ್ಥಿತಿಗಳನ್ನು ಪರಸ್ಪರಾವಲಂಬಿಗಳಾಗಿ, ಅವುಗಳ ಬೆಳವಣಿಗೆಯಲ್ಲಿ, ಪರಿಮಾಣದಿಂದ ಗುಣಕ್ಕೆ ಬದಲಾಗುವಲ್ಲಿ, ಆಂತರಿಕ ಪರಸ್ಪರ ವಿರುದ್ಧಗಳನ್ನು ತಿಳಿದುಕೊಳ್ಳುವುದರಲ್ಲಿ, ಅಭ್ಯಾಸ ಮಾಡಿದರೆ, ಹೊರಬರುವ ಶಾಸ್ತ್ರೀಯ ಸತ್ಯಕ್ಕೆ ಹೆಚ್ಚಿನ ಬೆಲೆಯಿದೆ; ಅದು ಹೆಚ್ಚು ಸತ್ಯ.

ಸಮಾಜ ವಿಜ್ಞಾನಕ್ಕಂತೂ ಇದು ಹೆಚ್ಚಾಗಿ ಅನ್ವಯಿಸುತ್ತದೆ. ಒಂದು ಕಾಲದ ಮತ್ತು ಒಂದೇ ಪ್ರದೇಶದ ಸಾಮಾನ್ಯ ಸ್ತ್ರೀ ಪುರುಷರನ್ನು ಇಲ್ಲವೆ ಸಮಾಜಗಳನ್ನು ಅಭ್ಯಾಸ ಮಾಡುವುದರಿಂದ ಬಹಳ ನಿಯಮಿತ ತೀರ್ಮಾನಕ್ಕೆ ಮಾತ್ರ ಬರಬಹುದು. ಮಾರ್ಕ್ಸ್‌ವಾದ ಈಗಿನ ಇಲ್ಲಿನ

ಸಮಾಜವನ್ನು ಅಭ್ಯಸಿಸುವುದಷ್ಟೇ ಅಲ್ಲ, ಅದು ಹಿಂದೆ ಇದ್ದಂತೆ-ಬೆಳವಣಿಗೆ ಯಾದಂತೆ ಅದನ್ನು ಅಭ್ಯಾಸಮಾಡುತ್ತದೆ. ಇದರಿಂದಲೇ ಸಮಾಜದ ಮಾರ್ಕ್ಸ್‌ವಾದಿ ಅಭ್ಯಾಸಕ್ಕೆ ವಿಶಿಷ್ಟ ಬೆಲೆ ಇರುವುದು. ಕಣ್ಣು ತೆರೆದರೆ ಸಾಕು, ಮಾರ್ಕ್ಸ್ ಹೇಳಿದಂತೆ ಒಂದು ಅಂದೋಲನ "ನಮ್ಮ ಕಣ್ಣೆದು ರಲ್ಲೇ ನಡೆಯುತ್ತಿರುವುದನ್ನು" ಕಾಣಬಹುದು. ಈ ರೀತಿಯ ಅಭ್ಯಾಸ ದಿಂದಾಗಿ ನಿಜಕ್ಕೂ ಆಗುತ್ತಿರುವ ಕಾರ್ಯವಿಧಾನಕ್ಕೆ ತಮ್ಮ ಕಾರ್ಯಾ ಚರಣೆಯನ್ನು ಸರಿಹೊಂದಿಸಿಕೊಳ್ಳಲು ಸ್ತ್ರೀ ಪುರುಷರಿಗೆ ಮೊದಲಬಾರಿ ಆಸ್ಪದ ಸಿಗುವುದು. ಅಸ್ಪಷ್ಟ ತತ್ವಗಳೂ ನೋಟಗಳೂ ಪ್ರತಿಬಿಂಬಿಸು ವುದು ಭೂತಕಾಲದ ಚಲಿಸದ ದೃಷ್ಟಿಕೋನವನ್ನು. ಅವುಗಳಿಂದ ನಮಗೆ ಪ್ರಯೋಜನವಾಗುವುದಿಲ್ಲ. ಸಮಾಜದ ಮಾರ್ಕ್ಸ್‌ವಾದಿ ಅಭ್ಯಾಸವೇ ನಮ್ಮ ಕಾರ್ಯಾಚರಣೆಗೊಂದು ಕೈಪಿಡಿಯಾಗುವುದು.

## ೮

## ಕಾರ್ಯಾಚರಣೆಗೊಂದು ಕೈಪಿಡಿ

ತನ್ನ ಆರಂಭದ ಕೃತಿಗಳಲ್ಲಿ ಮಾರ್ಕ್ಸ್ ಬರೆದ: "ತಾತ್ವಿಕರು ಲೋಕದ ಬಗ್ಗೆ ವಿವಿಧ ರೀತಿಗಳಲ್ಲಿ ವ್ಯಾಖ್ಯೆಮಾಡಿದ್ದಾರೆ. ಈಗ ಬೇಕಾಗಿರುವುದು ವ್ಯಾಖ್ಯೆಯಲ್ಲ—ಲೋಕವನ್ನು ಬದಲಿಸುವುದು." ಲೋಕದ ಬಗ್ಗೆ ಮಾರ್ಕ್ಸ್ ತಳೆದಿದ್ದ ದೃಷ್ಟಿಕೋನದಲ್ಲಿ ಇದು ಮುಖ್ಯವಾದುದು. ಮಾರ್ಕ್ಸ್‌ವಾದ ಅಧ್ಯಯನದ ಶಾಸ್ತ್ರವಲ್ಲ; ಲೋಕವನ್ನು ಬದಲಿಸಲು ಮನುಷ್ಯ ಉಪಯೋಗಿಸಬೇಕಾದ ಪರಿಜ್ಞಾನ.

ಭಂಡವಳಶಾಹಿ ಉಳಿಯುವಂಥಾದ್ದಲ್ಲ—ಅದರ ಅನಂತರ ಸಾಮ್ಯವಾದ ಬರುವುದು ಎಂಬುದನ್ನು ತಿಳಿದಿದ್ದರೆ ಸಾಲದು. ಇಂಥ ಪರಿವರ್ತನೆ ಬರೀ ಆರ್ಥಿಕ ಬದಲಾವಣೆಗಳಿಂದಲಷ್ಟೇ ತನ್ನಷ್ಟಕ್ಕೆ ತಾನೇ ಆಗುವುದಿಲ್ಲ. ಮಾನವನ ಕಾರ್ಯಾಚರಣೆಯಿಂದ ಅದು ಸಾಧ್ಯವಾಗುತ್ತದೆ. ಅಂಥ ಮಾನವ ಕಾರ್ಯಾಚರಣೆಗೆ ಅವಶ್ಯವಿರುವ ವಿಧಾನದ ಪರಿಜ್ಞಾನವನ್ನು ಮಾರ್ಕ್ಸ್‌ವಾದ ಮಾಡಿಕೊಡುತ್ತದೆ.

ಭಂಡವಳಶಾಹಿಯನ್ನು ಮುಗಿಸಿ ಸಾಮ್ಯವಾದಕ್ಕೆ ಹಾದಿ ಮಾಡಿಕೊಡುವ ಕಾರ್ಯಾಚರಣೆಯ ರೂಪರೇಖೆಗಳು ಈಗಾಗಲೇ ಸ್ಪಷ್ಟವಿವೆ. ಆಳುವವರ್ಗದ ಶಕ್ತಿಗಿದಿರಾಗಿ "ಶಕ್ತಿಯನ್ನೇ ಉಪಯೋಗಿಸಿ" ಕಾರ್ಮಿಕ ವರ್ಗವೇ ಈ ಕಾರ್ಯಾಚರಣೆಯನ್ನು ಮಾಡಬಲ್ಲುದೆಂದು ಮಾರ್ಕ್ಸ್ ನೋಡಿದ. ಆದರೆ ಈ ಸಾಮಾನ್ಯ ನಿಯಮವನ್ನು ಕೂಲಿಕಾರವರ್ಗದ ಪ್ರತ್ಯಕ್ಷ ಅನುಭವದಿಂದಲೇ ಸರಿಹೊಂದಿಸಬೇಕು. ೧೮೪೮ ಮತ್ತು ೧೮೭೧ರ ಕ್ರಾಂತ್ರಿಯ ಅನುಭವಗಳಿಂದ ಹೋರಾಟದ ರೂಪದ ಬಗ್ಗೆಯೂ ಅಧಿಕಾರ ವಹಿಸಿದ ಮೇಲೆ ಕೂಲಿಕಾರವರ್ಗ ಎಂಥ ಸರಕಾರವನ್ನು ಸ್ಥಾಪಿಸುವುದೆಂಬ ಬಗ್ಗೆಯೂ ಕೆಲ ತೀರ್ಮಾನಗಳಿಗೆ ಬರಲು ಮಾರ್ಕ್ಸ್ ಶಕ್ತನಾದ. ಆದರೆ ಸಮಸ್ಯೆ ಅಷ್ಟೇ ಅಲ್ಲ: ಅಂತಿಮ ಹೋರಾಟಕ್ಕಾಗಿ ಕೂಲಿಕಾರವರ್ಗ ಹೇಗೆ ಸಿದ್ಧತೆ ಮಾಡುವುದು—ಎಂಬುದು ಮುಖ್ಯ.

ಮಾರ್ಕ್ಸ್ ಈ ಬಗ್ಗೆ ವಿಚಾರ ಮಾಡುತ್ತಲೇ ಹೋದ. ಅಸ್ಪಷ್ಟ-ಅಸಮಂಜಸ ರೀತಿಯಲ್ಲಿ ಹಾಗೆ ಮಾಡಲಿಲ್ಲ. ಪ್ರಾಯೋಗಿಕವಾಗಿ ಕೂಲಿಕಾರವರ್ಗದ ಸಂಘಟನೆಗಳಲ್ಲಿ ಆತ ದುಡಿದ. ೧೮೪೮ರ 'ಕಮ್ಯೂನಿಸ್ಟ್ ಘೋಷಣೆ'ಯನ್ನು ಹೊರಡಿಸಿದ್ದು ಕಮ್ಯೂನಿಸ್ಟ್ ಲೀಗ್ ಎಂಬ ಸಂಘಟನೆ. ಅದರಲ್ಲಿ ಮಾರ್ಕ್ಸ್ ಬಹಳ ಕಾಲ ದುಡಿದ. ೧೮೬೪ರಲ್ಲಿ ಮಾರ್ಕ್ಸ್‌ನ ಯತ್ನದಿಂದಲೇ "ಅಂತರರಾಷ್ಟ್ರೀಯ ಸಂಘ"ವೊಂದು ಸ್ಥಾಪಿಸಲ್ಪಟ್ಟಿತು. ಅದೇ ಪ್ರಥಮದ ಇಂಟರ್‌ನ್ಯಾಶನಲ್. ಬ್ರಿಟನಿನ ಹಾಗೂ ಇತರ ದೇಶಗಳ ಕಾರ್ಮಿಕ ಆಂದೋಲನಗಳೊಡನೆ ಆತ ಸಂಬಂಧವಿರಿಸಿದ್ದ.

ಆ ದಿನಗಳಲ್ಲಿ ಕೂಲಿಕಾರವರ್ಗದ ಸ್ವಲ್ಪಂಶ ಮಾತ್ರ ಸಂಘಟಿತವಾಗಿತ್ತು. ಯಾವ ದೇಶದಲ್ಲೂ ಕೂಲಿಕಾರವರ್ಗದ ರಾಜಕೀಯ ಪಕ್ಷ ಇರಲಿಲ್ಲ. ಯೂರೋಪಿನ ಎಷ್ಟೋ ದೇಶಗಳಲ್ಲಿ ಕೂಲಿಕಾರವರ್ಗವೇ ರೂಪುಗೊಂಡಿರಲಿಲ್ಲ.

ಸಾಮ್ಯವಾದದ ಅವಶ್ಯತೆಯನ್ನೂ ಅದನ್ನು ಗಳಿಸಲು ಕಾರ್ಮಿಕ ವರ್ಗದ ಕ್ರಾಂತಿಯಾಗಬೇಕೆಂಬುದನ್ನೂ ಒತ್ತಿ ಹೇಳುವ ಕಮ್ಯೂನಿಸ್ಟ್ ಘೋಷಣೆ ೧೮೪೮ರಲ್ಲೇ ಬಂತು. ಮಾರ್ಕ್ಸ್‌ವಾದವೆಂದರೆ ಕೆಲ ಕಟ್ಟುನಿಟ್ಟಿನ ಜಡ ತತ್ವಗಳೆಂದು ಭಾವಿಸುವವರಿದ್ದಾರೆ. ಭಂಡವಳಗಾರರೂ

ಮಧ್ಯಮವರ್ಗದ ಮತ್ತಿತರ ಜನ ವಿಭಾಗಗಳೂ ಹೂಡುವ ಪ್ರಜಾ ಪ್ರಭುತ್ವದ ಸಮರದಲ್ಲಿ ಕೂಲಿಕಾರವರ್ಗ ಯಾಕೆ ಭಾಗವಹಿಸಬೇಕೆಂದು ಇಂಥವರು ಕೇಳುತ್ತಾರೆ. ಮಾರ್ಕ್ಸ್ ಈ ವಿಚಾರದಲ್ಲಿ ಸ್ಪಷ್ಟವಾಗಿದ್ದ. ಅಂಥ ಸಮರಗಳಲ್ಲಿ ಭಾಗವಹಿಸುವುದರಿಂದ ಕೂಲಿಕಾರವರ್ಗ ತಾನು ಸಾಗಬೇಕಾದ ಹಾದಿಯನ್ನು ಸುಗಮಗೊಳಿಸಿದಂತಾಗುವುದು. ನಿರಂಕುಶ ಪ್ರಭುತ್ವವನ್ನು ಮುರಿದು, ಜನಪ್ರತಿನಿಧಿ ಸಭೆಗಳಿರುವ ಪ್ರಜಾಪ್ರಭುತ್ವವನ್ನು ಸಾಧ್ಯಗೊಳಿಸಿ, ಕೂಲಿಕಾರವರ್ಗದ ಸಂಘಟನೆಗಳು ಬೆಳೆಯಲು ಏರ್ಪಾಡು ಮಾಡುವುದೇ ಕೂಲಿಕಾರರ ಹೋರಾಟದಲ್ಲಿ ಮೊದಲ ಕಾರ್ಯಕ್ರಮ.

ಭಂಡವಳಗಾರರಿಗಿದಿರಾದ ಯುದ್ಧದಲ್ಲಿ ಕೂಲಿಕಾರವರ್ಗದ ರಾಜ ಕೀಯ ಪಕ್ಷವನ್ನು ರಚಿಸುವುದೇ ಮೊದಲ ಕೆಲಸವೆಂದು ಮಾರ್ಕ್ಸ್ ಅಭಿ ಪ್ರಾಯಪಟ್ಟ. ಆದರೆ ಬರೇ ರಾಜಕೀಯ ಸಂಘಟನೆ ಇದ್ದರೆ ಸಾಲದು. ಅದು ಮಾರ್ಕ್ಸ್‌ವಾದಿ ಗ್ರಹಿಕೆಯಮೇಲೆ ಅವಲಂಬಿಸಿರಬೇಕು; ಇತಿಹಾಸ ದಲ್ಲಿ ವರ್ಗಸಮರವು ವಹಿಸಿದ ಸರಿಯಾದ ಪಾತ್ರದ ತಿಳಿವಳಿಕೆಯ ಮೇಲೆ ಅದು ಅವಲಂಬಿಸಿರಬೇಕು; ಪ್ರತಿಯೊಂದು ಹೋರಾಟವೂ ಸಾಮ್ಯವಾದ ವನ್ನು ತರುವ ಅಂತಿಮ ಹೋರಾಟಕ್ಕೆ ಸಿದ್ಧತೆಯಾಗಿರಬೇಕು.

ಆದರೆ ಆ ಕಾಲದಲ್ಲಿ ಭಂಡವಳಕ್ಕಿದಿರಾದ ಹೋರಾಟಕ್ಕೆ ಕೂಲಿ ಕಾರರ ಸಂಘಟನೆಯಾಯಿತೇ ಹೊರತು ಹೆಚ್ಚೇನೂ ಆಗಲಿಲ್ಲ. ಈ ಶತ ಮಾನದ ಆದಿಯಲ್ಲಿ ಮಾತ್ರ ಗುತ್ತಿಗೆ ಕೂಟಗಳ ಸಾರ್ವತ್ರಿಕ ಬೆಳವಣಿಗೆ ಯಾಗಿ, ಭಂಡವಳಶಾಹಿ ಸಾಮ್ರಾಜ್ಯವಾದಿ ಮಟ್ಟಕ್ಕೆ ಮುಟ್ಟಿ, ಕೂಲಿಕಾರ ವರ್ಗದ ಬೆಳವಣಿಗೆಯ ಗತಿ ತೀವ್ರವಾಯಿತು.

ಎಂದೊಡನೆ ಮಾರ್ಕ್ಸ್‌ವಾದ "ದಿನಕಳೆದ ಹಳೆಯ ಪದ್ಧತಿ" ಎಂದು ಅರ್ಥವಲ್ಲ. ಭಂಡವಳಶಾಹಿಯ ಬೆಳವಣಿಗೆಯಲ್ಲೂ ಭಂಡವಳವರ್ಗ ಮತ್ತು ಕಾರ್ಮಿಕವರ್ಗಗಳೊಳಗಿನ ಸಂಬಂಧದಲ್ಲೂ ಹೊಸದೊಂದು ಪರಿ ಸ್ಥಿತಿ ಒದಗಿ ಬಂದಿದೆ ಎಂದಾಗ, ಮಾರ್ಕ್ಸ್ ಮತ್ತು ಎಂಗೆಲ್ಸ್ ತಮ್ಮ ಕಾಲ ದಲ್ಲಿ ರೂಪಿಸಿದ ಕಾರ್ಯಕ್ರಮ ನೀತಿಗಳನ್ನು ವಿಪುಲಗೊಳಿಸಬೇಕಾಗುತ್ತದೆ. ಮಾರ್ಕ್ಸ್‌ವಾದವನ್ನು ಸಾಮ್ರಾಜ್ಯಶಾಹಿಯ ಹಾಗೂ ಕ್ರಾಂತಿಯ ಕಾಲಕ್ಕೆ ಅನ್ವಯಿಸುವ ಕೆಲಸವನ್ನು ಲೆನಿನ್ ಮಾಡಿದ.

ಲೆನಿನ್ ವಿಪುಲಗೊಳಿಸಿದ ಪ್ರಮುಖ ವಿಚಾರಗಳಲ್ಲಿ ಇಲ್ಲಿ ಕೆಲವನ್ನು ಮಾತ್ರ ಹೇಳುವುದು ಸಾಧ್ಯ: ಕೂಲಿಕಾರವರ್ಗದ ಮಿತ್ರರು ಯಾರೆಂಬ ಸಿದ್ಧಾಂತ; ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ; ಯುದ್ಧದ ಪ್ರಶ್ನೆ.

ಹಿಂದಿನ ಆಳುವವರ್ಗವನ್ನು ಉರುಳಿಸುವವರ್ಗ ಇತರ ಜನ ವಿಭಾಗಗಳ ಜತೆಯಲ್ಲೇ ಕಾರ್ಯಾಚರಣೆ ಮಾಡುತ್ತದೆಂಬ ವಿಷಯವನ್ನು ಮಾರ್ಕ್ಸ್ ಒತ್ತಿ ಒತ್ತಿ ಹೇಳಿದನೆಂಬುದನ್ನು ಹಿಂದೆಯೇ ತಿಳಿಸಲಾಗಿದೆ. ಭಂಡವಳವರ್ಗವನ್ನು ಉರುಳಿಸುವ ಘಟ್ಟ ಬಂದಾಗ ಹೋರಾಡುವವರ್ಗದಲ್ಲಿ ಎಂಥೆಂಥವರು ಇರಬಹುದು?

ಒಂದು ಕಟ್ಟು ನಿಟ್ಟಿನ ಸಿದ್ಧಾಂತವನ್ನು ಯಾವ ದೇಶದಲ್ಲಿ–ಯಾವ ಸಮಯದಲ್ಲಾದರೂ ಸರಿಯೆ ಅನ್ವಯಿಸಬಹುದೆಂಬ ಭಾವನೆ ಮಾರ್ಕ್ಸ್‌ವಾದಿ ದೃಷ್ಟಿಕೋನಕ್ಕೇ ವಿರುದ್ಧವಾದುದು ವಸ್ತುಗಳ ಪರಸ್ಪರಾವಲಂಬನವೇ ಮಾರ್ಕ್ಸ್‌ವಾದದ ಮೂಲತತ್ವಗಳಲ್ಲೊಂದು. ಕೂಲಿಕಾರವರ್ಗವೆಂದರೆ ಅದೊಂದು ಪ್ರತ್ಯೇಕ ಪ್ರದೇಶದಲ್ಲಿರುವ ಜನವಿಭಾಗವಲ್ಲ. ಅದರ ಸುತ್ತಲೂ ನಿರ್ದಿಷ್ಟವಾದ ನಿಜವಾದ ಲೋಕವಿದೆ, ಕಾಲ ಕಾಲಕ್ಕೆ ದೇಶ ದೇಶಕ್ಕೆ ಬದಲಾಗುವ ವರ್ಗಗಳ ಅಂಶಗಳೂ ಇತರ ವರ್ಗಪಂಗಡಗಳೂ ಇವೆ.

ಏಕ ವೈರಿಗಿದಿರಾಗಿ ಕೂಲಿಕಾರವರ್ಗವು ಇತರ ವಿಭಾಗಗಳೊಡನೆ ಮೈತ್ರಿ ಬೆಳೆಸಬೇಕೆಂಬ ಸಿದ್ಧಾಂತ ಯಾವಾಗಲೂ ಸರಿಯಾದುದೇ. ಆದರೆ ಆ ಸಿದ್ಧಾಂತವನ್ನು ಅನ್ವಯಿಸುವುದಕ್ಕೆ ಮುಂಚಿತವಾಗಿ, ದೇಶದಲ್ಲಿರುವ ಎಲ್ಲಾ ವರ್ಗಶಕ್ತಿಗಳ [ಸ್ಪೇನಿನಂಥ ದೇಶದಲ್ಲಾದರೆ ಹೊರಗಿರುವ ಶಕ್ತಿಗಳನ್ನು ಕೂಡಿ] ಪೃಥಕ್ಕರಣಮಾಡಿ, ಯಾವ ವಿಭಾಗ ಪ್ರಧಾನ ವೈರಿ ಎಂಬುದನ್ನು ಖಂಡಿತಮಾಡಿಕೊಳ್ಳುವುದಗತ್ಯ. ಪ್ರಧಾನ ವೈರಿ ಯಾರೆಂದು ತಿಳಿದ ಮೇಲೆ ಅವನನ್ನು ಸೋಲಿಸಲು ಬೇರೆ ಯಾವ ವಿಭಾಗಗಳು ಉತ್ಸುಕತೆಯಿಂದಿವೆ ಎಂಬುದನ್ನು ನೋಡಬೇಕು. ಈ ಪೃಥಕ್ಕರಣವಾದ ಮೇಲೆ ಎಲ್ಲರ ವೈರಿಗಿದಿರಾಗಿ ಕಾರ್ಯಾಚರಣೆ ಮಾಡಲು ಹೆಚ್ಚು ಜನ ವಿಭಾಗವನ್ನು ಒಂದುಗೂಡಿಸಬಲ್ಲ ಧೋರಣೆಯನ್ನು ಗೊತ್ತುಮಾಡಿದರಾಯಿತು.

ಭಂಡವಳಶಾಹಿಯು ಗುತ್ತಿಗೆಯ ಘಟ್ಟ ಬಂದೊಡನೆ ಆರ್ಥಿಕ ಅಧಿಕಾರ [ಆದುದರಿಂದ ರಾಜಕೀಯ ಅಧಿಕಾರ ಕೂಡಾ], ಮುಂದುವರಿದ

ಪ್ರತಿಯೊಂದು ಔದ್ಯೋಗಿಕ ರಾಷ್ಟ್ರದಲ್ಲೂ ತೀರ ಕೆಲವೇ ಶ್ರೀಮಂತ ಪಂಗಡಗಳು ಹಾಗೂ ಕೂಲಿಕಾರವರ್ಗಗಳೊಳಗೆ ಸಮರ ತೀಕ್ಷ್ಣವಾಗುವುದಷ್ಟೇ ಅಲ್ಲ, ಭಂಡವಳವರ್ಗದೊಳಗೂ ಮುಖ್ಯ ಅಭಿಪ್ರಾಯ ವ್ಯತ್ಯಾಸಗಳು ಹುಟ್ಟುವುವು. ಭಂಡವಳವರ್ಗದಲ್ಲಿ ಹೆಚ್ಚು-ಶ್ರೀಮಂತರೂ ಕಡಿಮೆ-ಶ್ರೀಮಂತರೂ ಯಾವಾಗಲೂ ಇರುವರು. ಲೋಕದಲ್ಲೆಲ್ಲ ಗುತ್ತಿಗೆಗಳು ಸಿದ್ಧವಾದ ಘಟ್ಟದಲ್ಲಿ ನಿಧಿ-ಭಂಡವಳ ಕೂಟವು ಚಿಕ್ಕಪುಟ್ಟ ಭಂಡವಳಗಾರರ ಸ್ತೋಮದಿಂದ ಬಲು ದೂರ ಪ್ರತ್ಯೇಕಿಸಲ್ಪಟ್ಟಿತು. ಈ ಸರ್ವಾಧಿಪತ್ಯದ ಗುತ್ತಿಗೆಗಳು ತಮ್ಮನ್ನು ಹಿಂಡಿಹೊರಹಾಕುತ್ತಿವೆ-ಎಂದು ಚಿಕ್ಕ ಭಂಡವಳಗಾರರು ಭಾವಿಸುತ್ತಾರೆ. ಒಂದರ ಅನಂತರ ಒಂದಾಗಿ ಪ್ರತಿಯೊಂದು ವಿಷಯದಲ್ಲೂ-ಮೊದಮೊದಲು ವೈಯಕ್ತಿಕವಾಗಿ ಆಮೇಲೆ ಆಮೇಲೆ ಸಾಮೂಹಿಕವಾಗಿ-ಈ ವ್ಯಾಪಾರದ ಸರ್ವಾಧಿಪತಿಗಳ ಗಂಡಾಂತರವೇ ಮೊದಲಿನದು, ಎನ್ನತೊಡಗುತ್ತಾರೆ.

ನಿಧಿ-ಭಂಡವಳ ಕೂಟದಲ್ಲಿಷ್ಟು ಅತ್ಯಂತ ಉಗ್ರವಾದ ವಿಭಾಗ, ದೇಶದ ರಾಜಕೀಯ ಮತ್ತು ಆರ್ಥಿಕ ಸಂಘಟನೆಯನ್ನು ಪ್ರಕಾಶವಾಗಿ ವಶಪಡಿಸಿಕೊಂಡು ಫಾಸಿಸಮನ್ನು ಪ್ರದರ್ಶಿಸಿದಾಗ ಕಿರಿಯ ಭಂಡವಳಗಾರರೂ ಮಧ್ಯಮವರ್ಗಗಳೂ ಅವನ್ನು ವಿರೋಧಿಸುವ ಗುಂಪನ್ನು ಸೇರುವರು.

ವಿಷದಂಥ ಫಾಸಿಸ್ಟ್ ವಿಚಾರದಿಂದಾಗಿ, ಯೆಹೂದಿಯರಿಗೆ ವಿರುದ್ಧವಾದ ಅಪಪ್ರಚಾರದಿಂದಾಗಿ, ಕೂಲಿಗಾರವರ್ಗದಲ್ಲಿ ಅನೈಕ್ಯವಿದ್ದುದರಿಂದಾಗಿ ಜರ್ಮನಿಯಲ್ಲಿ ಚಿಕ್ಕಪುಟ್ಟ ಭಂಡವಳಗಾರರೂ ಮಧ್ಯಮವರ್ಗದವರೂ ಮೊದಮೊದಲು ಫಾಸಿಸ್ಟರಿಗೆ ಬೆಂಬಲವಿತ್ತರು. ಇಂಥ ಸ್ಥಿತಿಯಾದ ಮೇಲಾದರೂ ಕೊನೆಗೆ ಫಾಸಿಸ್ಟ್ ದೇಶದಲ್ಲಿ ಚಿಕ್ಕಪುಟ್ಟ ಭಂಡವಳಗಾರರೂ ಮಧ್ಯಮವರ್ಗಗಳೂ ಕೂಲಿಕಾರವರ್ಗದ ಜತೆಸೇರಿ ಸಮಾನ ಶತ್ರುವನ್ನು ಇದಿರಿಸಿದರು.

ಚೀನಾದ ಉದಾಹರಣೆಯನ್ನು ನೋಡೋಣ. ೧೯೨೬ರಲ್ಲಿ ವಿದೇಶೀಯ ಸಾಮ್ರಾಜ್ಯವಾದಿಗಳಿಗಿದಿರಾಗಿ ಕೂಲಿಕಾರವರ್ಗ ಭಂಡವಳಗಾರರ ಹಾಗೂ ಜಮೀನುದಾರರ ನೆರವು ಪಡೆದೇ ಹೋರಾಡಿತು. ೧೯೨೭ರಲ್ಲಿ ಚಿಯಾಂಗನ ನಾಯಕತ್ವದ ಕಾಮಿಂಟಾಂಗು ಆ ಐಕ್ಯರಂಗವನ್ನು ಮುರಿದು

ವಿದೇಶೀಯರೊಡನೆ ಒಪ್ಪಂದ ಮಾಡಿಕೊಂಡು ಸಮತಾವಾದವನ್ನು ಚೀನಾದಿಂದ ಅಳಿಸಿಬಿಡುವ ಧ್ಯೇಯದಿಂದ ಅಂತಃಕಲಹವನ್ನು ಆರಂಭಿಸಿತು. ಜಪಾನೀ ಆಕ್ರಮಣ ಆರಂಭವಾದಾಗ ಚೀನೀ ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಕೂಲಿಕಾರರೂ ಕೃಷಿಕರೂ ಕಾಮಿಂಟಾಂಗಿನೊಡನೆ ಒಪ್ಪಂದ ಮಾಡಿಕೊಂಡರು. ಕೂಲಿಕಾರ್ಮವರ್ಗಕ್ಕೆ ಜಪಾನರು ಪ್ರಮುಖ ಗಂಡಾಂತರವಾಗಿದ್ದುದೇ ಇದಕ್ಕೆ ಕಾರಣ. ಸ್ಪೇನಿನಲ್ಲೂ ಬಂಡಾಯಗಾರರಿಗೆ ಇದಿರಾಗಿ ಇಂಥದೇ ಐಕ್ಯರಂಗ ಸಾಧ್ಯವಾಯಿತು.

ಮಧ್ಯಮವರ್ಗವೆಂದರೆ ಯಾರೆಂಬುದು ಸ್ಪಷ್ಟವಾಗುವುದು ಅಗತ್ಯ. ಅದನ್ನೊಂದು ಆರ್ಥಿಕ ಪಂಗಡವಾಗಿ ಮಾರ್ಕ್ಸ್‌ವಾದ ಕಾಣುತ್ತದೆ. ಆ ವರ್ಗದಲ್ಲಿ ಭಂಡವಳಗಾರರೂ ಇಲ್ಲ, ಕೂಲಿಕಾರರೂ ಇಲ್ಲ. ಅವರೆಲ್ಲ ತಮ್ಮ ಜೀವನಕ್ಕಾಗಿ ತಾವು ದುಡಿಯುವ ಸ್ವತಂತ್ರ ಜನರು. ಈ ಮಧ್ಯಮವರ್ಗದಲ್ಲಿ ಮೇಲಿನ ಬದಿಯವರು ಮೆಲ್ಲಮೆಲ್ಲನೆ ಭಂಡವಳವರ್ಗವನ್ನು ಸಮಿಾಪಿಸಿರುತ್ತಾರೆ ಕೆಳಗಿನ ಬದಿಯವರು ಕೂಲಿಕಾರವರ್ಗದೊಡನೆ ಸಾಮಿಾಪ್ಯದಿಂದಿರುತ್ತಾರೆ. ಡಾಕ್ಟರು, ಶಿಲ್ಪಿ, ವಿಜ್ಞಾನಿ, ಸಂಗೀತಗಾರ, ಲೇಖಕರೂ ಈ ರೀತಿಯವರು. ಸರ್ವಾಧಿಪತ್ಯದ ಭಂಡವಳಗಾರರಿಗೂ ಇವರಿಗೂ ಸಂಬಂಧವಿಲ್ಲ.

ಬಹಳಮಟ್ಟಿಗೆ ಇವರ ಆರ್ಥಿಕ ಹಕ್ಕು—ಒಳ್ಳಿತುಗಳಿಗೂ ಕೂಲಿಕಾರವರ್ಗದ್ದಕ್ಕೂ ವ್ಯತ್ಯಾಸವಿಲ್ಲ. ಗುತ್ತಿಗೆಯ ಘಟ್ಟದಲ್ಲಿ ಭಂಡವಳವು ಫಾಸಿಸ್ಟ್ ವಾದವನ್ನು ಹಬ್ಬುವುದು; ಯುದ್ಧಕ್ಕೆ ಅಣಿ ಮಾಡುವುದು. ಇದನ್ನು ಕಂಡಾಗ ಮಧ್ಯಮವರ್ಗದ ಬೌದ್ಧಿಕ ಮತ್ತು ರಾಜಕೀಯ ದೃಷ್ಟಿಕೋನಕ್ಕೆ 'ಶಾಕ' ತಗಲುವುದು. ಕೂಲಿಕಾರವರ್ಗವನ್ನು ತಿಳಿದುಕೊಳ್ಳುವುದು ಅವರಿಗೆ ಸುಲಭವಾಗುವುದು.

ತಮ್ಮ ಒಳ್ಳಿತೂ ಅವರ ಒಳ್ಳಿತೂ ಒಂದೇ–ಎಂಬ ತಿಳಿವಳಿಕೆಯೇ 'ಜನತಾ ರಂಗ'ದ ತಳಹದಿ.

ಈ ಮಧ್ಯಮವರ್ಗಗಳು ಸಾಮ್ಯವಾದಿ ಸಮಾಜದ ಬೆಂಬಲಿಗರಾಗಿ ಆಗುವ ಬದಲಾವಣೆ, ಆರ್ಥಿಕ ಪದ್ಧತಿ ಬದಲಾದಾಗ ಮಾತ್ರ, ಸಾರ್ವತ್ರಿಕವಾಗುವುದು. ಕೂಲಿಕಾರವರ್ಗದ ಮಿತ್ರರ ಜೀವನ ಹೊಸ

ರೀತಿಯಲ್ಲಿ ಆರಂಭವಾಗುವುದು. ಸಮಾನ ವೈರಿಗಿದಿರಾಗಿ ಸಂಯುಕ್ತ ಸಮರ ನಡೆದಂತೆ ಕೂಲಿಕಾರವರ್ಗದ ಮಿತ್ರರು ತಿಳಿವಳಿಕೆ ಹೊಂದಿ ಮಾರ್ಕ್ಸ್‌ವಾದಿಗಳಾಗುವರು.

ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಬಗ್ಗೆ ಯಾದರೂ ಮಾರ್ಕ್ಸ್‌ವಾದಿ, ಸರಕಾರದ ಅಸ್ಪಷ್ಟ 'ತತ್ವ'ಗಳ ತಳಹದಿಯ ಮೇಲೆ ವಿಚಾರ ಮಾಡುವುದಿಲ್ಲ. ವರ್ಗ ಸಮರದ ಪ್ರತಿಯೊಂದು ಘಟ್ಟದಲ್ಲೂ ಆ ಬಗ್ಗೆ ವಿಚಾರಿಸುತ್ತಾನೆ. ಪಾರ್ಲಿಮೆಂಟು ಈ ಹೊತ್ತಿನಲ್ಲಿ, ಇಂಥ ದೇಶದಲ್ಲಿ, ಕೂಲಿಕಾರ ವರ್ಗವನ್ನು [ಮಾನವತೆಯನ್ನು] ಮುಂದಕ್ಕೊಯ್ಯಲು ನೆರವಾಗುತ್ತದೆಯೆ? ಇಲ್ಲವೆ ಅದರ ಪ್ರಗತಿಗೆ ಪ್ರತಿಬಂಧಕವಾಗುತ್ತದೆಯೆ? ಎಂದು ಮಾರ್ಕ್ಸ್‌ವಾದಿ ವಿಚಾರಿಸುತ್ತಾನೆ.

ಯುದ್ಧಾನಂತರ, ಆಳುವವರ್ಗವು ಕ್ಷೀಣವಾಗಿ ಸಂಘಟನೆಯಲ್ಲೂ ಚಟುವಟಿಕೆಯಲ್ಲೂ ಕೂಲಿಕಾರವರ್ಗ ಬೆಳೆದಾಗ ಪಾರ್ಲಿಮೆಂಟು ಕೂಲಿಕಾರರಿಗಿದಿರಾಗಿ ಕಾರ್ಯಾಚರಣೆಗೆ ಆರಂಭಿಸುತ್ತದೆ. ಆಗ ಮಾರ್ಕ್ಸ್‌ವಾದಿಗಳು ಪಾರ್ಲಿಮೆಂಟುಗಳ ಪ್ರತಿಗಾಮಿ ಸ್ವರೂಪವನ್ನು ಬಯಲಿಗೆಳೆಯುತ್ತಾರೆ. ಪ್ರಜಾಪ್ರಭುತ್ವಕ್ಕೆ ಅವರು ವಿರೋಧಿಗಳಾಗಿ ಹಾಗೆ ಮಾಡುವುದಿಲ್ಲ. ಅವರು ಪೂರ್ಣ ಪ್ರಜಾಪ್ರಭುತ್ವಕ್ಕಾಗಿ, ಭಂಡವಳಶಾಹಿಯ ಆಡಳಿತವನ್ನು ಕೊನೆಗಾಣಿಸಿ ಕೂಲಿಕಾರವರ್ಗದ ಆಡಳಿತವನ್ನು—ಸೋವಿಯೆಟುಗಳನ್ನು — ಸ್ಥಾಪಿಸಿ 'ಪ್ರಜಾಸತ್ತೆಯ ಯುದ್ಧವನ್ನು ಗೆಲ್ಲಲು' ಇಚ್ಛಿಸುವುದರಿಂದ, ಪಾರ್ಲಿಮೆಂಟುಗಳ ಪ್ರತಿಗಾಮಿ ನೀತಿಯನ್ನು ಬಯಲಿಗೆಳೆಯುವರು. ಪಾರ್ಲಿಮೆಂಟರಿ ಪದ್ಧತಿಯನ್ನು, ಭಂಡವಳಶಾಹಿಯ ಸರ್ವಾಧಿಕಾರತ್ವವನ್ನು ಉಳಿಸಲು ಇರುವ ಯತ್ನವೆನ್ನುವರು. ಫಾಸಿಸ್ಟ್‌ವಾದ ಬೆಳೆದಾಗ ಮಾತ್ರ ಪಾರ್ಲಿಮೆಂಟರಿ ಪದ್ಧತಿಯನ್ನು ರಕ್ಷಿಸುವುದು ಅಗತ್ಯವಾಗುವುದು.

ಯುದ್ಧದ ಬಗ್ಗೆ ಇರುವ ಮಾರ್ಕ್ಸ್‌ವಾದಿ ವಿಚಾರ ಸರಣಿಯೂ ಅದೇ: ಎಲ್ಲಾ ಸಮಯಗಳ ಎಲ್ಲಾ ಯುದ್ಧಗಳಿಗೂ ಅನ್ವಯಿಸಬಲ್ಲ ಅಸ್ಪಷ್ಟ ಸಾಮಾನ್ಯ ತತ್ವವಿಲ್ಲ. ಪ್ರಶ್ನೆಯೆಂದರೆ—ಈ ಯುದ್ಧ ಕೂಲಿಕಾರ ವರ್ಗದ ಪ್ರಗತಿಗೆ ಸಹಾಯಕವಾಗುತ್ತದೆಯೆ? ಅಲ್ಲ ಪ್ರತಿಬಂಧಕವಾಗು

ತ್ತದೆಯೆ? ಯುದ್ಧಗಳ ಮಾತಿನಲ್ಲೇ ಹೇಳುವುದಾದರೆ: ಈ ಯುದ್ಧ ದಿಂದಾಗಿ ಮುಂದೆ ಹೆಚ್ಚು ಯುದ್ಧಗಳಾಗುತ್ತವೆಯೇ? ಅಲ್ಲ, ಯುದ್ಧ ಗಳನ್ನು ಒಂದೊಮ್ಮೆಗೆ ನಿಲ್ಲಿಸುವ ಪ್ರಯತ್ನವಾಗುವುದೆ? ಈಗಿನ ಆಳುವ ವರ್ಗವನ್ನು ಸೋಲಿಸಲು ಆಗುವ ಅಂತರ್ಯುದ್ಧವೆಂದರೆ, ಕೂಲಿಕಾರ ವರ್ಗ ಮತ್ತದರ ಮಿತ್ರರ ಹೋರಾಟ, ಯುದ್ಧಗಳನ್ನೇ ನಿಲ್ಲಿಸಲು ಆಗುವ ಯತ್ನ. ಆದುದರಿಂದ ಅದು ನ್ಯಾಯುವಾದದ್ದು, ಅವಶ್ಯವಾದದ್ದು. ಪರತಂತ್ರ ಜನರ ಬಂಧವಿಮೋಚನೆ ಹೋರಾಟವೂ ನ್ಯಾಯುವಾದದ್ದೇ—ಅವಶ್ಯ ವಾದದ್ದೇ. ಅದು ಕೂಲಿಕಾರವರ್ಗದ ಪ್ರಗತಿಗೆ ನೆರವಾಗುವುದು; ಆಳುವ ವರ್ಗವನ್ನು ಬಲಗುಂದಿಸುವುದು.

ಆಕ್ರಮಣದ ಸಾಮ್ರಾಜ್ಯಶಾಹಿ ಯುದ್ಧಗಳ ವಿಷಯದಲ್ಲಿ ಮಾತೇ ಇಲ್ಲ; ಅಂಥ ಯುದ್ಧಗಳು ಅನ್ಯಾಯುವಾದುವು, ಆ ಸಾಮ್ರಾಜ್ಯಶಾಹಿ ರಾಷ್ಟ್ರದಲ್ಲಿ ಕೂಲಿಕಾರವರ್ಗ ಸಂಘಟಿತವಾಗಿ ಶಕ್ತವಾಗಿದ್ದರೆ, ಅದರ ಧೋರಣೆ ಒಂದೇ: ಆ ರಾಷ್ಟ್ರಕ್ಕೆ ಸೋಲನ್ನು ತರುವುದು; ಸಾಧ್ಯವಾದರೆ ಆಳುವವರ್ಗವನ್ನು ಉರುಳಿಸಲು ಆ ಪರಿಸ್ಥಿತಿಯನ್ನೇ ಉಪಯೋಗಿ ಸುವುದು. ಎರಡು ಸಾಮ್ರಾಜ್ಯಶಾಹಿಗಳೊಳಗೆ ಯುದ್ಧವಾಗುವಾಗಲೂ ಅದೇ ಧೋರಣೆ ಅನ್ವಯಿಸುವುದು. ಆಳುವವರ್ಗಕ್ಕೆ ನೆರವಾಗುವು ದೆಂದರೆ ತಮ್ಮ ಸುತ್ತಲಿರುವ ಸಂಕೋಲೆಯನ್ನು ಹೆಚ್ಚು ಬಲಗೊಳಿಸಿದಂತೆ. ಆ ಎರಡು ದೇಶಗಳಲ್ಲೂ ಕೂಲಿಕಾರವರ್ಗ ಸೋಲಾಗುವಂತೆ ಮಾಡಿ, ಸಾಧ್ಯವಾದರೆ ಆಳುವವರ್ಗವನ್ನು ಉರುಳಿಸಿ, ಅಧಿಕಾರ ವಹಿಸಲು ಯತ್ನಿಸಬೇಕು.

ಆದರೆ ಸಾಮ್ರಾಜ್ಯವಾದಿ ರಾಷ್ಟ್ರವೊಂದನ್ನು ಒಳಗೊಂಡಿರುವ ಪ್ರತಿ ಯೊಂದು ಯುದ್ಧವೂ ಆಕ್ರಮಣದ ಯುದ್ಧವಾಗಬೇಕೆಂದೇ ಇಲ್ಲ.

ಭಂಡವಳಶಾಹಿ ಪ್ರಜಾಪ್ರಭುತ್ವ ರಾಷ್ಟ್ರವೊಂದು ಫಾಸಿಸ್ಟ್ ಆಕ್ರಮ ಣಕ್ಕೆ ವಿರುದ್ಧವಾಗದ ಯುದ್ಧದಲ್ಲಿ ಭಾಗವಹಿಸಿದರೆ, ಕೂಲಿಕಾರವರ್ಗವು ಆಳುವವರ್ಗದ ಧೋರಣೆಯನ್ನು ಒಪ್ಪಿಕೊಂಡು ಸುಮ್ಮನಿರುವುದಿಲ್ಲ. ಯುದ್ಧವನ್ನು ನಿಜವಾದ ಜನಪ್ರತಿನಿಧಿ ಸರಕಾರವು ಸರಿಯಾಗಿ ನಡೆಸುವಂತೆ ಕೂಲಿಕಾರವರ್ಗ ನೋಡುವುದು. ಯುದ್ಧಕ್ಕೆ ಬೆಂಬಲ ಕೊಡುವುದರ

ಜತೆಯಲ್ಲೇ ಆಳುವವರ್ಗ, ವಿರೋಧಿಯಾದ ಫಾಸಿಸ್ಟ್ ರಾಷ್ಟ್ರದೊಡನೆ ಒಪ್ಪಂದಕ್ಕೆ ಬರದಂತೆ ಕೂಲಿಕಾರವರ್ಗ ಎಚ್ಚರವಹಿಸುವುದು. ಎಲ್ಲದ ಕ್ಕಿಂತಲೂ ಹೆಚ್ಚಾಗಿ ಕೂಲಿಕಾರವರ್ಗವು ಯುದ್ಧವನ್ನು ಗೆಲ್ಲಲು, ಫಾಸಿಸ ಮನ್ನು ಸೋಲಿಸಲು, ಯತ್ನಿಸುವುದು. ಇದರಿಂದ ಫಾಸಿಸ್ಟ್ ಮರ್ದನ ಮುಕ್ತಾಯವಾಗುವುದು, ಪ್ರತಿ ದೇಶದಲ್ಲೂ ತೀವ್ರ ಪ್ರಗತಿಯಾಗುವುದು.

ಮಿತ್ರರು ಯಾರೆಂಬ ವಿಷಯದಲ್ಲಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ವಿಚಾರದಲ್ಲಿ, ಯುದ್ಧದ ಪ್ರಶ್ನೆಯಲ್ಲಿ—ನಿಜವಾದ ಪರಿಸ್ಥಿತಿಯ ಪೃಥಕ್ಕರಣ ಮಾಡಿ ವರ್ಗಶಕ್ತಿಗಳ ಸಂಬಂಧವೇನೆಂದು ನೋಡುವುದು ಅತ್ಯವಶ್ಯವೆಂದು ಮಾರ್ಕ್ಸ್‌ವಾದ ಹೇಳುತ್ತದೆ. ಎಲ್ಲಾ ಕಡೆಯೂ ಅನ್ವಯಿಸುವ ಜಡ ತತ್ವಗಳಲ್ಲ; ಎಚ್ಚರಿಕೆಯ ಒಂದು ಪೃಥಕ್ಕರಣ ಮತ್ತು 'ಇಂತಹ ಘಟ್ಟದಲ್ಲಿ, ಇಂತಹ ಪರಿಸ್ಥಿತಿಯಲ್ಲಿ ಇದು ಕೂಲಿಕಾರರ ಪ್ರಗತಿಗೆ ನೆರವಾಗುವುದೆ? ತಡೆಯಾಗುವುದೆ?' ಎಂಬುದರ, ತಳಹದಿಯ ಮೇಲೆ ತಯಾರಿಸಲ್ಪಟ್ಟ ಧೋರಣೆ.

ಪ್ರಕೃತಿಯ ನಿಜಸ್ಥಿತಿಗಳನ್ನು ತಿಳಿದುಕೊಳ್ಳಲು ಇರುವ ಅವಶ್ಯ ವಾದ ಶಾಸ್ತ್ರೀಯ ವಿಧಾನ ಇದೊಂದೇ. ಮಾನವನು ಪ್ರಕೃತಿಯ ಅಂಶ ವಲ್ಲವೆಂದು, ಅವನು ಪ್ರಕೃತಿಗಿಂತ ಪ್ರತ್ಯೇಕವಾಗಿದ್ದು ಜೀವನ ಸತ್ಯಗಳಿ ಗಿಂತಲೂ ಹೆಚ್ಚು ಸರಿಯಾದ ಬಾಹ್ಯ–ನೈತಿಕ ತತ್ವಗಳಲ್ಲಿ ಒಳಪಟ್ಟಿರುವ ನೆಂದು ಭಾವಿಸುವವರಿಗೆ ಮಾತ್ರ ಮಾರ್ಕ್ಸ್‌ವಾದವನ್ನು ತಿಳಿದುಕೊಳ್ಳುವುದು ಕಷ್ಟಸಾಧ್ಯವೇ ಸರಿ.

ಸುತ್ತಲಿನ ವಸ್ತುಸ್ಥಿತಿಗಳನ್ನು ಗಮನಿಸದೆ, ಬಾಹ್ಯ ಪ್ರಕೃತಿಯ ನಿಯಮಗಳು ಅಸ್ಪಷ್ಟವಾದ ಕಾರ್ಯಾಚರಣೆ ಮಾಡುವುದಿಲ್ಲ. ಉಷ್ಣ, ಒತ್ತಡ, ಇತರ ವಸ್ತುಗಳ ಪ್ರಭಾವ–ಇವೆಲ್ಲ ಈ ನಿಯಮಗಳು ಕಾರ್ಯ ರೂಪಕ್ಕಿಳಿಯುವುದನ್ನು ನಿರ್ಧರಿಸುತ್ತವೆ. ಮಾನವ ಸಮಾಜದ ವಿಷಯ ದಲ್ಲಾದರೆ, ಅದರ ಅಸಂಖ್ಯ ವಿಭಿನ್ನತೆಗಳೂ ಸಾವಿರ ಸಂಖ್ಯೆಯ ಮಾನಸಿಕ ಹಾಗೂ ದೈಹಿಕ ಸಂಬಂಧಗಳೂ ಇರುತ್ತಾ, ಎಲ್ಲಾ ಸಂದರ್ಭಗಳಲ್ಲೂ ಸರಿಹೋಗುವ ಜಡ ಸ್ಥಿರ ನಿಯಮಗಳು ಅದಕ್ಕೆ ಅನ್ವಯಿಸಬಹುದೆಂದು ಆಶಿಸುವುದು ತೀರ ಅಶಾಸ್ತ್ರೀಯವಾದುದು.

ಸ್ಥಿರಕಾಲದ ತತ್ವಗಳಿಂದ ಹೊರಡುವ ಆ ಶಾಸ್ತ್ರೀಯ ದೃಷ್ಟಿಕೋನವೇ ಮಾನವ ಸಮಾಜಕ್ಕೆ ಅದು ಅನ್ವಯಿಸಲ್ಪಟ್ಟಾಗಲೆಲ್ಲ ಅನಾಹುತಗಳಿಗೆ ಕಾರಣವಾಗಿದೆ. ಜಡತತ್ವಗಳು ಯಾವಾಗಲೂ ಒಂದು ಕಾಲದ ಒಂದು ಸ್ಥಳದ ವರ್ಗಸ್ವಾರ್ಥದ ಪ್ರತಿಬಿಂಬ. ಅವು ಸದಾ ಕಾಲದ ಸತ್ಯಗಳೆಂದು ಭಾವಿಸಿದ್ದವರನ್ನು ಮಾರ್ಕ್ಸ್‌ವಾದ ಆ ತತ್ವದಿಂದ ಬಿಡುಗಡೆ ಮಾಡುತ್ತದೆ. ಹೀಗೆ ಬಿಡುಗಡೆ ಮಾಡುವುದರ ಜತೆಯಲ್ಲೇ ಮಾರ್ಕ್ಸ್‌ವಾದ ಅಖಿಲ ಮಾನವ ಸಮಾಜಕ್ಕೆ ಮುಂದಿನ ಹಾದಿಯನ್ನು ತೋರಿಸುತ್ತದೆ ಮತ್ತು ಕಾರ್ಯಾಚರಣೆಗಾಗಿ ಸೂಚನೆಗಳನ್ನು ಒದಗಿಸುತ್ತದೆ.

★